ಬುಧವಾರ, ಮಾರ್ಚ್ 1, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ ಹೋಳಿ ಹಬ್ಬದ ಪೂರ್ವಭಾವಿಯಾಗಿ ರಾಜಸ್ಥಾನದ ಜೈಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯುವತಿಯರು ನೃತ್ಯ ಪ್ರದರ್ಶಿಸಿದರು



ಲಿಂಗಾಯತ ಮತ ಬ್ಯಾಂಕ್ ಹಿಡಿದಿಡಲು ಬಿಜೆಪಿ ಕಸರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸದ ಕಾರಣ ವೀರಶೈವ– ಲಿಂಗಾಯತ ಮತ ಬ್ಯಾಂಕ್ ಪಕ್ಷದ ಕೈ ಹಿಡಿಯುತ್ತದೆಯೇ ಇಲ್ಲವೇ ಎಂಬ ಆತಂಕ ಬಿಜೆಪಿಯನ್ನು ಕಾಡಲಾರಂಭಿಸಿದೆ.

ಬಿಜೆಪಿಯಿಂದ ಈ ಸಮುದಾಯ ದೂರಸರಿಯಲೂ ಬಹುದು ಎಂಬ ಸುಳಿವು ಸಿಕ್ಕ ಬೆನ್ನಲ್ಲೇ ಎಚ್ಚೆತ್ತ ಪಕ್ಷದ ವರಿಷ್ಠರು ಬಿ.ಎಸ್.ಯಡಿಯೂರಪ್ಪ ಅವರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾರಂಭಿದ್ದಾರೆ. ಸಂಸದೀಯ ಮಂಡಳಿಯಲ್ಲಿ ಸದಸ್ಯ ಸ್ಥಾನ ನೀಡುವುದರ ಜತೆಗೆ, ರಾಜ್ಯದ ಉದ್ದಗಲ ಎಲ್ಲ ಕಾರ್ಯಕ್ರಮಗಳಲ್ಲಿ ಅವರನ್ನು ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ತೀರ್ಮಾನಿಸಲಾಗಿದೆ. ಅದರ ಭಾಗವಾಗಿಯೇ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣ ಉದ್ಘಾಟನಾ ಕಾರ್ಯಕ್ರಮದಲ್ಲೂ ಭಾಗವಹಿಸಿ, ಅವರನ್ನು ಆತ್ಮೀಯವಾಗಿ ಮತ್ತು ಹೆಚ್ಚಿನ ಗೌರವದಿಂದ ನಡೆಸಿಕೊಂಡರು ಎನ್ನಲಾಗಿದೆ.

ಒಂದು ವೇಳೆ ಯಡಿಯೂರಪ್ಪ ಅವರನ್ನು ಮೂಲೆಗುಂಪು ಮಾಡಿ, ಅವರ ಪುತ್ರ ವಿಜಯೇಂದ್ರ ಅವರಿಗೆ ಟಿಕೆಟ್ ನೀಡದೇ ಇದ್ದರೆ ಈ ಸಮುದಾಯ ಬಿಜೆಪಿಯಿಂದ ಪೂರ್ಣ ಪ್ರಮಾಣದಲ್ಲಿ ದೂರ ಸರಿಯುವ ಸಾಧ್ಯತೆ ಇದೆ ಎಂಬ ಮಾಹಿತಿಯೂ ವರಿಷ್ಠರನ್ನು ತಲುಪಿದೆ. ವೀರಶೈವ– ಲಿಂಗಾಯತ ಸಮುದಾಯದ ಅಸಮಾಧಾನವನ್ನು ತಣಿಸಲು ಎಚ್ಚರಿಕೆ ಹೆಜ್ಜೆ ಇಡುತ್ತಿರುವ ಪಕ್ಷದ ವರಿಷ್ಠರು ಈ ಮತ ಬ್ಯಾಂಕ್ ಅಲುಗಾಡದಿರುವಂತೆ ಮಾಡಲು ಶತಪ್ರಯತ್ನ ಹಾಕುತ್ತಿದ್ದಾರೆ.

ಈ ಸಮುದಾಯದ ಹೆಚ್ಚು ಮತ ಕಮಲದ ನೆರಳಿನಿಂದ ದೂರ ಸರಿದರೆ ಕಾಂಗ್ರೆಸ್ ಅನ್ನು ಪೂರ್ಣ ಪ್ರಮಾಣದಲ್ಲಿ ಬೆಂಬಲಿಸುವ ಸಾಧ್ಯತೆಯೂ ಇಲ್ಲ. ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿರುವ ಈ ಸಮುದಾಯಕ್ಕೆ ಸೇರಿದ ಪ್ರಬಲ ಅಭ್ಯರ್ಥಿಗಳಿಗೆ ಮಾತ್ರ ಮತ ಹಾಕುವ ಸಾಧ್ಯತೆ ಹೆಚ್ಚು. ಇದರಿಂದ ಕಮಲ ಪಾಳಯಕ್ಕೆ ನಷ್ಟ ಆಗಲಿದೆ ಎಂದು ಆ ಪಕ್ಷದ ಮುಖಂಡರೊಬ್ಬರು ಅಭಿಪ್ರಾಯಪಡುತ್ತಾರೆ.

‘ಬಸವರಾಜ ಬೊಮ್ಮಾಯಿ ಅವರು ಲಿಂಗಾಯತ ಸಮುದಾಯಕ್ಕೆ ಸೇರಿದ್ದರೂ, ಯಡಿಯೂರಪ್ಪ ಅವರ ಜಾಗವನ್ನು ತುಂಬಲು ಸಾಧ್ಯವಾಗಿಲ್ಲ. ಯಡಿಯೂರಪ್ಪ ಅವರು ರಾಜೀನಾಮೆ ಕೊಟ್ಟ ಬಳಿಕ ಲಿಂಗಾಯತ ಸಮುದಾಯಕ್ಕೆ ದೊಡ್ಡ ಪ್ರಮಾಣದ ಅನ್ಯಾಯವನ್ನೇನೂ ಬಿಜೆಪಿ ಮಾಡಿಲ್ಲ. ವೀರಶೈವ– ಲಿಂಗಾಯತ, ಪರಿಶಿಷ್ಟ ಜಾತಿ (ಎಡ), ಪರಿಶಿಷ್ಟವರ್ಗ, ಇತರ ಹಿಂದುಳಿದ ವರ್ಗದ ಮತಗಳನ್ನು ಭದ್ರಪಡಿಸಿಕೊಂಡರೆ ಹೆಚ್ಚಿನ ಸ್ಥಾನಗಳನ್ನು ಗೆಲ್ಲಬಹುದು ಚರ್ಚೆಯೂ ಪಕ್ಷದಲ್ಲಿ ನಡೆದಿದೆ’ ಎಂದು ತಿಳಿಸಿದರು.

ಜೆಡಿಎಸ್ ಪಾಲಿಗೆ ಕಗ್ಗಂಟಾದ ‘ರಕ್ಷಣೆ’ ಸೂತ್ರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಲಸೆ ರಾಜಕಾರಣದ ಭೀತಿಯಿಂದ ಪಕ್ಷವನ್ನು ಉಳಿಸಿಕೊಳ್ಳಲು ಆಯ್ದುಕೊಂಡಿದ್ದ ‘ಕುಟುಂಬ ರಾಜಕಾರಣ’ದ ಅಸ್ತ್ರ ಜೆಡಿಎಸ್ ವರಿಷ್ಠರನ್ನೇ ಇಕ್ಕಟ್ಟಿಗೆ ಸಿಲುಕಿಸುತ್ತಿದೆ. ಕುಟುಂಬದೊಳಗೆ ಹೆಚ್ಚುತ್ತಿರುವ ಆಕಾಂಕ್ಷಿಗಳ ಸಂಖ್ಯೆಯನ್ನು ನಿಯಂತ್ರಿಸಲು ಪಕ್ಷದ ನಾಯಕರು ಹೆಣಗಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಮಂಡ್ಯ, ರಾಮನಗರ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ ಅನಾಯಾಸವಾಗಿ ಗೆದ್ದು ಶಾಸಕರಾಗಿ ಆಯ್ಕೆಯಾದ ಕೆಲವರು ಅಲ್ಪಾವಧಿಯಲ್ಲೇ ಬೇರೆ ಪಕ್ಷಗಳಿಗೆ ವಲಸೆ ಹೋಗಿದ್ದರು. ಬಳಿಕ ಎಚ್.ಡಿ. ದೇವೇಗೌಡರ ಕುಟುಂಬದ ಸದಸ್ಯರನ್ನು ಸರಣಿ–ಯೋಪಾದಿಯಲ್ಲಿ ಚುನಾವಣಾ ಕಣಕ್ಕಿಳಿಸುವ ಪರಿಪಾಟ ಆರಂಭವಾಗಿತ್ತು. ಅವರ ಕುಟುಂಬದಲ್ಲೇ ಇಬ್ಬರು ಸಂಸದರು, ಮೂವರು ಶಾಸಕರು ಇದ್ದಾರೆ. ಹತ್ತಿರದ ಸಂಬಂಧಿಗಳಿಬ್ಬರು ಶಾಸಕರಾಗಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಕಣಕ್ಕಿಳಿಯಲು ಗೌಡರ ಕುಟುಂಬದ ಸದಸ್ಯರು, ಸಂಬಂಧಿಕರಲ್ಲಿ ಮತ್ತಷ್ಟು ಮಂದಿ ಸಜ್ಜಾಗಿದ್ದಾರೆ.

‘ಬೇರೆಯವರನ್ನು ಕರೆತಂದು ಟಿಕೆಟ್ ಕೊಟ್ಟು, ಚುನಾವಣೆಯಲ್ಲಿ ಗೆಲ್ಲಿಸಬಹುದು. ಆದರೆ, ಅವರು ಪಕ್ಷಾಂತರ ಮಾಡುವುದನ್ನು ತಡೆಯುವುದು ಕಷ್ಟ. ಹೀಗಾಗಿ ಪಕ್ಷವನ್ನು ಉಳಿಸಿಕೊಳ್ಳುವುದಕ್ಕಾಗಿ ಕುಟುಂಬದವರನ್ನೇ ಕಣಕ್ಕಿಳಿಸಿ, ಗೆಲ್ಲಿಸುತ್ತಿದ್ದೇವೆ’ ಎಂದು ‘ಕುಟುಂಬ ರಾಜಕಾರಣ’ದ ನಡೆಯನ್ನು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ 2018ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಸಮರ್ಥಿಸಿಕೊಂಡಿದ್ದರು. ಪಕ್ಷ ರಕ್ಷಿಸಿಕೊಳ್ಳಲು ಕುಟುಂಬ ರಾಜಕಾರಣ ಅನಿವಾರ್ಯ ಎಂಬ ಸೂತ್ರವನ್ನು ರಾಜಕೀಯ ಪಡಸಾಲೆಯಲ್ಲಿ ಚರ್ಚೆಗೆ ಬಿಟ್ಟಿದ್ದರು.

ಆರಂಭದ ಕೆಲವು ದಶಕಗಳ ಕಾಲ ಎಚ್.ಡಿ. ದೇವೇಗೌಡರ ಕುಟುಂಬದ ಬೆರಳೆಣಿಕೆಯ ಸದಸ್ಯರಷ್ಟೇ ಸಕ್ರಿಯ ರಾಜಕಾರಣದಲ್ಲಿದ್ದರು. ನಂತರ ಎಚ್.ಡಿ. ರೇವಣ್ಣ ಅಖಾಡಕ್ಕಿಳಿದು ಯಶಸ್ವಿಯಾಗಿದ್ದರು. ಬಳಿಕ ಎಚ್.ಡಿ. ಕುಮಾರಸ್ವಾಮಿ ರಾಜಕೀಯ ಪ್ರವೇಶಿಸಿ ಮುಖ್ಯಮಂತ್ರಿ ಹುದ್ದೆ ಏರಿದರು. ಅನಿತಾ ಕುಮಾರಸ್ವಾಮಿ ಅವರ ಪ್ರವೇಶದಿಂದ ಕುಟುಂಬ ರಾಜಕಾರಣ ಮತ್ತಷ್ಟು ವಿಸ್ತರಿಸಿಕೊಂಡಿತ್ತು. ಈಗ ರೇವಣ್ಣ ಮತ್ತು ಕುಮಾರಸ್ವಾಮಿ ಅವರ ಕುಟುಂಬದ ಎಲ್ಲ ಸದಸ್ಯರೂ ಸಕ್ರಿಯ ರಾಜಕಾರಣದಲ್ಲಿದ್ದಾರೆ. ಜತೆಯಲ್ಲೇ ‘ಕುಟುಂಬ ರಾಜಕಾರಣ’ವೇ ಜೆಡಿಎಸ್‌ನ ನಡೆಯನ್ನು ನಿರ್ಧರಿಸುವ ಸನ್ನಿವೇಶಗಳು ಈಗ ಗೋಚರಿಸುತ್ತಿವೆ.

ಹಾಸನ ಕ್ಷೇತ್ರವೇ ಕಗ್ಗಂಟು: ಭವಾನಿ ರೇವಣ್ಣ ಅವರು ಹಾಸನ ಕ್ಷೇತ್ರದ ಟಿಕೆಟ್‌ಗೆ ಪಟ್ಟು ಹಿಡಿಯುವುದರೊಂದಿಗೆ ‘ಕುಟುಂಬ ರಾಜಕಾರಣ’ದ ಸೂತ್ರ ಈಗ ಜೆಡಿಎಸ್ ಪಾಲಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಡಿಸೆಂಬರ್ ನಾಲ್ಕನೇ ವಾರದಲ್ಲೇ 93 ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಪಟ್ಟಿ ಪ್ರಕಟಿಸಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಕೆಲವೇ ದಿನಗಳೊಳಗೆ ಎರಡನೇ ಪಟ್ಟಿ ಪ್ರಕಟಿಸುವುದಾಗಿ ಹೇಳಿದ್ದರು. ಆದರೆ, ಹಾಸನ ಕ್ಷೇತ್ರದ ಅಭ್ಯರ್ಥಿ ಆಯ್ಕೆಯು ಜೆಡಿಎಸ್ ವರಿಷ್ಠರ ಕುಟುಂಬವನ್ನೇ ಇಕ್ಕಟ್ಟಿಗೆ ಸಿಲುಕಿಸಿದೆ.

‘ಇತರ ಕ್ಷೇತ್ರಗಳಲ್ಲಿ ಟಿಕೆಟ್‌ಗಾಗಿ ಪೈಪೋಟಿ ನಡೆಸಿದವರನ್ನು ಸಮಾಧಾನಪಡಿಸಿದಷ್ಟು ಸುಲಭವಾಗಿ ಹಾಸನ ಕ್ಷೇತ್ರದ ಸಮಸ್ಯೆ ಬಗೆಹರಿಯುತ್ತಿಲ್ಲ. ರೇವಣ್ಣ ಅವರ ಮಕ್ಕಳಾದ ಪ್ರಜ್ವಲ್ ಮತ್ತು ಸೂರಜ್ ತಾಯಿಯ ಬೆಂಬಲಕ್ಕೆ ಬಲವಾಗಿ ನಿಂತಿದ್ದಾರೆ. ಭವಾನಿ ಕೂಡ ಚುನಾವಣೆಗೆ ಸ್ಪರ್ಧಿಸುವ ನಿರ್ಧಾರದಿಂದ ಹಿಂದೆ ಸರಿಯುತ್ತಿಲ್ಲ. ಚುನಾವಣಾ ಕಣಕ್ಕಿಳಿಯಲು ದೇವೇಗೌಡರ ಕುಟುಂಬದ ಇನ್ನಷ್ಟು ಮಂದಿ ಬಯಸುತ್ತಿದ್ದಾರೆ. ಹಾಸನ ಕ್ಷೇತ್ರದ ಅಭ್ಯರ್ಥಿ ಆಯ್ಕೆಯನ್ನು ಆಧರಿಸಿ ಎಲ್ಲವೂ ನಿರ್ಧಾರ ಆಗಬಹುದು’ ಎನ್ನುತ್ತಾರೆ ಈ ಬೆಳವಣಿಗೆಗಳನ್ನು ಸಮೀಪದಿಂದ ಬಲ್ಲ ಜೆಡಿಎಸ್ ಮುಖಂಡರು.



ಸಂಬಂಧಿಗಳಲ್ಲೂ ಪೈಪೋಟಿ

ಎಚ್.ಡಿ. ದೇವೇಗೌಡರ ಬೀಗರಾದ ಡಿ.ಸಿ. ತಮ್ಮಣ್ಣ ಮತ್ತು ಗೌಡರ ಅಳಿಯ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರ ತಮ್ಮ ಸಿ.ಎನ್. ಬಾಲಕೃಷ್ಣ ಈಗ ಜೆಡಿಎಸ್‌ನಿಂದ ಶಾಸಕರಾಗಿದ್ದಾರೆ. ಈ ಇಬ್ಬರಲ್ಲದೆ ಇನ್ನೂ ಕೆಲವು ಸಂಬಂಧಿಕರು ಜೆಡಿಎಸ್‌ನಿಂದ ಕಣಕ್ಕಿಳಿಯಲು ಸಜ್ಜಾಗುತ್ತಿದ್ದಾರೆ.



ತನ್ವೀರ್ ಸೇಠ್ ಅವರ ಮನೆಯ ಮಹಡಿಯಿಂದ ಧುಮುಕಲು ಯತ್ನಿಸಿದ ಬೆಂಬಲಿಗರೊಬ್ಬರನ್ನು ಕಾರ್ಯಕರ್ತರು ತಡೆದರು

‘ಚುನಾವಣಾ ಪ್ರಚಾರಕ್ಕೆ ‘ಪಂಚ’ ಅಂಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂಬರುವ ಚುನಾವಣೆಯಲ್ಲಿ ಅನ್ನ, ಅಕ್ಷರ, ಆರೋಗ್ಯ, ಆಶ್ರಯ, ಅಭಿವೃದ್ಧಿ ಈ ಪಂಚ ಅಂಶಗಳನ್ನು ಇಟ್ಟುಕೊಂಡು ನಾವು ಪ್ರಚಾರ ಮಾಡುತ್ತೇವೆ. ಜೊತೆಗೆ, ಈಗಾಗಲೇ ಘೋಷಿಸಿದ ಗ್ಯಾರಂಟಿ ಯೋಜನೆಗಳನ್ನೂ ಪ್ರಚಾರ ಮಾಡುತ್ತೇವೆ’ ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ತಿಳಿಸಿದರು.



ಎಂ.ಬಿ ಪಾಟೀಲ

ಸಮಿತಿಯ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ನಾವು ಜನರ ಭಾವನೆ ಕೆರಳಿಸುವ ಬದಲು, ಬದುಕು ಕಟ್ಟಿಕೊಡುವ ಭರವಸೆಗಳನ್ನು ನೀಡಲಿದ್ದೇವೆ’ ಎಂದರು.

‘ಪಕ್ಷದ ಎಲ್ಲ ಮುಖಂಡರು ಸಭೆಯಲ್ಲಿ ಉತ್ತಮ ಸಲಹೆಗಳನ್ನು ನೀಡಿದ್ದಾರೆ. ಪದಾಧಿಕಾರಿಗಳಿಗೆ ನಿರ್ದಿಷ್ಟ ಜವಾಬ್ದಾರಿ ನೀಡುತ್ತೇವೆ. ಕೆಪಿಸಿಸಿ ಮತ್ತು ಪ್ರಚಾರ ಸಮಿತಿ ಒಂದು ತಂಡವಾಗಿ ಕೆಲಸ ಮಾಡಲಿದೆ. ಕಾಂಗ್ರೆಸ್ ಪಕ್ಷದ ಸಾಧನೆ, ಬಿಜೆಪಿ ಸರ್ಕಾರದ ವೈಫಲ್ಯಗಳ ಮಾಹಿತಿಯ ಕಿರುಹೊತ್ತಿಗೆ ಬಿಡುಗಡೆ ಮಾಡಿ, ಅದನ್ನು ಜಿಲ್ಲಾ ಸಮಿತಿಯಿಂದ ಬೂತ್ ಸಮಿತಿವರೆಗೆ ಸದಸ್ಯರನ್ನು ಹೊಂದಾಣಿಕೆ ಮಾಡಿ ಮನೆ ಮನೆಗೆ ತಲುಪಿಸುತ್ತೇವೆ’ ಎಂದೂ ಹೇಳಿದರು.


‘ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಸೇರಿದಂತೆ ನಮ್ಮಲ್ಲಿ ಸಾಕಷ್ಟು ಸ್ಟಾರ್ ಪ್ರಚಾರಕರಿದ್ದಾರೆ. ಇಷ್ಟು ದಿನ ಸ್ಟಾರ್ ಪ್ರಚಾರಕರನ್ನು ಮಾತ್ರ ಇಟ್ಟುಕೊಂಡು ಪ್ರಚಾರ ಕೆಲಸ ಮಾಡಲಾಗುತ್ತಿತ್ತು. ಅವರ ಜೊತೆಗೆ, ಇದೇ ಮೊದಲ ಬಾರಿಗೆ ಪದಾಧಿಕಾರಿಗಳನ್ನು ಒಳಗೊಂಡಂತೆ ಜಿಲ್ಲಾಮಟ್ಟದಲ್ಲಿ ತಂಡ ರಚಿಸಲಾಗಿದೆ’ ಎಂದರು.

‘ಬಿಜೆಪಿಯವರು ರಾಜ್ಯದಲ್ಲಿ ದಿವಾಳಿಯಾಗಿದ್ದಾರೆ. ಅವರಿಗೆ ರಾಜ್ಯದಲ್ಲಿ ನಾಯಕತ್ವವಿಲ್ಲ. ಯಡಿಯೂರಪ್ಪ ಅವರನ್ನು ಮೂಲೆಗುಂಪು ಮಾಡಿರುವ ಕಾರಣ ಮೋದಿ, ಅಮಿತ್ ಶಾ, ನಡ್ಡಾ ಅವರನ್ನು ಕರೆಸಬೇಕಿದೆ. ನಮ್ಮಲ್ಲಿ ಮೋದಿ ಮ್ಯಾಜಿಕ್ ನಡೆಯುವುದಿಲ್ಲ’ ಎಂದರು.

‘ಕಾಂಗ್ರೆಸ್ ನಿಜಲಿಂಗಪ್ಪ, ವೀರೇಂದ್ರ ಪಾಟೀಲ, ಖರ್ಗೆ ಅವರಿಗೆ ಅಪಮಾನ ಮಾಡಿದೆ’ ಎಂಬ ಮೋದಿ ಹೇಳಿಕೆ ಬಗ್ಗೆ ಕೇಳಿದಾಗ, ‘ಇದು ಮೋದಿ ಅವರ ಕೀಳುಮಟ್ಟದ ಗಿಮಿಕ್’ ಎಂದು ಪ್ರತಿಕ್ರಿಯಿಸಿದರು.

ಮಾರ್ಚ್ 5ರಿಂದ ಪ್ರಚಾರ ಅಖಾಡಕ್ಕೆ ಖರ್ಗೆ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇದೇ 5ರಂದು ಪಕ್ಷದ ಚುನಾವಣಾ ಪ್ರಚಾರದ ಅಖಾಡಕ್ಕೆ ಇಳಿಯಲಿದ್ದಾರೆ. ಅಂದು ತುಮಕೂರು ಜಿಲ್ಲೆಯ ಕೊರಟಗೆರೆಯಲ್ಲಿ ನಡೆಯಲಿರುವ ಪಕ್ಷದ ‘ಪ್ರಜಾಧ್ವನಿ’ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಅಲ್ಲದೆ, ಅಲ್ಲಿ ಅವರು ಪಕ್ಷದ ಕಚೇರಿಯನ್ನೂ ಉದ್ಘಾಟಿಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.



ಮಲ್ಲಿಕಾರ್ಜುನ ಖರ್ಗೆ

ಮತದಾರರ ಓಲೈಕೆಗಾಗಿ ಈಗಾಗಲೇ ಆಕರ್ಷಕ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿರುವ ಕೆಪಿಸಿಸಿ, ‘ಸ್ಟಾರ್ ಪ್ರಚಾರಕರ’ ಮೂಲಕ ಈ ಘೋಷಣೆಗಳಿಗೆ ಭರ್ಜರಿ ಪ್ರಚಾರ ನೀಡಲು ಮುಂದಾಗಿದೆ. ಖರ್ಗೆಯವರ ಮೂಲಕ ಚುನಾವಣಾ ಪ್ರಚಾರಕ್ಕೆ ಇನ್ನಷ್ಟು ಮೆರುಗು ನೀಡಲು ರಾಜ್ಯ ‘ಕೈ’ ನಾಯಕರು ನಿರ್ಧರಿಸಿದ್ದಾರೆ.

ಭಾಸ್ಕರ್ ರಾವ್ ಇಂದು ಬಿಜೆಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ಐಪಿಎಸ್ ಅಧಿಕಾರಿ ಹಾಗೂ ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಉಪಾಧ್ಯಕ್ಷ ಭಾಸ್ಕರ್ ರಾವ್ ಅವರು ಬುಧವಾರ ಬಿಜೆಪಿ ಸೇರಲಿದ್ದಾರೆ.

ಈ ಹಿನ್ನೆಲೆಯಲ್ಲಿ ಅವರು ಕಂದಾಯ ಸಚಿವ ಆರ್.ಅಶೋಕ ಅವರನ್ನು ಮಂಗಳವಾರ ಭೇಟಿ ಮಾಡಿದ್ದರು. ಬಳಿಕ ಬಿಜೆಪಿ ಕಚೇರಿಯಲ್ಲಿ ರಾಜ್ಯ ಬಿಜೆಪಿ ಚುನಾವಣಾ ಸಹ ಉಸ್ತುವಾರಿ ಅಣ್ಣಾಮಲೈ ಸೇರಿ ಹಲವು ನಾಯಕರ ಜತೆ ಮಾತುಕತೆ ನಡೆಸಿದರು.

‘ನಾನು ನಾಳೆಯೇ ಬಿಜೆಪಿಗೆ ಸೇರಲಿದ್ದೇನೆ’ ಎಂದು ಭಾಸ್ಕರ ರಾವ್, ‘ಪ್ರಜಾವಾಣಿ’ಗೆ ತಿಳಿಸಿದರು. ಚುನಾವಣೆ ಸ್ಪರ್ಧಿಸುವ ಉದ್ದೇಶದಿಂದ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು. ಬಳಿಕ ಎಎಪಿಗೆ ಸೇರ್ಪಡೆಗೊಂಡಿದ್ದರು.

ಚುನಾವಣಾ ರಾಜಕೀಯದಿಂದ ನಿವೃತ್ತಿ: ಶಾಸಕ ತನ್ವೀರ್ ಸೇಠ್

ಮೈಸೂರು: ‘ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಚುನಾವಣಾ ರಾಜಕೀಯದಿಂದ ನಿವೃತ್ತಿಯಾಗುತ್ತಿದ್ದು, ಈ ಬಗ್ಗೆ ಪಕ್ಷದ ವರಿಷ್ಠರಿಗೆ ಪತ್ರ ಬರೆದಿದ್ದೇನೆ’ ಎಂದು ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಹೇಳಿದರು.



ತನ್ವೀರ್ ಸೇಠ್

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ, ‘2019ರ ನವೆಂಬರ್‌ನಲ್ಲಿ ನಡೆದ ಹಲ್ಲೆಯಿಂದ ಆರೋಗ್ಯದ ಮೇಲೆ ಪರಿಣಾಮ ಬೀರಿದ್ದು, ಇನ್ನೂ ಚೇತರಿಸಿಕೊಂಡಿಲ್ಲ. ಅನಾರೋಗ್ಯದ ಕಾರಣ ಸ್ಪರ್ಧಿಸುವುದಿಲ್ಲ’ ಎಂದರು.

‘ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿಯೇ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದೆ. ಯಾವ ನಿರ್ಧಾರವನ್ನೂ ಕೈಗೊಳ್ಳದಂತೆ, ಯಾರಿಗೂ ಹೇಳದಂತೆ ಸೂಚಿಸಿದ್ದರು’ ಎಂದು ಹೇಳಿದರು.

ಕಾರ್ಯಕರ್ತರ ವಿರೋಧ: ವಿಷಯ ತಿಳಿಯುತ್ತಿದ್ದಂತೆ ಶಾಸಕರ ನಿವಾಸಕ್ಕೆ ದೌಡಾಯಿಸಿದ ಬೆಂಬಲಿಗರು, ಅವರ ನಿರ್ಧಾರಕ್ಕೆ ತೀವ್ರ ವಿರೋಧವ್ಯಕ್ತಪಡಿಸಿದರು. ಕಾರ್ಯಕರ್ತರೊಬ್ಬರು ಮನೆ ಮೇಲೆ ಹತ್ತಿ ಜಿಗಿಯಲು ಯತ್ನಿಸಿದಾಗ ಉಳಿದವರು ತಡೆದರು.

ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ರಸೂಲ್ ಎಂಬುವರನ್ನು ಪೊಲೀಸರು ತಡೆದರು. ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಆರ್. ಮೂರ್ತಿ, ಶಿವಣ್ಣ ಶಾಸಕರ ನಿವಾಸಕ್ಕೆ ಧಾವಿಸಿ, ನಿರ್ಧಾರ ಕೈಬಿಡುವಂತೆ ಅವರ ಮನವೊಲಿಸಲು ಯತ್ನಿಸಿದರು.

ಬಿಜೆಪಿ: ಮಾ.4ರಿಂದ ಫಲಾನುಭವಿಗಳ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರ್ಚ್ 4ರಿಂದ 20ರವರೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಫಲಾನುಭವಿಗಳ ಸಮಾವೇಶ ಆಯೋಜಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಮಾರ್ಚ್ 4ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

ಸಚಿವರಾದ ಎಸ್.ಟಿ. ಸೋಮಶೇಖರ್, ಕೆ. ಗೋಪಾಲಯ್ಯ, ಆನಂದ್ ಸಿಂಗ್ ಮತ್ತು ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ವೈ.ಎ. ನಾರಾಯಣಸ್ವಾಮಿ ಅವರೊಂದಿಗೆ ಮಂಗಳವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸರ್ಕಾರ ಜಾರಿಗೊಳಿಸುವ ವಿವಿಧ ಯೋಜನೆಗಳ ಅನುಕೂಲವನ್ನು ಲಕ್ಷಾಂತರ ಕುಟುಂಬಗಳು ಪಡೆದಿವೆ. ಪ್ರತಿ ಮನೆಗೂ ನಮ್ಮ ಸರ್ಕಾರದ ಯೋಜನೆಗಳು ತಲುಪಿವೆ. ಸರ್ಕಾರ ಮಾಡಿರುವ ಕೆಲಸಗಳ ಕುರಿತು ಫಲಾನುಭವಿಗಳ ಜತೆ ಮಾಹಿತಿ ಹಂಚಿಕೊಳ್ಳುವ ಉದ್ದೇಶದಿಂದ ಸಮಾವೇಶಗಳನ್ನು ಆಯೋಜಿಸಲಾಗುವುದು’ ಎಂದರು.

ಕೇಂದ್ರ ಮತ್ತು ರಾಜ್ಯದಲ್ಲಿರುವ ಬಿಜೆಪಿ ಸರ್ಕಾರಗಳ ಯೋಜನೆಗಳು ಫಲಾನುಭವಿಗಳನ್ನು ಸರಿಯಾಗಿ ತಲುಪಿವೆಯೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ ಸಮಾವೇಶ ಆಯೋಜಿಸಲು ನಿರ್ಧರಿಸಲಾಗಿದೆ. ರಾಜ್ಯದ ಎಲ್ಲ 31 ಜಿಲ್ಲೆಗಳಲ್ಲೂ ಸಮಾವೇಶಗಳನ್ನು ನಡೆಸಲಾಗುವುದು. ಕೇಂದ್ರ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಈ ಸಮಾವೇಶಗಳು ನಡೆಯಲಿವೆ ಎಂದು ತಿಳಿಸಿದರು.

ಪ್ರಧಾನಮಂತ್ರಿ ಆವಾಸ್ ಯೋಜನೆ, ಆಯುಷ್ಮಾನ್ ಭಾರತ– ಆರೋಗ್ಯ ಕರ್ನಾಟಕ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್, ರೈತ ವಿದ್ಯಾನಿಧಿ ವಿದ್ಯಾರ್ಥಿ ವೇತನ, ಮತ್ಸ್ಯ ಸಿರಿ ಸೇರಿದಂತೆ ಹಲವು ಮಹತ್ವದ ಯೋಜನೆಗಳು ಈ ಸರ್ಕಾರದ ಅವಧಿಯಲ್ಲಿ ಅನುಷ್ಠಾನಗೊಂಡಿವೆ. ಈ ಯೋಜನೆಗಳಿಂದ ಜನರ ಬದುಕಿನಲ್ಲಿ ಆಗಿರುವ ಬದಲಾವಣೆಗಳನ್ನು ಗುರುತಿಸುವುದು ಈ ಅಭಿಯಾನದ ಮುಖ್ಯ ಗುರಿ ಎಂದರು.

ಇಲಾಖಾ ಮಾಹಿತಿಗೆ ತಡಬಡಾಯಿಸಿದ ಸಚಿವ ಆಚಾರ್

ಫಲಾನುಭವಿಗಳ ಸಮಾವೇಶದ ಕುರಿತು ಮಾತನಾಡುತ್ತಿದ್ದಾಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿನ ಯೋಜನೆಗಳು, ಫಲಾನುಭವಿಗಳ ವಿವರ ಒದಗಿಸುವಂತೆ ಪತ್ರಕರ್ತರು ಕೇಳಿದಾಗ ಸಚಿವ ಹಾಲಪ್ಪ ಆಚಾರ್ ತಡಬಡಾಯಿಸಿದರು.

‘ಎಲ್ಲ ಮಾಹಿತಿಯನ್ನೂ ಆಯಾ ಜಿಲ್ಲಾ ಉಸ್ತುವಾರಿ ಸಚಿವರೇ ನೀಡುತ್ತಾರೆ. ನನ್ನ ಬಳಿ ಈಗ ಹೆಚ್ಚು ಮಾಹಿತಿ ಇಲ್ಲ’ ಎಂದು ಪತ್ರಿಕಾಗೋಷ್ಠಿ ಅಂತ್ಯಗೊಳಿಸಿದರು.

‘ಗೋರಕ್ಷಕರು– ಗೋಹಂತಕರ ಪರ ಇರುವವರ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ವಿಧಾನಸಭಾ ಚುನಾವಣೆ ಗೋರಕ್ಷಕರು ಮತ್ತು ಗೋಹತ್ಯೆ ಪರ ಇರುವವರ ಮಧ್ಯದ ಹೋರಾಟ ಎಂದು ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ ಹೇಳಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ ಗೋಹತ್ಯೆ ನಿಷೇಧ ಕಾಯ್ದೆಯನ್ನು ರದ್ದು ಮಾಡುವುದಾಗಿ ಪದೇ ಪದೇ ಹೇಳುತ್ತಿದೆ. ಇದು ಕಾಂಗ್ರೆಸ್‌ನ ಮನಸ್ಥಿತಿಗೆ ಸಾಕ್ಷಿ ಎಂದು ಅವರು ಹೇಳಿದರು.

‘ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಗೋಹತ್ಯೆಯನ್ನು ನಿಲ್ಲಿಸಿದೆ. ಹಿಂದೆ ಕಾಂಗ್ರೆಸ್ ಅವಧಿಯಲ್ಲಿ ಗೋಹತ್ಯೆ ಅವ್ಯಾಹತವಾಗಿ ನಡೆಯುತ್ತಿತ್ತು. ನಮ್ಮ ಸರ್ಕಾರ ಗೋವುಗಳ ರಕ್ಷಣೆಯ ಜೊತೆಗೆ ಹಿಂದು ಪರಂಪರೆ ಮತ್ತು ಸಂಪ್ರದಾಯದ ರಕ್ಷಣೆಯನ್ನೂ ಮಾಡಿದೆ’ ಎಂದರು.

‘ಗೋವುಗಳು ಮತ್ತು ಶ್ರೀಮಂತ ಭಾರತೀಯ ಸಂಸ್ಕೃತಿಯನ್ನು ನಾಶ ಮಾಡುವ ಬಗ್ಗೆ ಕಾಂಗ್ರೆಸ್ ನಾಯಕರು ಹೆಚ್ಚಿನ ಆಸಕ್ತಿ ಹೊಂದಿದ್ದಾರೆ. ಬಿಜೆಪಿ ಸರ್ಕಾರ ಹೈನುಗಾರಿಕೆಯಲ್ಲಿ ಕ್ರಾಂತಿ ಮಾಡಿದೆ. ಆದರೆ, ಗೋಸಂಪತ್ತಿನ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷದ ಕೊಡುಗೆ ಏನು’ ಎಂದು ಪ್ರಶ್ನಿಸಿದ ಅವರು, ‘ಕಸಾಯಿಖಾನೆಗಳನ್ನು ನಡೆಸಿಕೊಂಡು ಬಂದಿದ್ದೇ ಕಾಂಗ್ರೆಸ್ ನಾಯಕರ ಸಾಧನೆಯಾಗಿದೆ. ಜನ ತಮ್ಮನ್ನು ಮರೆತು ಬಿಡುತ್ತಾರೆ ಎನ್ನುವ ಕಾರಣಕ್ಕೆ ಗೋಹತ್ಯೆ ನಿಷೇಧ ವಾಪಸ್ ಮಾಡುವುದಾಗಿ ಹೇಳಿಕೊಂಡು ತಿರುಗಾಡುತ್ತಿದ್ದಾರೆ’ ಎಂದು ಸಚಿವರು ಹೇಳಿದರು.

ಕೋವಿಡ್: ತಜ್ಞರಿಂದ ನ್ಯಾನೊ ಲಸಿಕೆ ಅಭಿವೃದ್ಧಿ

ನವದೆಹಲಿ (ಪಿಟಿಐ): ದೇಹದಲ್ಲಿನ ಪ್ರತಿಕಾಯ ಕೋಶಗಳನ್ನೇ ಬಳಸಿಕೊಂಡು ಅಭಿವೃದ್ಧಿಪಡಿಸಿರುವ ಕೋವಿಡ್ ವಿರುದ್ಧದ ನ್ಯಾನೊ ವ್ಯಾಕ್ಸಿನ್, ಇಲಿಗಳ ಮೇಲೆ ನಡೆಸಿರುವ ಪ್ರಯೋಗದಲ್ಲೂ ಯಶಸ್ವಿಯಾಗಿದೆ ಎಂದು ಅಧ್ಯಯನ ವರದಿ ಹೇಳಿದೆ.

ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಸಂಶೋಧಕರು ನಡೆಸಿರುವ ಈ ಪ್ರಯೋಗದಿಂದ ಕೋವಿಡ್ ವಿರುದ್ಧ ಹೊಸದಾದ ಮತ್ತು ನೈಸರ್ಗಿಕವಾದ ಅಸ್ತ್ರವೊಂದು ಸಿಕ್ಕಂತಾಗಿದೆ. ‘ಕೋವಿಡ್ ತಡೆಗಟ್ಟಲು ಮುಂದಿನ ಪೀಳಿಗೆಯ ಲಸಿಕೆ ಉತ್ಪಾದನೆಯ ಕಡೆಗೆ ಒಂದು ಹೆಜ್ಜೆ ಮುಂದಿಟ್ಟಿದ್ದೇವೆ’ ಎಂದು ಅಧ್ಯಯನ ತಂಡವು ಹೇಳಿದೆ.

ಈ ಸಂಶೋಧನಾ ವರದಿಯು ಎಸಿಎಸ್ ಬಯೋ-ಮೆಟೀರಿಯಲ್ಸ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್ ಜರ್ನಲ್‌ನಲ್ಲಿ ಪ್ರಕಟವಾಗಿದೆ.

‘ಪ್ರಸ್ತುತ ಬಳಕೆಯಲ್ಲಿರುವ ಲಸಿಕೆಗಳಿಗಿಂತ ಇದು ಭಿನ್ನವಾಗಿದೆ. ಇದರಲ್ಲಿ ಆ್ಯಂಟಿಜೆನ್ ಉತ್ಪತ್ತಿಗೆ ಸಂಶ್ಲೇಷಿತ ವಸ್ತುಗಳು ಅಥವಾ ಅಡೆನೊವೈರಸ್ ಅನ್ನು ಬಳಸಲಾಗಿದೆ. ಸ್ವಾಭಾವಿಕವಾದ ನ್ಯಾನೊ ವ್ಯಾಕ್ಸಿನ್ ಪ್ರಸ್ತುತ ಅನುಮೋದಿತ ಲಸಿಕೆಗಳಿಗಿಂತಲೂ ಹಲವು ಅನುಕೂಲಗಳನ್ನು ಹೊಂದಿದೆ. ಕೋವಿಡ್ ವಿರುದ್ಧ ಹೋರಾಡುವ ಪ್ರತಿಕಾಯಗಳನ್ನೂ ಹೊಂದಿದೆ. ಸದ್ಯದ ಲಸಿಕೆಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯೂ ಆಗಿದೆ’ ಎಂದು ಅಧ್ಯಯನ ವರದಿ ಹೇಳಿದೆ.

ನ್ಯಾನೊ ಲಸಿಕೆಯು ರಕ್ತ ಹೆಪ್ಪುಗಟ್ಟುವಿಕೆಯ ಸಾಧ್ಯತೆಗಳನ್ನು ತಗ್ಗಿಸಲಿದೆ ಎನ್ನುವುದು ಪ್ರಯೋಗದಲ್ಲಿ ದೃಢಪಟ್ಟಿದೆ. ಈ ಲಸಿಕೆಯು ಕೋವಿಡ್‌ನಿಂದ ಆಗುವ ಮುಂದಿನ ಹಂತದ ಸೋಂಕನ್ನು ತಡೆಯುತ್ತದೆ. ಡೆಂಗ್ಯೂನಂತಹ ಇತರ ಸಾಂಕ್ರಾಮಿಕಗಳ ವಿರುದ್ಧವೂ ಪ್ರತಿರಕ್ಷಣೆಯಾಗಿಯೂ ಬಳಸಬಹುದು ಎಂದು ದೆಹಲಿ ಐಐಟಿಯ ಬಯೋಮೆಡಿಕಲ್ ಎಂಜಿನಿಯರಿಂಗ್ ಕೇಂದ್ರದ ಪ್ರಾಧ್ಯಾಪಕರಾದ ಜಯಂತಾ ಭಟ್ಟಾಚಾರ್ಯ ಹೇಳಿದ್ದಾರೆ.

ಶಾಲೆಗಳಲ್ಲಿ ಗುಜರಾತಿ ಭಾಷೆಯಲ್ಲಿ ಬೋಧನೆ: ಮಸೂದೆಗೆ ಅಂಗೀಕಾರ

ಗಾಂಧಿನಗರ (ಪಿಟಿಐ): ಸಿಬಿಎಸ್‌ಇ, ಐಸಿಎಸ್‌ಇ ಮತ್ತು ಐಬಿ ಮಂಡಳಿಗಳಿಂದ ಮಾನ್ಯತೆ ಹೊಂದಿರುವ ಶಾಲೆಗಳೂ ಸೇರಿದಂತೆ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲೂ ಕಡ್ಡಾಯವಾಗಿ ಗುಜರಾತಿ ಭಾಷೆ ಬೋಧಿಸುವ ಮಸೂದೆಯನ್ನು ಗುಜರಾತ್ ವಿಧಾನಸಭೆ ಮಂಗಳವಾರ ಸರ್ವಾನುಮತದಿಂದ ಅಂಗೀಕರಿಸಿದೆ.

ಯಾವುದಾದರೂ ಶಾಲೆಯು ‘ಗುಜರಾತಿ ಭಾಷೆ ಕಡ್ಡಾಯ ಬೋಧನೆ ಮತ್ತು ಕಲಿಕೆ ಮಸೂದೆ–2023’ ರ ನಿಬಂಧನೆಗಳನ್ನು ಒಂದು ವರ್ಷಕ್ಕಿಂತಲೂ ಅಧಿಕ ಕಾಲ ಉಲ್ಲಂಘಿಸಿರುವುದು ಕಂಡುಬಂದರೆ ಅಂತಹ ಶಾಲೆಯ ಮಾನ್ಯತೆ ರದ್ದುಪಡಿಸುವಂತೆ ಸರ್ಕಾರವು ಸಂಬಂಧಪಟ್ಟ ಮಂಡಳಿ ಅಥವಾ ಸಂಸ್ಥೆಗೆ ನಿರ್ದೇಶನ ನೀಡಬಹುದಾಗಿದೆ.

ಗುಜರಾತ್‌ನ ಶಿಕ್ಷಣ ಸಚಿವ ಕುಬೇರ್‌ಭಾಯ್ ದಿಂಡೋರ್ ಅವರು ಸದನದಲ್ಲಿ ಮಸೂದೆಯನ್ನು ಮಂಡಿಸಿದರು. ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕರು ಸೇರಿದಂತೆ ಸದನದಲ್ಲಿ ಹಾಜರಿದ್ದ 182 ಮಂದಿ ಸದಸ್ಯರೂ ಇದನ್ನು ಸರ್ವಾನುಮತದಿಂದ ಅಂಗೀಕರಿಸಿದರು.

ಸದ್ಯ ಗುಜರಾತಿ ಭಾಷೆಯನ್ನು ಬೋಧಿಸದಿರುವ ಶಾಲೆಗಳು 2023–24ನೇ ಶೈಕ್ಷಣಿಕ ವರ್ಷದಿಂದ 1ರಿಂದ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಗುಜರಾತಿಯನ್ನು ಹೆಚ್ಚುವರಿ ಭಾಷೆಯಾಗಿ ಬೋಧಿಸಬೇಕು. ಮಸೂದೆ ಪ್ರಕಾರ ₹ 50 ಸಾವಿರ ದಂಡ ಪಾವತಿಸಬೇಕಾಗುತ್ತದೆ. ನಂತರದ ಉಲ್ಲಂಘನೆಗೆ ₹1 ಲಕ್ಷ ದಿಂದ ₹2 ಲಕ್ಷದ ವರೆಗೆ ದಂಡ ವಿಧಿಸಲಾಗುತ್ತದೆ.

ಕೇರಳ ವಿಧಾನಸಭೆ: ಇ.ಡಿ ವರದಿ ಪ್ರಸ್ತಾಪ– ಗದ್ದಲ

ತಿರುವನಂತಪುರ (ಪಿಟಿಐ): ‘ಲೈಫ್ ಮಿಷನ್’ ಪ್ರಕರಣ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ (ಇ.ಡಿ) ವರದಿಯನ್ನು ವಿರೋಧ ಪಕ್ಷಗಳ ಮೈತ್ರಿಕೂಟ ಯುಡಿಎಫ್ ಪ್ರಸ್ತಾಪಿಸಿದ್ದು ಕೇರಳ ವಿಧಾನಸಭೆಯಲ್ಲಿ ಮಂಗಳವಾರ ಗದ್ದಲಕ್ಕೆ ಕಾರಣವಾಯಿತು.

ನಿಲುವಳಿ ಸೂಚನೆ ಮೇಲಿನ ಚರ್ಚೆ ವೇಳೆ, ಕಾಂಗ್ರೆಸ್ ಶಾಸಕ ಮ್ಯಾಥ್ಯೂ ಕುಳಲ್‌ನಾಥನ್ ಅವರು ಈ ವರದಿಯಲ್ಲಿ ಅಂಶಗಳನ್ನು ಓದುತ್ತಿದ್ದಂತೆಯೇ, ಆಡಳಿತ ಪಕ್ಷದ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಗದ್ದಲ ಜೋರಾಗುತ್ತಿದಂತೆಯೇ, ಸ್ಪೀಕರ್ ಎ.ಎನ್.ಶಂಶೀರ್ ಅವರು ಕೆಲ ಹೊತ್ತು ಕಲಾಪವನ್ನು ಮುಂದೂಡಿದರು.

ಪ್ರಕರಣ ಕುರಿತು ಇ.ಡಿ ಸಲ್ಲಿಸಿರುವ ಈ ವರದಿಯಲ್ಲಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ವಿರುದ್ಧ ಕೆಲ ಆರೋಪಗಳನ್ನು ಹೊರಿಸಲಾಗಿದೆ.

ಪಿಣರಾಯಿ ವಿಜಯನ್ ಅವರ ಮುಖ್ಯ ಕಾರ್ಯದರ್ಶಿಯಾಗಿದ್ದ ಎಂ.ಶಿವಶಂಕರ್ ಅವರು ಇದೇ ಪ್ರಕರಣಕ್ಕೆ ಸಂಬಂಧಿಸಿ ಇ.ಡಿ ತನಿಖೆ ಎದುರಿಸುತ್ತಿದ್ದಾರೆ.



ಧ್ವನಿ ಬೆಳಕಿನಾಟ... ಬ್ರಿಟನ್ ಸೇನೆಯು ಭಾರತ ತೊರೆದ 75ನೇ ವರ್ಷಾಚರಣೆಯ ಅಂಗವಾಗಿ ಮಂಗಳವಾರ ಮುಂಬೈನ ಗೇಟ್ ವೇ ಆಫ್ ಇಂಡಿಯಾದಲ್ಲಿ ಧ್ವನಿ ಮತ್ತು ಬೆಳಕು ಪ್ರದರ್ಶನ ಏರ್ಪಡಿಸಲಾಗಿತ್ತು – ಎಎಫ್‌ಪಿ ಚಿತ್ರ

ರೈಲು ನಿಲ್ದಾಣಗಳ ವಿನ್ಯಾಸ: ಏಕರೂಪತೆಗೆ ಕೇಂದ್ರ ಚಿಂತನೆ

ನವದೆಹಲಿ: ಅಮೃತ್ ಭಾರತ್ ಸ್ಟೇಷನ್ ಯೋಜನೆಯ ಅಡಿಯಲ್ಲಿ ನವೀಕರಣಗೊಳಿಸಲು ಯೋಜಿಸಿರುವ 1,275 ರೈಲು ನಿಲ್ದಾಣಗಳ ವಿನ್ಯಾಸದಲ್ಲಿ ಏಕರೂಪತೆ ತರಲು ಭಾರತೀಯ ರೈಲ್ವೆಯು ಚಿಂತನೆ ನಡೆಸಿದೆ.

ಈ ರೈಲು ನಿಲ್ದಾಣಗಳಲ್ಲಿ ಸೌಲಭ್ಯಗಳನ್ನು ಹೆಚ್ಚಿಸುವ ಸಲುವಾಗಿ ‘ಮಾಸ್ಟರ್ ಪ್ಲಾನ್’ ರೂಪಿಸಲು ರೈಲ್ವೆಯು ಸಿದ್ಧತೆ ನಡೆಸುತ್ತಿದೆ. ಈ ಯೋಜನೆಯ ಅಡಿಯಲ್ಲಿ ರೈಲು ನಿಲ್ದಾಣಕ್ಕಿರುವ ರಸ್ತೆಯನ್ನು ವಿಸ್ತರಿಸಲು ಮತ್ತು ರೈಲು ನಿಲ್ದಾಣಗಳಲ್ಲಿ ವಾಹನ ನಿಲುಗಡೆಗೆ ಸೌಲಭ್ಯ ಕಲ್ಪಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ವಿಯೆಟ್ನಾಂಗೆ ಕಳಪೆ ಔಷಧಿ ರಫ್ತು ಮಾಡಿದ ಪ್ರಕರಣ

ಮೈಡೇನ್ ಕಂಪನಿಯ ಇಬ್ಬರಿಗೆ ಜೈಲು

ನವದೆಹಲಿ (ರಾಯಿಟರ್ಸ್): ದಶಕದ ಹಿಂದೆ ವಿಯೆಟ್ನಾಂಗೆ ಕಳಪೆ ಔಷಧಿಗಳನ್ನು ರಫ್ತು ಮಾಡಿದ್ದಕ್ಕಾಗಿ ಮೈಡೇನ್ ಫಾರ್ಮಾಸ್ಯುಟಿಕಲ್ಸ್ ಕಂಪನಿಯ ಇಬ್ಬರು ಕಾರ್ಯನಿರ್ವಾಹಕರಿಗೆ ಭಾರತೀಯ ನ್ಯಾಯಾಲಯವು ಎರಡೂವರೆ ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಈ ಕಂಪನಿಯ ಕೆಮ್ಮಿನ ನಾಲ್ಕು ಸಿರಪ್‌ಗಳು ಗ್ಯಾಂಬಿಯಾದಲ್ಲಿ ಡಜನ್‌ಗಟ್ಟಲೆ ಮಕ್ಕಳ ಸಾವಿಗೆ ಕಾರಣವಾಗಿರಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದ ಬಳಿಕ, ಭಾರತವು ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಉತ್ಪಾದನಾ ಮಾನದಂಡಗಳ ಉಲ್ಲಂಘನೆ ಆರೋಪದ ಮೇರೆಗೆ ಮೈಡೇನ್ ಫಾರ್ಮಾಸ್ಯುಟಿಕಲ್ಸ್‌ನಲ್ಲಿ ಉತ್ಪಾದನೆಯನ್ನು ಸ್ಥಗಿತಗೊಳಿಸಿತ್ತು.

ಮುಖ್ಯಾಂಶಗಳು

- ಇಬ್ಬರು ಕಾರ್ಯನಿರ್ವಾಹಕರಿಗೆ ಎರಡೂವರೆ ವರ್ಷಗಳ ಜೈಲು ಶಿಕ್ಷೆ
- ಇಬ್ಬರಿಗೂ ತಲಾ ₹ 1 ಲಕ್ಷ ದಂಡ
- 2014ರಿಂದ ಕಂಪನಿ ವಿರುದ್ಧ ತನಿಖೆ

ಗ್ಯಾಂಬಿಯಾದಲ್ಲಿ ಮಕ್ಕಳ ಸಾವಿಗೆ ತನ್ನ ಔಷಧಿಗಳ ದೋಷ ಕಾರಣ ಎಂಬುದನ್ನು ಕಂಪನಿ ನಿರಾಕರಿಸಿದೆ. ಅಲ್ಲದೆ ಭಾರತೀಯ ಸರ್ಕಾರಿ ಪ್ರಯೋಗಾಲಯದಲ್ಲಿ ನಡೆಸಿದ ಪರೀಕ್ಷೆಗಳಲ್ಲಿ ಯಾವುದೇ ವಿಷಕಾರಿ ಅಂಶಗಳು ಪತ್ತೆಯಾಗಿಲ್ಲ ಎಂದು ತಿಳಿಸಿದೆ.

ಕಳಪೆ ಗುಣಮಟ್ಟದ ಔಷಧಗಳನ್ನು ವಿಯೆಟ್ನಾಂಗೆ ರಫ್ತು ಮಾಡಿದ ಕಾರಣಕ್ಕೆ ಮೈಡೇನ್ ಫಾರ್ಮಾಸ್ಯುಟಿಕಲ್ಸ್ ಕಂಪನಿಯ ಸಂಸ್ಥಾಪಕ ನರೇಶ್ ಕುಮಾರ್ ಗೋಯಲ್ ಮತ್ತು ತಾಂತ್ರಿಕ ನಿರ್ದೇಶಕ ಎಂ.ಕೆ.ಶರ್ಮಾ ಅವರಿಗೆ ಜೈಲು ಶಿಕ್ಷೆ ವಿಧಿಸಿ ನ್ಯಾಯಾಧೀಶ ಸಂಜೀವ್ ಆರ್ಯ ಅವರು ಕಳೆದ ವಾರ ಆದೇಶ ಹೊರಡಿಸಿದ್ದಾರೆ.

ಆದೇಶದ ಪ್ರತಿಯನ್ನು ಈ ವಾರ ಆನ್‌ಲೈನ್‌ನಲ್ಲಿ ಪೋಸ್ಟ್ ಮಾಡಲಾಗಿದ್ದು, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಮಾರ್ಚ್ 23ರವರೆಗೆ ಕಾಲಾವಕಾಶ ನೀಡಲಾಗಿದೆ. ‘ರಾನಿಟಿಡಿನ್ ಟ್ಯಾಬ್ಲೆಟ್ಸ್ ಬಿ.ಪಿ’ (ಮ್ಯಾಂಟೆಕ್-150) ಎಂಬ ಔಷಧಿಯನ್ನು ವಿಯೆಟ್ನಾಂಗೆ ರಫ್ತು ಮಾಡಿದ್ದಕ್ಕಾಗಿ ಇಬ್ಬರಿಗೂ ತಲಾ ₹ 1,00,000 ದಂಡವನ್ನು ನ್ಯಾಯಾಲಯ ವಿಧಿಸಿದೆ.

ಗುಣಮಟ್ಟದ ಉಲ್ಲಂಘನೆಗಾಗಿ ಮೈಡೇನ್ ಸೇರಿದಂತೆ ಭಾರತದ ಕೆಲವು ಕಂಪನಿಗಳನ್ನು ವಿಯೆಟ್ನಾಂ ಕಪ್ಪುಪಟ್ಟಿಗೆ ಸೇರಿಸಿದೆ ಎಂದು ಅಲ್ಲಿನ ಭಾರತೀಯ ಕಾನ್ಸುಲೇಟ್ ಕಚೇರಿಯು ಭಾರತೀಯ ಔಷಧ ಮಹಾನಿಯಂತ್ರಕರ ಕಚೇರಿಯ ಗಮನಕ್ಕೆ ತಂದಿತ್ತು. ಆ ಬಳಿಕ ಭಾರತೀಯ ಅಧಿಕಾರಿಗಳು 2014ರಲ್ಲಿ ಕಂಪನಿಯ ವಿರುದ್ಧ ತನಿಖೆ ಆರಂಭಿಸಿದ್ದರು.

ಕಪ್ಪುಪಟ್ಟಿಯಲ್ಲಿ ಅಮೆರಿಕ ಪತ್ರಕರ್ತ: ಕೇಂದ್ರದ ನಿಲುವು ಕೇಳಿದ ಹೈಕೋರ್ಟ್

ನವದೆಹಲಿ (ಪಿಟಿಐ): ಸಾಗರೋತ್ತರ ಭಾರತೀಯ ಪ್ರಜೆ (ಒಸಿಐ) ಗುರುತಿನ ಚೀಟಿ ಹೊಂದಿರುವುದರ ಹೊರತಾಗಿಯೂ ಅಮೆರಿಕದ ಪತ್ರಕರ್ತರೊಬ್ಬರನ್ನು ಭಾರತವು ಕಪ್ಪುಪಟ್ಟಿಗೆ ಸೇರಿಸಿದೆ ಎನ್ನಲಾದ ಆರೋಪದ ಕುರಿತು ನಿಲುವು ತಿಳಿಸುವಂತೆ ಕೇಂದ್ರ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ಮಂಗಳವಾರ ಹೇಳಿದೆ.

ಭಾರತ ಪ್ರವೇಶವನ್ನು ನಿರಾಕರಿಸಿದ್ದನ್ನು ಪ್ರಶ್ನಿಸಿ ಅಮೆರಿಕದ ವೈಸ್ ನ್ಯೂಸ್ ಸಂಸ್ಥೆಯ ಪತ್ರಕರ್ತ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಗೆ ಕೇಂದ್ರ ಸರ್ಕಾರವು ಪ್ರತಿಕ್ರಿಯೆ ನೀಡಿತ್ತು. ಪತ್ರಕರ್ತನನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ ಎಂದು ಆಗ ತಿಳಿದುಬಂತು ಎಂದು ಪತ್ರಕರ್ತನ ಪರ ವಕೀಲ ಅಂಗಾದ್ ಸಿಂಗ್ ಕೋರ್ಟ್‌ಗೆ ಹೇಳಿದ್ದಾರೆ.

ಪತ್ರಕರ್ತನಿಗೆ ಭಾರತ ಪ್ರವೇಶವನ್ನು ರದ್ದುಗೊಳಿಸಿರುವುದು ಅಕ್ರಮ ಮತ್ತು ಸಂವಿಧಾನದ ವಿಧಿ 14, 21 ಮತ್ತು 25ರ ಉಲ್ಲಂಘನೆಯಾಗಿದೆ ಎಂದು ಅರ್ಜಿದಾರರ ಪರ ವಕೀಲರು ಅರ್ಜಿಯಲ್ಲಿ ನಮೂದಿಸಿದ್ದಾರೆ.

ಪತ್ರಕರ್ತರು ಈ ಹಿಂದೆ ಸಲ್ಲಿಸಿದ್ದ ಅರ್ಜಿಗೆ ಕೇಂದ್ರ ಸರ್ಕಾರವು ಆಗಲೇ ಪ್ರತಿಕ್ರಿಯೆ ನೀಡಿತ್ತು. ‘ಪತ್ರಕರ್ತರ ವೀಸಾ’ ಪಡೆಯಲು ಅರ್ಜಿದಾರರು ಸಲ್ಲಿಸಿದ್ದ ವೀಸಾ ಅರ್ಜಿಯಲ್ಲಿ ವಾಸ್ತವಾಂಶಗಳನ್ನು ಮರೆಮಾಚಲಾಗಿತ್ತು ಮತ್ತು ಕೆಲ ನಿಯಮಗಳನ್ನು ಉಲ್ಲಂಘಿಸಲಾಗಿತ್ತು ಎಂದು ಹೇಳಿತ್ತು. ಮುಂದಿನ ವಿಚಾರಣೆಯನ್ನು ಮಾರ್ಚ್ 17ಕ್ಕೆ ನಿಗದಿಪಡಿಸಲಾಗಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚುನಾವಣೆಗೆ ಹಿಂದೂ ಮಹಾಸಭಾ ಸ್ಪರ್ಧೆ

ಬೆಂಗಳೂರು: 'ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ ಎಲ್ಲ ಕ್ಷೇತ್ರಗಳಿಂದಲೂ ನಮ್ಮ ಅಭ್ಯರ್ಥಿಗಳು ಸ್ಪರ್ಧಿಸುತ್ತಾರೆ' ಎಂದು ಅಖಿಲ ಭಾರತ ಹಿಂದೂ ಮಹಾಸಭಾ (ಕರ್ನಾಟಕ) ಉಪಾಧ್ಯಕ್ಷ ಭಾಸ್ಕರ್ ಪೂಜಾರಿ ತಿಳಿಸಿದರು.

ಎಚ್‌.ಡಿ. ದೇವೇಗೌಡ ಆಸ್ಪತ್ರೆಗೆ ದಾಖಲು

ಬೆಂಗಳೂರು: ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರು ತೀವ್ರವಾದ ಕಾಲು ನೋವಿನ ಕಾರಣದಿಂದ ನಗರದ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕಾಲು ನೋವಿಗೆ ಸಂಬಂಧಿಸಿದಂತೆ ತಪಾಸಣೆಗಾಗಿ ಅವರು ಮಂಗಳವಾರ ಮಧ್ಯಾಹ್ನ ಆಸ್ಪತ್ರೆಗೆ ತೆರಳಿದ್ದರು. ಕೆಲವು ಪರೀಕ್ಷೆಗಳನ್ನು ನಡೆಸುವ ಅಗತ್ಯವಿರುವುದರಿಂದ ಆಸ್ಪತ್ರೆಗೆ ದಾಖಲಾಗುವಂತೆ ವೈದ್ಯರು ಸಲಹೆ ನೀಡಿದ್ದರು. ಹೀಗಾಗಿ ಅವರು ಆಸ್ಪತ್ರೆಯಲ್ಲೇ ಇದ್ದಾರೆ. ಬುಧವಾರ ಮನೆಗೆ ವಾಪಸಾಗಲಿದ್ದಾರೆ ಎಂದು ಗೌಡರ ಆಪ್ತ ಮೂಲಗಳು ತಿಳಿಸಿವೆ.

ಮಗುವಿನ ಭೇಟಿ ಹಕ್ಕು: ಆಯೋಗಕ್ಕೆ ಅಧಿಕಾರವಿಲ್ಲ

ಬೆಂಗಳೂರು: 'ಪಾಲಕರಿಗೆ ಮಗುವಿನ ಭೇಟಿಯ ಹಕ್ಕು ಕಲ್ಪಿಸುವ ಅಧಿಕಾರ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಇಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ಆಯೋಗದ ಕ್ರಮವನ್ನು ಪ್ರಶ್ನಿಸಿ ಮಗುವಿನ ತಾಯಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದ್ದು, ಅರ್ಜಿದಾರ ಮಹಿಳೆಯ ಪತಿಗೆ ಮಗುವಿನ ಭೇಟಿ ಹಕ್ಕು ನೀಡಿ 2017ರ ಜು. 7ರಂದು ಆಯೋಗ ಹೊರಡಿಸಿದ್ದ ಆದೇಶ ರದ್ದುಪಡಿಸಿದೆ.

'ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಒಂದು ಸಲಹಾ ಸಂಸ್ಥೆಯಾಗಿದೆ. ಅದು ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ನೀತಿ ನಿರ್ಧಾರಗಳನ್ನು ರೂಪಿಸಲು ಸರ್ಕಾರಕ್ಕೆ ಸಲಹೆ, ಸೂಚನೆಯನ್ನಷ್ಟೇ ನೀಡಬಹುದು. ಹೊರತು, ಯಾವುದೇ ತೀರ್ಪುಗಳನ್ನು ನೀಡುವ ಅಥವಾ ಪಕ್ಷಗಾರರ ನಡುವಿನ ವ್ಯಾಜ್ಯ ನಿರ್ಣಯಿಸುವ ಅಧಿಕಾರವನ್ನು ಹೊಂದಿರುವುದಿಲ್ಲ' ಎಂದಿದೆ. 'ಮಗುವಿನ ಸುಪರ್ದಿಗೆ ಸಂಬಂಧಿಸಿದ ವ್ಯಾಜ್ಯ ಸಕ್ಷಮ ವಿಚಾರಣೆಗೆ ಬಾಕಿ ಇರುವಾಗ ಆಯೋಗವು ಮಗುವಿನ ಭೇಟಿಯ ಹಕ್ಕನ್ನು ಮಂಜೂರು ಮಾಡಿ ಆದೇಶಿಸಲು ಸಾಧ್ಯವಿಲ್ಲ. ಇದು ಕಾನೂನುಬಾಹಿರ' ಎಂದು ವಿವರಿಸಲಾಗಿದೆ.

ಪಂಪ ಪ್ರಶಸ್ತಿ: ಸಿ.ಪಿ.ಕೃಷ್ಣಕುಮಾರ್, ಡಾ.ಎಸ್.ಆರ್.ರಾಮಸ್ವಾಮಿ ಗೈರು

ಘೋಷಣೆ ಮೂವರಿಗೆ; ಪ್ರದಾನ ಒಬ್ಬರಿಗೆ

ಪ್ರಜಾವಾಣಿ ವಾರ್ತೆ

ಬನವಾಸಿ (ಮಯೂರವರ್ಮ ವೇದಿಕೆ): ರಾಜ್ಯ ಸರ್ಕಾರ ನೀಡುವ 2021–22ನೇ ಸಾಲಿನ ಪಂಪ ಪ್ರಶಸ್ತಿಯನ್ನು ಮಂಗಳವಾರ ಇಲ್ಲಿ ನಡೆದ ಕದಂಬೋತ್ಸವದ ಉದ್ಘಾಟನೆ ಕಾರ್ಯಕ್ರಮದಲ್ಲಿ ಬರಹಗಾರ ಡಾ.ಬಾಬು ಕೃಷ್ಣಮೂರ್ತಿ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರದಾನ ಮಾಡಿದರು.

ಎರಡು ವರ್ಷಗಳಿಂದ ಉತ್ಸವ ನಡೆಯದ ಕಾರಣ ಮೂವರಿಗೆ ಪ್ರದಾನ ಮಾಡಲು ನಿರ್ಧರಿಸಲಾಗಿತ್ತು. 2020–21ನೇ ಸಾಲಿಗೆ ಪ್ರಶಸ್ತಿಗೆ ಆಯ್ಕೆಯಾದ ಸಾಹಿತಿ ಪ್ರೊ. ಸಿ.ಪಿ.ಕೃಷ್ಣಕುಮಾರ್, 2022–23ನೇ ಸಾಲಿಗೆ ಆಯ್ಕೆಯಾದ ಡಾ.ಎಸ್.ಆರ್.ರಾಮಸ್ವಾಮಿ ಅವರು ಪ್ರಶಸ್ತಿ ಸ್ವೀಕರಿಸಬೇಕಿತ್ತು. ಆದರೆ ಇಬ್ಬರೂ ಗೈರಾಗಿದ್ದರು.



2021–22ನೇ ಸಾಲಿನ 'ಪಂಪ ಪ್ರಶಸ್ತಿ'ಯನ್ನು ಸಾಹಿತಿ ಬಾಬು ಕೃಷ್ಣಮೂರ್ತಿ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರದಾನ ಮಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಕೋಟ ಶ್ರೀನಿವಾಸ ಪೂಜಾರಿ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಸಚಿವರಾದ ಶಿವರಾಮ ಹೆಬ್ಬಾರ, ಗೋವಿಂದ ಕಾರಜೋಳ, ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ಧಿ, ಗ್ರಾಮೀಣಾಭಿವೃದ್ಧಿ ಪಂಚಾಯತರಾಜ್ ವಿಕೇಂದ್ರೀಕರಣ ಸಮಿತಿ ಉಪಾಧ್ಯಕ್ಷ ಪ್ರಮೋದ ಹೆಗಡೆ ಇದ್ದಾರೆ –ಪ್ರಜಾವಾಣಿ ಚಿತ್ರ

'ಕದಂಬೋತ್ಸವದ ಮುನ್ನಾ ದಿನ ರಾತ್ರಿ 11 ಗಂಟೆಗೆ ಪ್ರಶಸ್ತಿ ಘೋಷಣೆಯಾಗಿದ್ದು ತಿಳಿಯಿತು. ಕಾರ್ಯಕ್ರಮಕ್ಕೆ ಆಗಮಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳು ವಿನಂತಿಸಿದ್ದರು' ಎಂದು ಪ್ರಶಸ್ತಿ ಪುರಸ್ಕೃತ ಡಾ.ಬಾಬು ಕೃಷ್ಣಮೂರ್ತಿ ಭಾಷಣದಲ್ಲಿ ಹೇಳಿದರು.



ನೃತ್ಯರೂಪಕ...

ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ ಮಂಗಳವಾರ ನಡೆದ ಕದಂಬೋತ್ಸವದಲ್ಲಿ ವಿದುಷಿ ಮಾನಸಿ ಸುಧೀರ್ ಹಾಗೂ ಸಹ ಕಲಾವಿದರಿಂದ ನೃತ್ಯರೂಪಕ ನಡೆಯಿತು –ಪ್ರಜಾವಾಣಿ ಚಿತ್ರ

ನೇಪಾಳ: ಸಂಪುಟ ಪುನರ್‌ರಚನೆಗೆ ನಿರ್ಧಾರ

ಕಠ್ಮಂಡು (ಪಿಟಿಐ): ಮೈತ್ರಿಕೂಟ ನೇತೃತ್ವದ ಸರ್ಕಾರದಿಂದ ಮೂರು ಅಂಗಪಕ್ಷಗಳು ಹೊರನಡೆದ ಕಾರಣ, ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಲ್ (ಪ್ರಚಂಡ) ಅವರು ಸಚಿವ ಸಂಪುಟ ಪುನರ ರಚನೆಗೆ ಮುಂದಾಗಿದ್ದಾರೆ.

ಮೂರು ಪಕ್ಷಗಳು ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗದುಕೊಂಡ ಪರಿಣಾಮ, 16 ಸಚಿವ ಸ್ಥಾನಗಳು ತೆರವಾಗಿವೆ. ಈ ಬೆಳವಣಿಗೆಯಿಂದಾಗಿ ದುರ್ಬಲಗೊಂಡಿರುವ ಮೈತ್ರಿಕೂಟದ ಏಕತೆಯನ್ನು ಕಾಪಾಡುವ ಸವಾಲು ಪ್ರಧಾನಿ ಪ್ರಚಂಡ ಅವರ ಮುಂದಿದ್ದು, ಇದೇ ಕಾರಣಕ್ಕಾಗಿ ಅವರು ಸಂಪುಟ ಪುನರರಚನೆಯ ಕಸರತ್ತು ನಡೆಸುತ್ತಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಎರಡನೇ ಅತಿ ದೊಡ್ಡ ಪಕ್ಷವಾದ ಸಿಪಿಎನ್–ಯುಎಂಎಲ್, ಪ್ರಚಂಡ ನೇತೃತ್ವದ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಸೋಮವಾರ ಹಿಂಪಡೆದಿತ್ತು. ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲಿ ನೇಪಾಳಿ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸುವ ಪ್ರಚಂಡ ಅವರ ನಿರ್ಧಾರದಿಂದ ಅಸಮಾಧಾನಗೊಂಡಿದ್ದ ಸಿಪಿಎನ್–ಯುಎಂಎಲ್ ಸರ್ಕಾರದಿಂದ ಹೊರ ನಡೆಯಿತು. ಮತ್ತೊಂದು ಅಂಗಪಕ್ಷ ರಾಷ್ಟ್ರೀಯ ಪ್ರಜಾತಂತ್ರ ಪಾರ್ಟಿ (ಆರ್‌ಪಿಪಿ) ಸಹ ಸರ್ಕಾರದಿಂದ ಹೊರನಡೆದಿದೆ.

ರಾಷ್ಟ್ರೀಯ ಸ್ವತಂತ್ರ ಪಾರ್ಟಿ (ಆರ್‌ಎಸ್‌ಪಿ) ಕೂಡ ಇದೇ ಹಾದಿ ತುಳಿದಿದ್ದರೂ, ಸರ್ಕಾರಕ್ಕೆ ಬಾಹ್ಯಬೆಂಬಲ ನೀಡುವುದಾಗಿ ಹೇಳಿದೆ. ಹೀಗಾಗಿ, ಮೈತ್ರಿಕೂಟದಲ್ಲಿ ಸದ್ಯ ನಾಲ್ಕು ಪಕ್ಷಗಳು ಉಳಿದಂತಾಗಿದೆ.

ಈಗ, ಪ್ರಧಾನಿ ಪ್ರಚಂಡ ಅವರು ನೇಪಾಳಿ ಕಾಂಗ್ರೆಸ್ ಹಾಗೂ ಇತರ ಆರು ಪಕ್ಷಗಳೊಂದಿಗೆ ಕೈಜೋಡಿಸಿದ್ದಾರೆ. ಈ ಪಕ್ಷಗಳಿಗೆ ಸಂಪುಟದಲ್ಲಿ ಸ್ಥಾನ ನೀಡುವ ಮೂಲಕ ಸರ್ಕಾರವನ್ನು ಭದ್ರಪಡಿಸುವ ಸೂತ್ರಕ್ಕೆ ಪ್ರಚಂಡ ಮೊರೆ ಹೋಗಲಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಸರ್ಕಾರಿ ಗ್ಯಾಜೆಟ್‌ಗಳಲ್ಲಿ ಟಿಕ್‌ಟಾಕ್ ನಿರ್ಬಂಧ

ವಾಷಿಂಗ್ಟನ್ (ಎಪಿ): ಸರ್ಕಾರದ ಸಾಧನಗಳಿಂದ 'ಟಿಕ್‌ಟಾಕ್' ಸಾಮಾಜಿಕ ಜಾಲತಾಣ ಆ್ಯಪ್‌ಅನ್ನು ತೆಗೆದುಹಾಕಲು ಎಲ್ಲಾ ಫೆಡರಲ್ ಸಂಸ್ಥೆಗಳಿಗೆ ಅಮೆರಿಕದ ಶ್ವೇತಭವನವು 30 ದಿನಗಳ ಕಾಲಾವಕಾಶ ನೀಡಿದೆ. ಭದ್ರತೆ ಕಾರಣದಿಂದಾಗಿ ಚೀನಾ ಮಾಲೀಕತ್ವದ ಈ ಆ್ಯಪ್ ವಾಷಿಂಗ್ಟನ್‌ನಲ್ಲಿ ಕೂಲಂಕಷ ಪರೀಕ್ಷೆಗೆ ಒಳಗಾಗಿದೆ.

'ಸರ್ಕಾರದ ಸೂಕ್ಷ್ಮ ದತ್ತಾಂಶಗಳಿಗೆ ಇರುವ ಅಪಾಯದ ಕುರಿತು ಕ್ರಮ ಕೈಗೊಳ್ಳಲು ನಿರ್ಣಾಯಕ ಹೆಜ್ಜೆಗಳನ್ನು ಇರಿಸಬೇಕು' ಎಂದು ಶ್ವೇತಭವನದ ನಿರ್ವಹಣೆ ಮತ್ತು ಬಜೆಟ್ ಕಾರ್ಯಾಲಯ ಮಾರ್ಗಸೂಚಿ ಹೊರಡಿಸಿದೆ.

ರಕ್ಷಣಾ ಇಲಾಖೆ ಸೇರಿ ಕೆಲ ಇಲಾಖೆಗಳು ಈಗಾಗಲೇ ಟಿಕ್‌ಟಾಕ್‌ಅನ್ನು ನಿರ್ಬಂಧಿಸಿವೆ. ಇನ್ನುಳಿದ ಫೆಡರಲ್ ಸಂಸ್ಥೆಗಳಿಗೆ ಈಗ ಮಾರ್ಗಸೂಚಿ ಹೊರಡಿಸಲಾಗಿದೆ. ಶ್ವೇತಭವನವು ಈಗಾಗಲೇ ತನಗೆ ಸಂಬಂಧಿಸಿದ ಸಾಧನಗಳಲ್ಲಿ ಟಿಕ್‌ಟಾಕ್ ಆ್ಯಪ್‌ಅನ್ನು ಬಳಸುತ್ತಿಲ್ಲ.

ಪದವಿ ಮಧ್ಯೆ ಕಾಲೇಜು ಬದಲಾವಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಮೂರು, ಐದು, ಏಳನೇ ಸೆಮಿಸ್ಟರ್‌ಗಳ ಪ್ರವೇಶಕ್ಕೂ ಮೊದಲು ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳು ಅಥವಾ ಇತರೆ ಯಾವುದೇ ಸಾರ್ವಜನಿಕ ವಿಶ್ವವಿದ್ಯಾಲಯಗಳ ಕಾಲೇಜುಗಳಿಗೆ ವರ್ಗಾವಣೆ ಪಡೆಯಲು ಉನ್ನತ ಶಿಕ್ಷಣ ಇಲಾಖೆ ಅವಕಾಶ ಕಲ್ಪಿಸಿದೆ.

ಈ ಕುರಿತು ಇಲಾಖೆ ಆದೇಶ ಹೊರಡಿಸಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಎರಡು ಸೆಮಿಸ್ಟರ್ ಪೂರೈಸಿದವರು ಓದು ಅರ್ಧಕ್ಕೆ ನಿಲ್ಲಿಸಿದರೆ ಅವರಿಗೆ ಕೆಳಹಂತದ ಪದವಿ ಪ್ರಮಾಣಪತ್ರ, ನಾಲ್ಕು ಸೆಮಿಸ್ಟರ್ ಪೂರೈಸಿದ ವರಿಗೆ ಡಿಪ್ಲೊಮಾ ಪದವಿ, ಆರು ಸೆಮಿಸ್ಟರ್ ಪೂರೈಸಿದರೆ ಪದವಿ, ಎಂಟು ಸೆಮಿಸ್ಟರ್ ಪೂರೈಸಿದರೆ ಆನರ್ಸ್ ಪದವಿ ಪ್ರದಾನ ಮಾಡಲು ಸೂಚಿಸಲಾಗಿದೆ.

ಯಾವುದೇ ಸೆಮಿಸ್ಟರ್‌ನ ಮಧ್ಯದಲ್ಲೇ ಓದು ನಿಲ್ಲಿಸಿದವರು ಪ್ರವೇಶ ಪಡೆದ ದಿನದಿಂದ ಏಳು ವರ್ಷಗಳ ಒಳಗೆ ಮರು ಪ್ರವೇಶ ಪಡೆಯಬಹುದು. ಎಲ್ಲ ಪ್ರಕ್ರಿಯೆಗಳನ್ನೂ ಯುಯು ಸಿಎಂಎಸ್ ತಂತ್ರಾಂಶದ ಮೂಲಕ ನಿರ್ವಹಿಸ ಬೇಕು. ಪ್ರತಿ ವಿದ್ಯಾರ್ಥಿಯ ಕ್ರೆಡಿಟ್ ಪಾಯಿಂಟ್‌ಗಳನ್ನು 'ಅಕಾಡೆಮಿಕ್ ಕ್ರೆಡಿಟ್ ಬ್ಯಾಂಕ್' ಖಾತೆಯ ಜತೆ ಸಂಯೋಜಿಸಬೇಕು. ವಿದ್ಯಾರ್ಥಿ ಬಯಸಿದರೆ ಏಕ ಕಾಲಕ್ಕೆ ಎರಡು ಪದವಿ ಅಧ್ಯಯನ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಮಲಗಿದ್ದಲ್ಲೇ ತಾಯಿ ಸಾವು: ಮೃತದೇಹ ಜೊತೆ 2 ದಿನ ಕಳೆದ ಮಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಗಿದ್ದ ಸ್ಥಿತಿಯಲ್ಲೇ ಅಣ್ಣಮ್ಮ (40) ಎಂಬುವವರು ಮೃತಪಟ್ಟಿದ್ದು, ಸಾವಿನ ಅರಿವು ಇಲ್ಲದ 11 ವರ್ಷದ ಮಗ ಮೃತದೇಹದ ಜೊತೆ ಎರಡು ದಿನ ಕಳೆದಿರುವ ಘಟನೆ ಗಂಗಾನಗರದಲ್ಲಿ ನಡೆದಿದೆ.

'ಸ್ಥಳೀಯ ಸರ್ಕಾರಿ ಶಾಲೆ ಬಳಿಯ ನಿವಾಸಿ ಅಣ್ಣಮ್ಮ, ಮಗನ ಜೊತೆ ವಾಸವಿದ್ದರು. ಎರಡು ದಿನಗಳ ಹಿಂದೆಯಷ್ಟೇ ಅವರು ಮೃತಪಟ್ಟಿದ್ದು, ಈ ಬಗ್ಗೆ ಯಾರಿಗೂ ಮಾಹಿತಿ ಇರಲಿಲ್ಲ. ಮಂಗಳವಾರ ದುರ್ವಾಸನೆ ಬರುತ್ತಿದ್ದಂತೆ ಸ್ಥಳೀಯರು ಠಾಣೆಗೆ ವಿಷಯ ತಿಳಿಸಿದ್ದರು. ಮನೆಗೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಆರ್.ಟಿ. ನಗರ ಪೊಲೀಸರು ಹೇಳಿದರು.

'ಅಣ್ಣಮ್ಮ ಅವರ ಪತಿ ಕೆಲವರ್ಷಗಳ ಹಿಂದೆ ತೀರಿಕೊಂಡಿದ್ದರು. ಮಾತನಾಡಲು ಬಾರದ ಅಣ್ಣಮ್ಮ ಅವರು ಕೂಲಿ ಕೆಲಸ ಮಾಡಿ ಮಗನನ್ನು ಸಾಕುತ್ತಿದ್ದರು' ಎಂದು ತಿಳಿಸಿದರು.

ಮೃತದೇಹದ ಪಕ್ಕ ಮಲಗಿದ್ದ: 'ಅಣ್ಣಮ್ಮ ಅವರದ್ದು ಸಾವು ಎಂಬುದು ಮಗನಿಗೆ ಗೊತ್ತಾಗಿರಲಿಲ್ಲ. |ತಾಯಿ ಮಲಗಿರಬಹುದೆಂದು ತಿಳಿದ ಮಗ, ಬೆಳಿಗ್ಗೆ ಮನೆಯಿಂದ ಹೊರಗೆ ಹೋಗಿ ಆಟವಾಡುತ್ತಿದ್ದ. 'ತಾಯಿ ಮಲಗಿದ್ದಾಳೆ' ಎಂಬುದಾಗಿ ಹೇಳಿ ಸಂಬಂಧಿಕರ ಮನೆಯಲ್ಲಿ ಊಟ ಮಾಡಿಕೊಂಡು, ರಾತ್ರಿ ಪುನಃ ಮನೆಗೆ ಬರುತ್ತಿದ್ದ. ತಾಯಿ ಮೃತ ದೇಹದ ಪಕ್ಕವೇ ಮಲಗುತ್ತಿದ್ದ' ಎಂದು ಪೊಲೀಸರು ಮಾಹಿತಿ ನೀಡಿದರು.

'ಎರಡು ದಿನ ಮೃತದೇಹ ಪಕ್ಕವೇ ಮಗ ಮಲಗಿದ್ದ. ಮಂಗಳವಾರ ಮೃತದೇಹದಿಂದ ದುರ್ವಾಸನೆ ಬರಲಾರಂಭಿಸಿತ್ತು. ಅಕ್ಕ–ಪಕ್ಕದ ನಿವಾಸಿಗಳು ಪರಿಶೀಲನೆ ನಡೆಸಿದಾಗ ಅಣ್ಣಮ್ಮ ಮೃತಪಟ್ಟಿದ್ದು ಗೊತ್ತಾಗಿದೆ' ಎಂದು ತಿಳಿಸಿದರು.

'ಅಣ್ಣಮ್ಮ ಅವರದ್ದು ಸಹಜ ಸಾವು ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಸಂಬಂಧಿಕರಿಗೆ ಮಾಹಿತಿ ನೀಡಲಾಗಿದೆ. ಅವರು ನೀಡುವ ದೂರು ಆಧರಿಸಿ, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಹೃದಯಾಘಾತದಿಂದ ಬಸ್ ಚಾಲಕ ಸಾವು

ಗೋಕಾಕ: ಇಲ್ಲಿನ ಗೋಕಾಕ ಫಾಲ್ಸ್ ಮಾರ್ಗದ ಇಳಿಜಾರಿನಲ್ಲಿ ಮಂಗಳವಾರ ಚಲಿಸುವಾಗ, ಸಾರಿಗೆ ಸಂಸ್ಥೆಯ ಬಸ್ ಚಾಲಕನಿಗೆ ತೀವ್ರ ಹೃದಯಾಘಾತವಾಗಿದ್ದು, ಸಮಯ ಪ್ರಜ್ಞೆಯಿಂದ ನಾಲ್ವರು ಪ್ರಯಾಣಿಕರ ಪ್ರಾಣ ಉಳಿಸಿದ್ದಾರೆ.

ಹೃದಯಾಘಾತವಾಗಿದ್ದ ಚಾಲಕರನ್ನು ಕೂಡಲೇ ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ಆಸ್ಪತ್ರೆಗೆ ತೆರಳುವ ಮಾರ್ಗದಲ್ಲೇ ಮೃತಪಟ್ಟಿದ್ದರು. ತಾಲ್ಲೂಕಿನ ಮೇಲ್ಮಟ್ಟಿ ಗ್ರಾಮದ ನಿವಾಸಿ ಮಂಜು ವೀರಪ್ಪ ಅಂಕಲಗಿ (43) ಮೃತಪಟ್ಟವರು.

ಬಸ್ ಚಾಲನೆ ಮಾಡುವಾಗಲೇ ಅವರಿಗೆ ಎದೆನೋವು ಕಾಣಿಸಿಕೊಂಡಿತು. ತಕ್ಷಣ ಬಸ್ ಅನ್ನು ರಸ್ತೆ ಪಕ್ಕಕ್ಕೆ ನಿಲ್ಲಿಸಿದರು. ಕಂಡಕ್ಟರ್ ಹಾಗೂ ಪ್ರಯಾಣಿಕರ ನೆರವಿನಿಂದ ಇನ್ನೊಂದು ವಾಹನದಲ್ಲಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು ಎಂದು ಬಸ್‌ನಲ್ಲಿದ್ದ ಪ್ರಯಾಣಿಕರು ತಿಳಿಸಿದ್ದಾರೆ.

ಬೆಳವಡಿ ಮಲ್ಲಮ್ಮನ ಪ್ರತಿಮೆ ಅನಾವರಣ, ಉದ್ವಿಗ್ನ ಸ್ಥಿತಿ

ಪ್ರತಿಮೆ ಲೋಕಾರ್ಪಣೆ ನಿರ್ಲಕ್ಷ್ಯ; ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಮಲ್ಲಮ್ಮನ ಬೆಳವಡಿ ಗ್ರಾಮದ ವೃತ್ತದಲ್ಲಿ ಪ್ರತಿಷ್ಠಾಪಿಸಿದ್ಧ ಅಶ್ವಾರೂಢ ಕಂಚಿನ ಪ್ರತಿಮೆ ಅನಾವರಣ ವಿಷಯ ಮಂಗಳವಾರ ರಾತ್ರಿ ಗ್ರಾಮದಲ್ಲಿ ವಾಗ್ವಾದಕ್ಕೆ ಕಾರಣವಾಯಿತು.

ಬೆಳವಡಿ ಮಲ್ಲಮ್ಮನ ಉತ್ಸವ ಮೆರವಣಿಗೆ ಬೆಳಿಗ್ಗೆ ನಡೆಯಿತು. ಇದಕ್ಕೂ ಮುನ್ನ ಪ್ರತಿಮೆ ಅನಾವರಣ ಕಾರ್ಯಕ್ರಮ ಇತ್ತು. ಜಿಲ್ಲಾ ಉಸ್ತುವಾರಿ ಸಚಿವರೂ ಸೇರಿದಂತೆ ಯಾವೊಬ್ಬ ಜನಪ್ರತಿನಿಧಿ, ಅಧಿಕಾರಿಯೂ ಬರಲಿಲ್ಲ. ಇದರಿಂದ ಅನಾವರಣ ಕಾರ್ಯಕ್ರಮ ಮುಂದೂಡಲಾಯಿತು. ರಾತ್ರಿ 9.30ರವರೆಗೆ ಮುಖ್ಯ ಕಾರ್ಯಕ್ರಮದ ಉದ್ಘಾಟನೆಯೇ ನಡೆದಿರಲಿಲ್ಲ.



ಬೈಲಹೊಂಗಲ ತಾಲ್ಲೂಕಿನ ಬೆಳವಡಿಯಲ್ಲಿ ಮಂಗಳವಾರ ರಾತ್ರಿ, ಜೆಡಿಎಸ್ ಕಾರ್ಯಕರ್ತರ ಪ್ರತಿಭಟನೆ ನಡುವೆಯೇ ಕ್ರೇನ್ ಸಹಾಯದಿಂದ ಮಲ್ಲಮ್ಮನ ಪ್ರತಿಮೆ ಲೋಕಾರ್ಪಣೆ ಮಾಡಲಾಯಿತು

ರಾತ್ರಿ 8ರ ನಂತರ ಸಂಸದೆ ಮಂಗಲಾ ಅಂಗಡಿ, ಶಾಸಕ ಮಹಾಂತೇಶ ಕೌಜಲಗಿ, ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಸ್ಥಳಕ್ಕೆ ಬಂದರು. 'ಬೆಳಿಗ್ಗೆಯಿಂದ ನಿರ್ಲಕ್ಷ್ಯ ಮಾಡಿದ ಕಾರಣಕ್ಕೆ ಪ್ರತಿಮೆ ಅನಾವರಣ ಮಾಡಲು ಬಿಡುವುದಿಲ್ಲ' ಎಂದು ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಶಂಕರ ಮಾಡಲಗಿ ನೇತೃತ್ವದಲ್ಲಿ ಕಾರ್ಯಕರ್ತರು ಪ್ರತಿಭಟಿಸಿದರು.

ಇದರ ಮಧ್ಯೆಯೇ ಗ್ರಾಮಸ್ಥರ ಇನ್ನೊಂದು ಗುಂಪು ಬೆಳವಡಿ ಸಂಸ್ಥಾನದ ರಾಜಗುರು ಶಿವಮಹಾಂತ ಶಿವಾಚಾರ್ಯ ಸ್ವಾಮೀಜಿ ಅವರಿಂದ ಪ್ರತಿಮೆ ಅನಾವರಣಕ್ಕೆ ಮುಂದಾಯಿತು.

ಆಗ ಅಡ್ಡನಿಂತ ಜೆಡಿಎಸ್ ಕಾರ್ಯಕರ್ತರು ತೀವ್ರ ವಿರೋಧ ವ್ಯಕ್ತಪಡಿಸಿದರು. ಪರಸ್ಪರ ನೂಕಾಟ, ತಳ್ಳಾಟ, ಚೀರಾಟ ಆರಂಭವಾಯಿತು. ಇದೆಲ್ಲವನ್ನೂ ಜನಪ್ರತಿನಿಧಿಗಳು ಮೂಕಪ್ರೇಕ್ಷಕರಂತೆ ನಿಂತು ನೋಡಬೇಕಾಯಿತು.


ಪರಿಸ್ಥಿತಿ ಕೈಕೈ ಮಿಲಾಯಿಸುವ ಹಂತಕ್ಕೆ ಹೋಯಿತು. ಎಸ್ಪಿ ಡಾ.ಸಂಜೀವ ಪಾಟೀಲ ನೇತೃತ್ವದಲ್ಲಿ ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದರು. ಆಗ ಕ್ರೇನ್ ನೆರವಿನಿಂದ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಲೋಕಾರ್ಪಣೆ ಮಾಡಲಾಯಿತು.

ಬುಧವಾರ, ಮಾರ್ಚ್ 1, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 60 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಅಪಘಾತಗಳಿಂದ ರಕ್ಷಣೆ ನೀಡಲು 'ಏರ್‌ಬ್ಯಾಗ್ ಜೀನ್ಸ್' ಮಾರುಕಟ್ಟೆಗೆ ಬರುತ್ತಿದೆ



ಆಳ-ಅಗಲ
ಗರಿಷ್ಠ ಪಿಂಚಣಿ ಸುತ್ತಮುತ್ತ

ಹುಲಿ ಬೇಟೆ ತಡೆ ಕಾರ್ಯಾಚರಣೆ: ಮಾಹಿತಿ ಒದಗಿಸದ ರಾಜ್ಯ 5
ವೈದ್ಯ ವಿದ್ಯಾರ್ಥಿನಿ ಆತ್ಮಹತ್ಯೆ: ತನಿಖೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,962 ▼	17,303 ▼	₹57,480 (ಬೆಂಗಳೂರು) ▲	₹65,200 (ಬೆಂಗಳೂರು) ▼	82.58 ▲

ನಿಶ್ಚಿತ ಠೇವಣಿಗೆ ಶೇ 8ರಷ್ಟು ಬಡ್ಡಿ

ಮುಂಬೈ (ಪಿಟಿಐ): ಠೇವಣಿ ಸಂಗ್ರಹ ಹೆಚ್ಚಿಸುವ ಉದ್ದೇಶದಿಂದ ಬ್ಯಾಂಕ್‌ಗಳು ಹಣದುಬ್ಬರದ ಪ್ರಮಾಣಕ್ಕಿಂತ ಹೆಚ್ಚಿನ ಬಡ್ಡಿಯನ್ನು ಠೇವಣಿಗಳಿಗೆ ನೀಡಲು ಆರಂಭಿಸಿವೆ. ಸರ್ಕಾರಿ ಸ್ವಾಮ್ಯದ ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್ ಠೇವಣಿಗಳಿಗೆ ವಾರ್ಷಿಕ ಶೇಕಡ 8ರಿಂದ ಶೇ 8.50ರವರೆಗೆ ಬಡ್ಡಿ ನೀಡುತ್ತಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಇದುವರೆಗೆ ಸಾಲ ನೀಡಿಕೆ ಪ್ರಮಾಣವು ಠೇವಣಿ ಸಂಗ್ರಹದ ಪ್ರಮಾಣಕ್ಕಿಂತ ಹೆಚ್ಚಾಗಿದೆ. ಹೀಗಾಗಿ ಬ್ಯಾಂಕ್‌ಗಳು ಠೇವಣಿ ಆಕರ್ಷಿಸಲು ಹೆಚ್ಚಿನ ಬಡ್ಡಿ ನೀಡಲು ಮುಂದಾಗಿವೆ.

2022ರಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಹೆಚ್ಚಿನ ಅವಧಿಗೆ ಶೇ 6ಕ್ಕಿಂತ ಮೇಲ್ಮಟ್ಟದಲ್ಲಿ ಉಳಿದಿತ್ತು. ಇದರಿಂದಾಗಿ ಆರ್‌ಬಿಐ ರೆಪೊ ದರವನ್ನು ಶೇ 6.50ಕ್ಕೆ ಹೆಚ್ಚಿಸಿದೆ.

12ನೇ ಪುಟ ನೋಡಿ

ವಿದ್ಯಾರ್ಥಿಗಳ ಸವಲತ್ತಿಗೂ ಆಧಾರ್ ಕಡ್ಡಾಯ

ಬೆಂಗಳೂರು: ಶಾಲಾ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಮತ್ತು ಇತರೆ ಸರ್ಕಾರಿ ಸವಲತ್ತು ಪಡೆಯಲು ಎಸ್‌ಎಟಿಎಸ್ ತಂತ್ರಾಂಶದೊಂದಿಗೆ (ವಿದ್ಯಾರ್ಥಿ ಸಾಮರ್ಥ್ಯ ಪತ್ತೆ ವ್ಯವಸ್ಥೆ) ಆಧಾರ್ ಜೋಡಣೆ ಮಾಡುವುದನ್ನು ಕಡ್ಡಾಯಗೊಳಿಸಿ ಶಿಕ್ಷಣ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಯ ಎಲ್ಲ ವಿದ್ಯಾರ್ಥಿಗಳಿಂದ ಆಧಾರ್ ಕಾರ್ಡ್‌ಗಳನ್ನು ಸಂಗ್ರಹಿಸಿ, ತಂತ್ರಾಂಶದೊಂದಿಗೆ ಜೋಡಣೆ ಮಾಡಬೇಕು. ಖಾಸಗಿ ಶಾಲೆಯ ವಿದ್ಯಾರ್ಥಿಗಳ ಆಧಾರ್ ಜೋಡಣೆಗೂ ಮೊದಲು ಅವರಿಂದ ಒಪ್ಪಿಗೆ ಪತ್ರ ಪಡೆಯಬೇಕು ಎಂದು ಸೂಚಿಸಲಾಗಿದೆ.

ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳು ನೀಡುವ ವಿದ್ಯಾರ್ಥಿ ವೇತನವನ್ನು ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ ಮೂಲಕ ವಿತರಿಸಲಾಗುತ್ತಿದೆ. ಅರ್ಹ ವಿದ್ಯಾರ್ಥಿಗಳಿಗೆ ವೇತನ ತಲುಪಲು, ವಿವಿಧ ಪ್ರವೇಶ ಪರೀಕ್ಷೆಗಳ ಹಾಜರಾತಿಗೆ ಆಧಾರ್‌ನಲ್ಲಿರುವಂತೆ ವಿದ್ಯಾರ್ಥಿ ಹೆಸರು ನಮೂದಿಸಲಾಗುವುದು ಎಂದು ವಿವರಿಸಿದ್ದಾರೆ.

ಸಿಸೋಡಿಯಾ, ಜೈನ್ ರಾಜೀನಾಮೆ

ನವದೆಹಲಿ (ಪಿಟಿಐ): ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ, ಸಚಿವ ಸತ್ಯೇಂದರ್ ಜೈನ್ ಅವರು ಮಂಗಳವಾರ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದು, ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅಂಗೀಕರಿಸಿದ್ದಾರೆ. 3

120 ವರ್ಷಗಳಲ್ಲಿ ಗರಿಷ್ಠ ತಾಪಮಾನ ದಾಖಲು

ನವದೆಹಲಿ: ದೇಶದಲ್ಲಿ ಕಳೆದ 120 ವರ್ಷಗಳಲ್ಲಿಯೇ ಫೆಬ್ರುವರಿಯಲ್ಲಿ ಗರಿಷ್ಠ ತಾಪಮಾನ ದಾಖಲಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹೇಳಿದೆ. 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ರಾಷ್ಟ್ರೀಯ ಸಾಂಖ್ಯಿಕ ಕಚೇರಿಯಿಂದ ಅಂಕಿ–ಅಂಶ ಬಿಡುಗಡೆ

ಕುಸಿದ ಜಿಡಿಪಿ ಬೆಳವಣಿಗೆ

ನವದೆಹಲಿ (ಪಿಟಿಐ): ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಆರ್ಥಿಕ ಬೆಳವಣಿಗೆ ದರವು ಶೇಕಡ 4.4ಕ್ಕೆ ಇಳಿಕೆ ಕಂಡಿದೆ. ತಯಾರಿಕಾ ವಲಯದಲ್ಲಿನ ಕುಸಿತವು ಇದಕ್ಕೆ ಮುಖ್ಯ ಕಾರಣ.

ಸಾಲದ ಮೇಲಿನ ಬಡ್ಡಿ ದರ ಹೆಚ್ಚಾಗಿದ್ದು ಮಾರುಕಟ್ಟೆಯಲ್ಲಿ ಬೇಡಿಕೆಯ ಮೇಲೆ ಪರಿಣಾಮ ಬೀರಿದೆ. ಇದು ಕೂಡ ಆರ್ಥಿಕ ಬೆಳವಣಿಗೆಯ ಪ್ರಮಾಣವನ್ನು ತಗ್ಗಿಸಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಆರ್ಥಿಕ ಬೆಳವಣಿಗೆಯನ್ನು ಸೂಚಿಸುವ ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆ ದರವು ಹಿಂದಿನ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಶೇಕಡ 11.2ರಷ್ಟು ಇತ್ತು. ಜಿಡಿಪಿ ಬೆಳವಣಿಗೆ ದರವು ಪ್ರಸಕ್ತ ಆರ್ಥಿಕ ವರ್ಷದ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 6.3ರಷ್ಟು ಇತ್ತು.

ತಯಾರಿಕಾ ವಲಯದ ಉತ್ಪಾದನೆಯಲ್ಲಿ ಶೇ (–)1.1ರಷ್ಟು ಕುಸಿತ ಕಂಡುಬಂದಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಈ ವಲಯದಲ್ಲಿ ಶೇ 1.3ರಷ್ಟು ಏರಿಕೆ ದಾಖಲಾಗಿತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ಅಂಕಿ–ಅಂಶಗಳು ಹೇಳಿವೆ.

ತಯಾರಿಕಾ ವಲಯದಲ್ಲಿನ ಕುಸಿತವು ಬೇಡಿಕೆಯು ತಗ್ಗಿರುವುದನ್ನು ಹಾಗೂ ರಫ್ತು ಕಡಿಮೆ ಆಗಿರುವುದನ್ನು ತೋರಿಸುತ್ತಿದೆ. ಜಗತ್ತಿನ ಎಲ್ಲೆಡೆ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರವನ್ನು ಹೆಚ್ಚಿಸುತ್ತಿರುವ ಕಾರಣ, ಬೇಡಿಕೆ ಕಡಿಮೆ ಆಗಿದೆ.


ಹಣದುಬ್ಬರ ದರ ಹೆಚ್ಚಾಗಿದ್ದುದು ಹಾಗೂ ಬಡ್ಡಿ ದರ ಜಾಸ್ತಿ ಆಗಿದ್ದುದು, ಜನಸಾಮಾನ್ಯರಿಂದ ಬರುವ ಬೇಡಿಕೆ ತಗ್ಗಿದ್ದು ಹಾಗೂ ಸರ್ಕಾರದ ಕಡೆಯಿಂದ ಆಗುವ ವೆಚ್ಚಗಳು ಕಡಿಮೆ ಆಗಿದ್ದು ಕೂಡ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದ ನಂತರದಲ್ಲಿ ಆರ್ಥಿಕ ಬೆಳವಣಿಗೆಯು ವೇಗ ಕಳೆದುಕೊಂಡಿದ್ದಕ್ಕೆ ಕಾರಣಗಳು.

12ನೇ ಪುಟ ನೋಡಿ

ವಿವಿಧ ಕ್ಷೇತ್ರಗಳ ಬೆಳವಣಿಗೆ (%)

ವಲಯ	2022 ಡಿಸೆಂಬರ್ ತ್ರೈಮಾಸಿಕ	2021 ಡಿಸೆಂಬರ್ ತ್ರೈಮಾಸಿಕ
ಕೃಷಿ	3.7	2.2
ಗಣಿಗಾರಿಕೆ	3.7	5.4
ನಿರ್ಮಾಣ	8.4	0.2
ವಿದ್ಯುತ್, ಅನಿಲ, ನೀರು ಸಂಪರ್ಕ ಇತ್ಯಾದಿ ಸೇವೆಗಳು	8.2	6
ವಾಣಿಜ್ಯ, ಹೋಟೆಲ್, ಸಾರಿಗೆ, ಸಂವಹನ ಇತ್ಯಾದಿ	9.7	9.2
ಹಣಕಾಸು, ರಿಯಲ್ ಎಸ್ಟೇಟ್, ವೃತ್ತಿಪರ ಸೇವೆಗಳು	5.8	4.3
ಸಾರ್ವಜನಿಕ ಆಡಳಿತ, ರಕ್ಷಣೆ, ಇತರ ಸೇವೆಗಳು	2	10.6

ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಪ್ರಮಾಣ (%)



ಹೆಚ್ಚಿದ ವಿತ್ತೀಯ ಕೊರತೆ

ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು ಜನವರಿಯ ಕೊನೆಯ ವೇಳೆಗೆ ಇಡೀ ಆರ್ಥಿಕ ವರ್ಷದ ಅಂದಾಜಿನ ಶೇಕಡ 67.8ರಷ್ಟಾಗಿದೆ. ವೆಚ್ಚಗಳಲ್ಲಿ ಹೆಚ್ಚಳ ಹಾಗೂ ವರಮಾನ ಸಂಗ್ರಹ ಕಡಿಮೆ ಆಗಿದ್ದು ವಿತ್ತೀಯ ಕೊರತೆ ಹೆಚ್ಚಾಗುವುದಕ್ಕೆ ಕಾರಣ.

ಕೇಂದ್ರದ ವರಮಾನ ಹಾಗೂ ವೆಚ್ಚಗಳ ನಡುವಿನ ಕೊರತೆಯ ಅಂತರವು ಜನವರಿ ಅಂತ್ಯಕ್ಕೆ ₹ 11.9 ಲಕ್ಷ ಕೋಟಿಗೆ ತಲುಪಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ವಿತ್ತೀಯ ಕೊರತೆ ಪ್ರಮಾಣವು ಪರಿಷ್ಕೃತ ಅಂದಾಜಿನ ಶೇ 58.9ರಷ್ಟು ಮಾತ್ರ ಆಗಿತ್ತು.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯು ₹ 17.55 ಲಕ್ಷ ಕೋಟಿ ಆಗಲಿದೆ ಎಂಬುದು ಕೇಂದ್ರದ ಅಂದಾಜು. ಇದು ಜಿಡಿಪಿಯ ಶೇ 6.4ರಷ್ಟು. ವಿತ್ತೀಯ ಕೊರತೆ ಪ್ರಮಾಣವನ್ನು 2025–26ರ ವೇಳೆಗೆ ಶೇ 4.5ಕ್ಕೆ ತಗ್ಗಿಸುವ ಗುರಿಯನ್ನು ಕೇಂದ್ರ ಹೊಂದಿದೆ.

ರೂಪಾ ವಿರುದ್ಧ ಕೋರ್ಟ್‌ಗೆ ಖಾಸಗಿ ದೂರು 3

'ಶಿವಮೊಗ್ಗದಲ್ಲಿ ರಾಷ್ಟ್ರೀಯ ರಕ್ಷಣಾ ವಿ.ವಿ'

ಶಿವಮೊಗ್ಗ: 'ಸೇನೆ ಹಾಗೂ ಪೊಲೀಸ್ ಇಲಾಖೆಗೆ ಸಂಬಂಧಿಸಿದ ಕೋರ್ಸ್‌ಗಳ ಬೋಧನೆ ಹಾಗೂ ಉದ್ಯೋಗಾವಕಾಶ ಒದಗಿಸುವ ರಾಷ್ಟ್ರೀಯ ರಕ್ಷಣಾ ವಿಶ್ವವಿದ್ಯಾಲಯ ಕರ್ನಾಟಕಕ್ಕೆ ಮಂಜೂರಾಗಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಶಿವಮೊಗ್ಗದಲ್ಲಿ ಕಾರ್ಯಾರಂಭ ಮಾಡಲಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

'ಸದ್ಯ, ಗುಜರಾತ್‌ನ ಅಹಮದಾಬಾದ್‌ನಲ್ಲಿ ರಾಷ್ಟ್ರೀಯ ರಕ್ಷಣಾ ವಿಶ್ವವಿದ್ಯಾಲಯವಿದ್ದು, ಇದು ದೇಶದ ಎರಡನೇ ವಿಶ್ವವಿದ್ಯಾಲಯವಾಗಿದೆ. ರಾಗಿಗುಡ್ಡದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಕಟ್ಟಡದಲ್ಲಿ ತಾತ್ಕಾಲಿಕವಾಗಿ ಕಾರ್ಯಾರಂಭ ಮಾಡಲಿದೆ' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ವಿಶ್ವವಿದ್ಯಾಲಯ ಸ್ಥಾಪನೆಗಾಗಿ ನವುಲೆ ಬಳಿ ಜಿಲ್ಲಾಡಳಿತವು 8 ಎಕರೆ ಜಮೀನು ಮಂಜೂರು ಮಾಡಿದೆ. ಕೇಂದ್ರ ಗೃಹ ಸಚಿವಾಲಯದ ಅಧೀನದಲ್ಲಿ, ಯುಜಿಸಿ ಮಾನ್ಯತೆಯೊಂದಿಗೆ ಈ ವಿಶ್ವವಿದ್ಯಾಲಯವು ಕಾರ್ಯ ನಿರ್ವಹಿಸಲಿದೆ. ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ ಕೋರ್ಸ್‌ಗಳು ಇರಲಿವೆ. ದ್ವಿತೀಯ ಪಿಯುಸಿ ನಂತರ ಪ್ರವೇಶ ಪಡೆಯಬಹುದು' ಎಂದರು.

10ನೇ ಪುಟ ನೋಡಿ

ಸಂಧಾನ ವಿಫಲ: ಮುಷ್ಕರ ಖಚಿತ

ಮಧ್ಯಂತರ ಪರಿಹಾರ, ಎನ್‌ಪಿಎಸ್ ರದ್ದತಿಗೆ ಸಮಿತಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಸರ್ಕಾರಿ ನೌಕರರ ಸಂಘದ ಜತೆ ಮಾತುಕತೆ ನಡೆಸಿದ್ದು, ಸಮಸ್ಯೆ ಸೌಹಾರ್ದಯುತವಾಗಿ ಬಗೆಹರಿಯುವ ವಿಶ್ವಾಸವಿದೆ. ಸಂಘದವರು ಒಂದು ತೀರ್ಮಾನಕ್ಕೆ ಬಂದ ಮೇಲೆ, ಸರ್ಕಾರ ಸೂಕ್ತ ನಿರ್ಣಯ ಕೈಗೊಳ್ಳಲಿದೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಮುಖ್ಯಮಂತ್ರಿ ಸಕಾರಾತ್ಮಕ ಭರವಸೆ ನೀಡಿದ್ದಾರೆ. ಎಲ್ಲ ಸಂಘಟನೆಗಳ ಜತೆ ಚರ್ಚಿಸಿ ನಿರ್ಧಾರ ಪ್ರಕಟಿಸಲಾಗುವುದು. ಬುಧವಾರ ಮುಷ್ಕರ ನಡೆಯಲಿದೆ
ಸಿ.ಎಸ್.ಷಡಾಕ್ಷರಿ
ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ

ಬೆಂಗಳೂರು: ವೇತನ ಪರಿಷ್ಕರಣೆ, ಹೊಸ ಪಿಂಚಣಿ ನೀತಿ (ಎನ್‌ಪಿಎಸ್) ರದ್ದತಿ ಬೇಡಿಕೆಗಳ ಕುರಿತು ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಜತೆ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ತಡ ರಾತ್ರಿ ನಡೆಸಿದ ಸಂಧಾನ ವಿಫಲವಾಗಿದೆ. ಹೀಗಾಗಿ, ಬುಧವಾರ ನೌಕರರು ಮುಷ್ಕರ ನಡೆಸುವುದು ಖಚಿತವಾಗಿದ್ದು, ಸರ್ಕಾರಿ ಸೇವೆಗಳು ವ್ಯತ್ಯಯವಾಗುವ ಸಾಧ್ಯತೆ ಇದೆ.

'ಏಳನೇ ವೇತನ ಆಯೋಗದಿಂದ ತಕ್ಷಣ ಮಧ್ಯಂತರ ವರದಿ ತರಿಸಿಕೊಂಡು ನೌಕರರಿಗೆ ಮಧ್ಯಂತರ ಪರಿಹಾರ ಘೋಷಿಸಲಾಗುವುದು. ಎನ್‌ಪಿಎಸ್ ರದ್ದತಿ ಹಾಗೂ ಹಳೇ ಪಿಂಚಣಿ ವ್ಯವಸ್ಥೆ ಮರು ಜಾರಿಗೊಳಿಸುವ ಸಂಬಂಧ ಉನ್ನತಾಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಲಾಗುವುದು. ಈಗಾಗಲೇ ಎನ್‌ಪಿಎಸ್ ರದ್ದು ಮಾಡಿರುವ ರಾಜ್ಯಗಳಿಗೆ ಸಮಿತಿ ಭೇಟಿ ನೀಡಿ ತ್ವರಿತವಾಗಿ ವರದಿ ನೀಡಲು ಸೂಚಿಸಲಾಗುವುದು. ನಂತರ ಮುಂದಿನ ನಿರ್ಧಾರ ಪ್ರಕಟಿಸಲಾಗುವುದು' ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ಭರವಸೆಗಳ ಕುರಿತು ಸಂಘದ ಸಭೆಯಲ್ಲಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವುದಾಗಿ ಪದಾಧಿಕಾರಿಗಳು ತಿಳಿಸಿ ಸಭೆಯಿಂದ ಹೊರ ನಡೆದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ನೌಕರರ ಸಂಘದ ಪದಾಧಿಕಾರಿಗಳ ಜತೆ ಮಧ್ಯರಾತ್ರಿವರೆಗೂ ಸಭೆ ನಡೆಸಿದ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ಮುಖ್ಯಮಂತ್ರಿ ನೀಡಿದ ಭರವಸೆಗಳ ಕುರಿತ ಸಮಾಲೋಚನೆ ನಡೆಸಿದರು.

ಸರಣಿ ಸಭೆ: ಸರ್ಕಾರದ ಎಲ್ಲ ಇಲಾಖೆಗಳು ನೌಕರರು ಕರ್ತವ್ಯಕ್ಕೆ ಗೈರಾಗಿ ಮುಷ್ಕರ ಹೂಡಲು ನಿರ್ಧರಿಸಿದ್ದರಿಂದ ಸರ್ಕಾರಿ ಸೇವೆ ವ್ಯತ್ಯಯವಾಗಲಿದೆ. ಫೆಬ್ರುವರಿ22 ರಂದೇ ಮುಷ್ಕರ ನೋಟಿಸ್ ನೀಡಿದ್ದರೂ ಕೊನೆಯ ದಿನದವರೆಗೆ ಸುಮ್ಮನಿದ್ದ ಸರ್ಕಾರ, ಮುಷ್ಕರದ ಹಿಂದಿನ ದಿನವಷ್ಟೇ ಮಾತುಕತೆಗೆ ಮುಂದಾಯಿತು.

ಸರ್ಕಾರದ ಮುಖ್ಯಕಾರ್ಯದರ್ಶಿ ವಂದಿತಾ ಶರ್ಮ ಅವರು ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಜತೆ ಮಂಗಳವಾರ ಬೆಳಿಗ್ಗೆ ನಡೆಸಿದ ಮಾತುಕತೆ ಮುರಿದುಬಿದ್ದಿತು. ಅದರ ಜತೆಗೆ ಹಣಕಾಸು ಇಲಾಖೆಯ ಅಧಿಕಾರಿಗಳು, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಜತೆಯೂ ಪದಾಧಿಕಾರಿಗಳು ಸಭೆ ನಡೆಸಿದರು. ಈ ಎಲ್ಲ ಸಭೆಗಳಲ್ಲೂ, ಸ್ವಲ್ಪ ಕಾಲಾವಕಾಶ ಕೊಟ್ಟರೆ ಬೇಡಿಕೆ ಈಡೇರಿಸಲು ಕ್ರಮವಹಿಸುವುದಾಗಿ ಹಿರಿಯ ಅಧಿಕಾರಿಗಳು ಭರವಸೆ ಕೊಟ್ಟರು.

ಅದಕ್ಕೆ ಪ್ರತಿಕ್ರಿಯಿಸಿದ ಷಡಾಕ್ಷರಿ, 'ನಾವು ಈಗಾಗಲೇ ಮುಷ್ಕರಕ್ಕೆ ಕರೆ ಕೊಟ್ಟಿದ್ದು, ಕಾಲ ಮೀರಿದೆ. ಹಣಕಾಸು ಇಲಾಖೆ ವೇತನ ಪರಿಷ್ಕರಣೆ ಮತ್ತು ಎನ್‌ಪಿಎಸ್ ರದ್ದತಿ ಸಂಬಂಧ ಅಧಿಕೃತ ಆದೇಶ ಹೊರಡಿಸಲೇಬೇಕು. ಬೇರೆ ಯಾವುದಕ್ಕೂ ನಾವು ಒಪ್ಪುವುದಿಲ್ಲ. ಎಸ್ಮಾ ಹಾಕಿದರೂ ಜಗ್ಗುವುದಿಲ್ಲ' ಎಂದು ಪ್ರತಿಪಾದಿಸಿದರು.

ರಾಜ್ಯ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ ಬೊಮ್ಮಾಯಿ ಸಂಜೆ ಹೊತ್ತಿಗೆ ರಾಜಧಾನಿಗೆ ಮರಳಿದರು. ಹಿರಿಯ ಅಧಿಕಾರಿಗಳ ಜತೆ ಒಂದು ಸುತ್ತಿನ ಸಭೆ ನಡೆಸಿದ ಅವರು, ನೌಕರರ ಮನವೊಲಿಸಲು ಸಂಧಾನ ಸೂತ್ರವೊಂದನ್ನು ಮುಂದಿಟ್ಟರು.

ಕಚೇರಿ ಸ್ಥಳಾಂತರ

ಬೆಂಗಳೂರು: ಬಿಬಿಎಂಪಿ ದಕ್ಷಿಣ ವಲಯ ವ್ಯಾಪ್ತಿಯ ಬಸವನಗುಡಿ ಕಂದಾಯ ಅಧಿಕಾರಿ, ಸಹಾಯಕ ಕಂದಾಯ ಅಧಿಕಾರಿ ಮತ್ತು ಗಿರಿನಗರ ಕಂದಾಯ ಅಧಿಕಾರಿ ಉಪವಿಭಾಗ ಕಚೇರಿಗಳನ್ನು ತ್ಯಾಗರಾಜನಗರ ಚನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶದ ಬಳಿಯ ಎಸ್.ಎಸ್.ಎಂ ಶಾಲೆ ಎದುರಿನ ಬಿಬಿಎಂಪಿ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ ಎಂದು ಕಂದಾಯ ಅಧಿಕಾರಿ ಸೂರ್ಯಕುಮಾರಿ ತಿಳಿಸಿದ್ದಾರೆ.

ಸರ್ಕಾರಿ ನೌಕರರ ಮುಷ್ಕರ: ನಾಗರಿಕ ಸೇವೆಗಳಲ್ಲಿ ವ್ಯತ್ಯಯ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರು ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮಾರ್ಚ್ 1ರಿಂದ ಮುಷ್ಕರ ನಡೆಸಲಿದ್ದು, ನಗರದಲ್ಲಿ ಬಿಬಿಎಂಪಿ, ಬಿಡಿಎ, ಬಿಡಬ್ಲ್ಯುಎಸ್ಎಸ್‌ಬಿ ಸೇರಿದಂತೆ ಬಹುತೇಕ ಇಲಾಖೆಗಳಲ್ಲಿ ಸಾರ್ವಜನಿಕ ಸೇವೆಗಳು ಸ್ಥಗಿತವಾಗುವ ಸಂಭವವಿದೆ.

‘ಬಿಬಿಎಂಪಿಯ ಕಂದಾಯ, ಎಂಜಿನಿಯರಿಂಗ್, ವೈದ್ಯ, ಶಿಕ್ಷಣ ಸೇರಿದಂತೆ ಎಲ್ಲ ಅಧಿಕಾರಿಗಳು, ನೌಕರರು, ಪೌರಕಾರ್ಮಿಕರೂ ಮುಷ್ಕರಕ್ಕೆ ಬೆಂಬಲ ನೀಡಿದ್ದಾರೆ. ಬುಧವಾರ ಬೆಳಿಗ್ಗೆ ಬಿಬಿಎಂಪಿ ಕೇಂದ್ರ ಕಚೇರಿ ಎದುರು ಪ್ರತಿಭಟನೆ ಮಾಡಲಿದ್ದೇವೆ’ ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತರಾಜ್ ತಿಳಿಸಿದರು.

ಬಿಡಿಎ, ಬಿಡಬ್ಲ್ಯುಎಸ್ಎಸ್‌ಬಿ, ಬೆಸ್ಕಾಂ ಬಿಎಂಆರ್‌ಡಿಎ ಸೇರಿ ಬಹುತೇಕ ಇಲಾಖೆಗಳು ಹಾಗೂ ಸರ್ಕಾರಿ ಕಚೇರಿಗಳಲ್ಲಿ ನೌಕರರು ಹಾಜರಿರುವ ಸಂಭವ ತೀರಾ ಕಡಿಮೆಯಾಗಿದೆ. ಹೀಗಾಗಿ ನಾಗರಿಕರ ಸೇವೆಗಳಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ.

ಪೌರಕಾರ್ಮಿಕರು ಕಾಯಂಗೆ ಭರವಸೆ: ಬಿಬಿಎಂಪಿಯ 16 ಸಾವಿರ ಪೌರಕಾರ್ಮಿಕರನ್ನು ಕಾಯಂಗೊಳಿಸುವ ಭರವಸೆಯನ್ನು ಬಿಬಿಎಂಪಿಯ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯ್‌ಪುರ ನೀಡಿರುವುದರಿಂದ ಪ್ರತಿಭಟನೆ ಕೈಬಿಡಲಾಗಿದೆ ಎಂದು ಬಿಬಿಎಂಪಿ ಪೌರಕಾರ್ಮಿಕರ ಸಂಘ ತಿಳಿಸಿದೆ. 'ಪೌರಕಾರ್ಮಿಕರನ್ನು ಕಾಯಂಗೊಳಿಸುವ ಕಡತ ಮುಖ್ಯಮಂತ್ರಿಯವರ ಮುಂದಿದೆ. ಇನ್ನೆರಡು ದಿನದಲ್ಲಿ ಅದಕ್ಕೆ ಒಪ್ಪಿಗೆ ನೀಡಲಾಗುತ್ತದೆ. ಒಂದೆರಡು ವಾರಗಳಲ್ಲಿ ಅಧಿಸೂಚನೆ ಹೊರಡಿಸಲಾಗುತ್ತದೆ’ ಎಂದು ಸಿಎಂ ಕಾರ್ಯದರ್ಶಿ ಜಯರಾಂ ಭರವಸೆ ನೀಡಿದ್ದಾರೆ’ ಎಂದು ಸಂಘದವರು ಹೇಳಿದರು.

ಆಶಾ ಕಾರ್ಯಕರ್ತೆಯರ ಬೇಡಿಕೆ: ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ 4 ತಿಂಗಳಿಂದ ಬಾಕಿ ಇರುವ ಕೇಂದ್ರ ಸರ್ಕಾರದ ಪ್ರೋತ್ಸಾಹಧನವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ಸದಸ್ಯರು ಆಗ್ರಹಿಸಿ, ಮಂಗಳವಾರ ಪ್ರತಿಭಟನೆ ನಡೆಸಿದರು.

ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ ಚಂದ್ರ ಅವರು ಮನವಿ ಸ್ವೀಕರಿಸಿ, ಬೇಡಿಕೆ ಈಡೇರಿಸುವ ಭರವಸೆ ನೀಡಿದರು.

ಕಾವೇರಿ ಜಂಕ್ಷನ್ ಕೆಳಸೇತುವೆ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಉಂಟಾಗುತ್ತಿರುವ ದಟ್ಟಣೆ ನಿಯಂತ್ರಿಸುವುದಕ್ಕಾಗಿ ಪೊಲೀಸರು, ಕಾವೇರಿ ಜಂಕ್ಷನ್ ಕೆಳ ಸೇತುವೆಯಲ್ಲಿ (ಮ್ಯಾಜಿಕ್ ಬಾಕ್ಸ್) ಬೆಳಿಗ್ಗೆ 9 ಗಂಟೆಯಿಂದ 11 ಗಂಟೆಯವರೆಗೆ ವಾಹನಗಳ ಸಂಚಾರ ನಿರ್ಬಂಧಿಸಿದ್ದಾರೆ.

ಸದಾಶಿವನಗರದ ಭಾಷ್ಯಂ ವೃತ್ತದಿಂದ ಕಾವೇರಿ ಜಂಕ್ಷನ್‌ಗೆ ಬರುತ್ತಿದ್ದ ವಾಹನಗಳು, ನೇರವಾಗಿ ಬಳ್ಳಾರಿ ರಸ್ತೆಗೆ ಸೇರುತ್ತಿದ್ದವು. ನಗರದಿಂದ ವಿಮಾನ ನಿಲ್ದಾಣ ದತ್ತ ಹೋಗುವ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿತ್ತು. ಇದರಿಂದಾಗಿ ಬೆಳಿಗ್ಗೆ ವಿಪರೀತ ದಟ್ಟಣೆ ಉಂಟಾಗಿ, ವಾಹನಗಳು ಸಾಲುಗಟ್ಟಿ ನಿಲ್ಲುತ್ತಿದ್ದವು.

ಸ್ಥಳ ಪರಿಶೀಲನೆ ನಡೆಸಿದ್ದ ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ, ಕಾವೇರಿ ವೃತ್ತ ಕೆಳಸೇತುವೆಯಲ್ಲಿ ವಾಹನಗಳ ಸಂಚಾರ ನಿಷೇಧಿಸಲು ಸೂಚಿಸಿದ್ದರು.

‘ಭಾಷ್ಯಂ ವೃತ್ತದಿಂದ ಬರುವ ವಾಹನಗಳು, ವೈಯಾಲಿಕಾವಲ್ ಹಾಗೂ ಪ್ಯಾಲೇಸ್ ಗುಟ್ಟಹಳ್ಳಿಯ ವಿನಾಯಕ ವೃತ್ತದ ಮೂಲಕ ಬಿಡಿಎ ಕಚೇರಿ ಮಾರ್ಗವಾಗಿ ಬಳ್ಳಾರಿ ರಸ್ತೆಗೆ ಸೇರಬಹುದು’ ಎಂದು ಸಂಚಾರ ಪೊಲೀಸರು ಹೇಳಿದರು.



ಜಾಗೃತಿ ಆರೋಗ್ಯ ಇಲಾಖೆಯ ರಾಜ್ಯ ತಂಬಾಕು ನಿಯಂತ್ರಣ ಘಟಕ ಬೆಂಗಳೂರಿನ ಆರೋಗ್ಯಸೌಧದಲ್ಲಿ ಮಂಗಳವಾರ ಆಯೋಜಿಸಿದ್ದ ‘ತಂಬಾಕು ಮುಕ್ತ ತಲೆಮಾರು’ ಕಾರ್ಯಾಗಾರದಲ್ಲಿ ಯಕ್ಷಗಾನ ಕಲಾವಿದರು ತಂಬಾಕು ಉತ್ಪನ್ನಗಳ ಸೇವನೆಯಿಂದಾಗುವ ಅಪಾಯದ ಬಗ್ಗೆ ಜಾಗೃತಿ ಮೂಡಿಸಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

FORM-IV
PRAJAVANI

STATEMENT about ownership and other particulars about newspaper **"PRAJAVANI" Bangalore** as required to be published under Section 19-D(b) of the Press and Registration of Books Act, read with Rule-8 of the Registration of Newspapers (Central) Rules, 1956

1. **Place of Publication: Bangalore**
2. **Periodicity of Publication:** Daily

3. **Printer :** Mr. B. A. Ravi, Citizen of India, No.1857/P HIG, Sri Ranga Nilaya, Jalavahini Road, Srirampura 2nd Stage, Mysore-570023
4. **Publisher :** Mr. B. A. Ravi, Citizen of India, No.1857/P HIG, Sri Ranga Nilaya, Jalavahini Road, Srirampura 2nd Stage, Mysore-570023
5. **Editor :** Mr Sudesha Doddapalya, Citizen of India, Olavu, #286, 12th cross, Janatha Nagar, T K Layout, Mysore.
6. Names and addresses of individuals who own the newspaper and partners or shareholders holding more than one percent of the total capital.

Proprietors: The Printers (Mysore) Pvt. Ltd. CIN. No. U22110KA 1948PTC000521 Plot No. 7-12, Kumbalgodu Industrial Area II Phase, Mysore Road, Bangalore-560 074.

Shareholders holding more than one percent of the total capital:
1. Mr. K. N. Hari Kumar, No. 22 1st 'A' Main, 1st Block, RMV 2nd Stage, Bangalore-560 094.
2. Mr. K. N. Tilak Kumar, No. 173, Subbaramachetty Road, Basavanagudi, Bangalore-560 004.
3. Mr. K. N. Shanth Kumar, No. 298/A, 1st Main Road, 8th Block, Jayanagar, Bangalore - 560 082.
4. K. N. Guruswamy & Co. Pvt. Ltd. No. 75, M. G. Road, Bangalore-560 001 5. Legal Heirs of Late Khan Bahadur Budan Saheb, Landlord, Hindupur, Andhra Pradesh. 6. Mr. S. N. Srinivasa Murthy, Mr. S.N. Shiva Shankar, No. 10, VI Main, II Cross, Gandhinagar, Bangalore-560 009. 7. Mr. S. D. Eswarasa, Sri. Durgamba Lodge, 305, Subedar Chatram Road, 6th Main, Gandhinagar, Bangalore - 560 009. 8. Mr. S.D. Aswathnarayana, Mr. S. D. Nageshwar, Mr. S. D. Shivaram, Mr. S. D. Krishnamurthy, Mr. S. N. Raghavendra, No. 361, II 'C' Cross, 4th Main Road, 3rd Stage, 3rd Block, Basaveswarnagar, Bangalore-560 079 9. Mr M P Manjunath, No.172, Ground Floor, Moksha Marga, Siddartha Layout, Mysore -570011 10. Mr. S.D. Muniswamy, Swamy Dhondusa Fabric, Sri Lodge (Basement) No. 9, 6th Main, 2nd Cross, Gandhinagar, Bangalore-560 009 11. Mrs Prema B Moola, Mr Ananda Ranga Moola, Mr Ved Manu Moola, Ms Dev Siri Moola, Mr M Bhakatvatsala, No.9, "Rangapuri", Lalbagh Road, Bangalore 560027 12. Mrs. Pratibha S. Moola, Mr. Siddartha S. Moola, Ms. Lakshmi S. Moola, Ms. Vidya S. Moola, Ms. Aparna S. Moola, No. 38, Wellington Street, Richmond Town, Bangalore-560 025. 13. Mrs Anuradha R Moola, Ms Sharuna R Moola, Ms Bhavana R Moola, Mr M Ramesh, Mr Vivesh R Moola, Centropolis, No.21, Langford Road, Richmond Town, Bangalore-560025 14. Mrs. Dechu R. Moola, Mr. Vishnu R. Moola, Ms. Brinda Devi Moola, Ms. Maya R. Moola, Flat No. 32, August Mansion Apts. No. 42, Curley Street, Richmond Town, Bangalore-560 025.

I, B. A. Ravi hereby declare that the particulars given above are true to the best of my knowledge and belief.

Place : Bangalore
Date : 28-02-2023
Sd/-
(B.A. Ravi)
Publisher

ಕೆ.ವಿಶ್ವನಾಥ್ ಸ್ಮರಣೆ ನಾಳೆ

ಬೆಂಗಳೂರು: ಮಲ್ಲೇಶ್ವರದ ‘ಅಭಿಜ್ಞಾನ’ದಿಂದ ಮಾರ್ಚ್ 2ರಂದು ಚಿತ್ರನಿರ್ದೇಶಕ ಕೆ.ವಿಶ್ವನಾಥ್ ಸಂಸ್ಮರಣೆ ಆಯೋಜಿಸಲಾಗಿದೆ.

ಅಂದು ಸಂಜೆ 6ರಿಂದ 8ರ ತನಕ ಬಸವನಗುಡಿಯ ಬಿ.ಪಿ.ವಾಡಿಯಾ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ನಟ ಶ್ರೀಧರ್, ಲೇಖಕ ಆರ್.ಗಣೇಶ್, ನಟರಾದ ಪ್ರಕಾಶ್ ಬೆಳವಾಡಿ ಹಾಗೂ ‘ಮಾಸ್ಟರ್’ ಮಂಜುನಾಥ್ ಪಾಲ್ಗೊಳ್ಳಲಿದ್ದಾರೆ. ‘ಶಂಕರಾಭರಣಂ’, ‘ಸಾಗರಸಂಗಮಂ’, ಸದಭಿರುಚಿ ಚಿತ್ರಗಳನ್ನ ನಿರ್ದೇಶಿಸಿದ್ದ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ನಿರ್ವಾಣಿ ಭಗವತಿ ಮತ್ತು ಅಣ್ಣಮ್ಮ ದೇವಿಯ ಮಹಾ ಶಿವರಾತ್ರಿ ಉತ್ಸವ: ನಿರ್ವಾಣಿ ಭಗವತಿ ದೇವಿಗೆ ಭಕ್ತರಿಂದ ಮಡಿಲಕ್ಕಿ ತುಂಬುವುದು, ಸ್ಥಳ: ಶ್ರೀನಿರ್ವಾಣಿ ಭಗವತಿ ಸೇವಾ ಮಂಡಳಿ, ಕುರುಹಿನಶೆಟ್ಟಿ, ಶ್ರೀರಾಮ ಭಜನಾ ಮಂದಿರ, ಎಂ.ಆರ್. ಲೇನ್, ಮನವರ್ತಿಪೇಟೆ, ಬೆಳಿಗ್ಗೆ 8ರಿಂದ

ನಾಟಕ ಪ್ರದರ್ಶನ: ‘ಚೆಕಾವ್ ಟು ಶಾಂಪೇನ್’, ನಿರ್ದೇಶನ: ಅಭಿಮನ್ಯು ಭೂಪತಿ, ಆಯೋಜನೆ: ಬೆಂಗಳೂರು ಥಿಯೇಟರ್ ಆನ್‌ಸಂಬಲ್, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಎಂ.ಎಸ್. ರಾಮಯ್ಯ ಜನ್ಮ ಶತಮಾನೋತ್ಸವ: ಮುಖ್ಯ ಅತಿಥಿ: ಉಪರಾಷ್ಟ್ರಪತಿ ಜಗದೀಪ್ ಧನಕರ್, ಅಧ್ಯಕ್ಷತೆ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಗೌರವ ಅತಿಥಿಗಳು: ಬಸವರಾಜ ಬೊಮ್ಮಾಯಿ, ಪ್ರಲ್ಹಾದ ಜೋಶಿ, ಉಪಸ್ಥಿತಿ: ಎಂ.ಆರ್. ಜಯರಾಂ, ಎಂ.ಆರ್. ಸೀತಾರಾಂ, ಎಂ.ಆರ್. ರಾಮಯ್ಯ, ಆಯೋಜನೆ ಹಾಗೂ ಸ್ಥಳ: ಜ್ಞಾನಗಂಗೋತ್ರಿ ಕ್ಯಾಂಪಸ್, ಎಂ.ಎಸ್. ರಾಮಯ್ಯ ನಗರ, ನ್ಯೂ ಬಿಇಎಲ್ ರಸ್ತೆ, ಬೆಳಿಗ್ಗೆ 11.30



ಜಗದೀಪ್ ಧನಕರ್

3ರಿಂದ ‘ತಂತ್ರಜ್ಞಾನದಲ್ಲಿ ನಾವೀನ್ಯತೆ’ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಯಿವಿದ್ಯಾ ತಾಂತ್ರಿಕ ಮಹಾವಿದ್ಯಾಲಯವು ಮಾರ್ಚ್ 3ರಿಂದ 5ರ ವರೆಗೆ ‘ತಂತ್ರಜ್ಞಾನದಲ್ಲಿ ನಾವೀನ್ಯತೆ (ಇನೊಕಾನ್-2023)’ ಕುರಿತು ದ್ವಿತೀಯ ಅಂತರರಾಷ್ಟ್ರೀಯ ಸಮ್ಮೇಳನ ಆಯೋಜಿಸಿದೆ.

ರಾಜರನುಕುಂಟೆಯ ಮಹಾವಿದ್ಯಾಲಯದ ಆವರಣದಲ್ಲಿ ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಮೂರು ದಿನಗಳ ಕಾಲ ಸಮ್ಮೇಳನ ನಡೆಯಲಿದೆ.

ಸಮ್ಮೇಳನದಲ್ಲಿ ವಿಶ್ವದ 38 ರಾಷ್ಟ್ರಗಳಿಂದ 250ಕ್ಕೂ ಹೆಚ್ಚು ಸಂಶೋಧಕರು, ಸಂಶೋಧನಾ ವಿದ್ಯಾರ್ಥಿಗಳು, 25ಕ್ಕೂ ಹೆಚ್ಚು ತಂತ್ರಜ್ಞಾನ ಪರಿಣತರು, ವಿಜ್ಞಾನಿಗಳು ಭಾಗವಹಿಸಲಿದ್ದಾರೆ. ಭೌತಿಕವಾಗಿ ಮತ್ತು ವರ್ಚುಯಲ್ ಮೂಲಕ ಪ್ರಬಂಧಗಳ ಮಂಡನೆ ನಡೆಯಲಿದೆ ಎಂದು ಇನೊಕಾನ್ ಕಾರ್ಯದರ್ಶಿ ಡಾ.ಶಾಂತಕುಮಾರ್ ಬಿ. ಪಾಟೀಲ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಪ್ರಾಂಶುಪಾಲ ಡಾ.ಎಚ್.ಎಸ್. ರಮೇಶ್ ಬಾಬು ಮಾತನಾಡಿ, ಸಮ್ಮೇಳನವು ಶೈಕ್ಷಣಿಕ ಸಂಸ್ಥೆಗಳನ್ನು ಮತ್ತು ಕೈಗಾರಿಕೆಗಳನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸುತ್ತದೆ ಎಂದು ಅವರು ಹೇಳಿದರು.

₹1 ಕೋಟಿಯ ಮಾನನಷ್ಟ ದಾವೆ

ರೂಪಾ ಮೌದ್ಗಿಲ್ ವಿರುದ್ಧ ಕೋರ್ಟ್‌ಗೆ ಖಾಸಗಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫೇಸ್‌ಬುಕ್, ಪತ್ರಿಕೆ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ಮುಖಾಂತರ ನನ್ನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುವ ಮೂಲಕ ನನ್ನ ಮಾನಹಾನಿ ಮಾಡಿರುವ ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡು ಕ್ರಮ ಜರುಗಿಸಬೇಕು' ಎಂದು ಕೋರಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ನಗರದ 24ನೇ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಕೋರ್ಟ್‌ನಲ್ಲಿ ದೂರು ದಾಖಲಿಸಿದ್ದಾರೆ.

ಈ ಕುರಿತಂತೆ ವಕಾಲತ್ತು ವಹಿಸಿರುವ ವಕೀಲ ಎಂ.ಆರ್.ಅನಿಲ್ ಅವರು ರೋಹಿಣಿ ಸಿಂಧೂರಿ ಪರವಾದ ಖಾಸಗಿ ದೂರನ್ನು ಮಂಗಳವಾರ ನ್ಯಾಯಾಲಯಕ್ಕೆ ಸಲ್ಲಿಸಿ, ನ್ಯಾಯಾಧೀಶ ಬಿ.ಸಿ.ಚಂದ್ರಶೇಖರ ಅವರ ಮುಂದೆ ವಾದ ಮಂಡಿಸಿದರು. 'ಈ ಖಾಸಗಿ ದೂರನ್ನು ದಾಖಲಿಸಿಕೊಂಡು ಆರೋಪಿ ರೂಪಾ ಮೌದ್ಗಿಲ್ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಕೋರಿದರು. ಹೆಚ್ಚಿನ ವಿಚಾರಣೆಯ ಕ್ರಮವಾಗಿ ಪ್ರಕರಣವನ್ನು ಮಾರ್ಚ್ 3ಕ್ಕೆ ಮುಂದೂಡಲಾಗಿದೆ.

ದೂರಿನಲ್ಲಿ ಏನಿದೆ?: 'ರೂಪಾ ಅವರು ಫೆಬ್ರುವರಿ 18 ಮತ್ತು 19ರಂದು ತಮ್ಮ ಫೇಸ್‌ಬುಕ್ ಅಕೌಂಟ್‌ನಲ್ಲಿ ನನ್ನ ವಿರುದ್ಧ ಇಲ್ಲಸಲ್ಲದ ಕೀಳು ಅಭಿರುಚಿಯಿಂದ ಕೂಡಿದ ಆರೋಪಗಳನ್ನು ಮಾಡಿದ್ದಾರೆ. ಇವು ನನ್ನ ವ್ಯಕ್ತಿತ್ವಕ್ಕೆ ಧಕ್ಕೆ ಉಂಟು ಮಾಡುವಂತಿವೆ ಹಾಗೂ ನನ್ನ ತೇಜೋವಧೆ ಮಾಡುವ ದುರುದ್ದೇಶದಿಂದ ಕೂಡಿವೆ. ಈ ಆರೋಪಗಳಿಂದ ನನ್ನ ಖಾಸಗಿ, ಸಾಮಾಜಿಕ ಮತ್ತು ವೃತ್ತಿ ಬದುಕಿನ ಮೇಲೆ ಗಂಭೀರ ಪರಿಣಾಮ ಕಂಡುಬಂದಿದ್ದು ಮಾನಸಿಕ ಯಾತನೆ ಉಂಟುಮಾಡಿವೆ' ಎಂದು ದೂರಿನಲ್ಲಿ ವಿವರಿಸಲಾಗಿದೆ.

'ಭಾರತೀಯ ಆಡಳಿತ ಸೇವೆಯ ನಿಯಮಕ್ಕೆ ವಿರುದ್ಧವಾಗಿ ಮಾಧ್ಯಮಗಳ ಮುಂದೆ ಬಹಿರಂಗವಾಗಿ ನನ್ನನ್ನು ಟೀಕೆ ಮಾಡುವ ಮೂಲಕ ನನಗೆ ಮಾತ್ರ ವಲ್ಲದೆ ಸರ್ಕಾರಕ್ಕೂ ಮುಜುಗರ ಉಂಟು ಮಾಡಿದ್ದಾರೆ. ನನ್ನ ಇಷ್ಟು ವರ್ಷಗಳ ಪ್ರಾಮಾಣಿಕ ಸರ್ಕಾರಿ ನೌಕರಿಯ ಸದ್ವರ್ತನೆಯನ್ನು ಪ್ರಶ್ನಿಸಿದ್ದಾರೆ. ಆದ್ದರಿಂದ, ನನಗಾಗಿರುವ ಮಾನನಷ್ಟಕ್ಕೆ ಪರಿಹಾರವಾಗಿ ₹1 ಕೋಟಿ ಕೊಡಿಸಿಕೊಡಬೇಕು ಮತ್ತು ಸೂಕ್ತ ದಂಡನೀಯ ಕ್ರಮ ಕೈಗೊಳ್ಳಬೇಕು' ಎಂದು ರೋಹಿಣಿ ಕೋರಿದ್ದಾರೆ.

ಜ್ಞಾನಭಾರತಿಗೆ ಮತ್ತೆ ನೋಟಿಸ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯವನ್ನು ವಿವಿ ಆವರಣದಲ್ಲೇ ಸಂಸ್ಕರಿಸುವಂತೆ ಬಿಬಿಎಂಪಿ 5ನೇ ಬಾರಿಗೆ 'ನೆನಪೋಲೆ'ಯನ್ನು ಕಳುಹಿಸಿದೆ.

'ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕ' ವ್ಯಾಪ್ತಿಗೆ ಜ್ಞಾನಭಾರತಿ ಒಳಪಡುವುದರಿಂದ, ಸರ್ಕಾರದ ಆದೇಶ ಹಾಗೂ ಸುತ್ತೋಲೆಗಳಲ್ಲಿ 'ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ಕರ್ತವ್ಯಗಳು' ಹಾಗೂ ಘನತ್ಯಾಜ್ಯ ನಿರ್ವಹಣೆ ಉಪನಿಯಮಗಳನ್ನು ಪಾಲಿಸಲು ವಿವಿಗೆ 2021ರ ಏಪ್ರಿಲ್‌ನಿಂದ ಸೂಚನೆ, ಪತ್ರಗಳ ಮೂಲಕ ತಿಳಿಸಲಾಗಿತ್ತು. ಇದನ್ನು ಪಾಲಿಸದ್ದರಿಂದ 2023ರ ಜನವರಿ ತಿಂಗಳಿಂದ ಜ್ಞಾನಭಾರತಿ ಆವರಣದಿಂದ ಘನತ್ಯಾಜ್ಯ ಸಂಗ್ರಹ ಮಾಡುವುದನ್ನು ಬಿಬಿಎಂಪಿ ನಿಲ್ಲಿಸಿದೆ. ಹೀಗಾಗಿ ವಿವಿ ಆವರಣದಲ್ಲೇ ತ್ಯಾಜ್ಯಕ್ಕೆ ಬೆಂಕಿ ಹಚ್ಚಲಾಗುತ್ತಿದೆ.

'ಜ್ಞಾನಭಾರತಿ ಆವರಣದಲ್ಲಿ ಅಕ್ರಮವಾಗಿ ತ್ಯಾಜ್ಯ ಸುರಿದು, ಬೆಂಕಿ ಹಚ್ಚಲಾಗುತ್ತಿದೆ. ಇದನ್ನು ನಿಯಂತ್ರಿಸಬೇಕು' ಎಂದು ಸಂತೋಷ್ ಮರೂರು ಅವರು ಬಿಬಿಎಂಪಿಯ ರಾಜರಾಜೇಶ್ವರಿನಗರ ವಲಯದ ಜಂಟಿ ಆಯುಕ್ತರಿಗೆ ಪತ್ರ ಬರೆದಿದ್ದರು.

'ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ಕರ್ತವ್ಯಗಳನ್ನು ಜ್ಞಾನಭಾರತಿಯೇ ನಿರ್ವಹಿಸಬೇಕು. ಘನತ್ಯಾಜ್ಯ ಸಂಸ್ಕರಣೆ, ವಿಲೇವಾರಿ ವಿವಿಗೇ ಸೇರಿದ್ದಾಗಿದೆ. ಅದರ ಕ್ರಮ ಕೈಗೊಂಡು ದೂರು ನೀಡಿರುವ ಸಂತೋಷ್ ಹಾಗೂ ಬಿಬಿಎಂಪಿಗೆ ಮಾಹಿತಿ ನೀಡಬೇಕು' ಎಂದು ಬಿಬಿಎಂಪಿ ಫೆ.28ರಂದು ಬೆಂಗಳೂರು ಕುಲಪತಿ ಅವರಿಗೆ 5ನೇ ನೆನಪೋಲೆ ಕಳುಹಿಸಿದೆ.

'ಬೆಂಗಳೂರು ವಿವಿ ಆವರಣದಲ್ಲಿ ತ್ಯಾಜ್ಯ ಸಂಸ್ಕರಣೆ ಘಟಕ ಸ್ಥಾಪಿಸುತ್ತೇವೆ' ಎಂದು ವಿವಿಯ ಕುಲಪತಿ ಸೇರಿದಂತೆ ಎಲ್ಲರೂ ನೋಟಿಸ್ ಅಥವಾ ತ್ಯಾಜ್ಯಕ್ಕೆ ಬೆಂಕಿಯಂತಹ ಪ್ರಕರಣ ಹೆಚ್ಚಾದಾಗ ಹೇಳುತ್ತಾರೆ. ನಂತರ ಮರೆತುಹೋಗುತ್ತಾರೆ' ಎಂಬುದು ಸ್ಥಳೀಯರ ಅಭಿಪ್ರಾಯ. ಇನ್ನು ಇತ್ತೀಚೆಗೆ ತ್ಯಾಜ್ಯ ನಿರ್ವಹಣೆಯ ಬಗ್ಗೆ 15 ದಿನಗಳಲ್ಲಿ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರೂ ಬೆಂಗಳೂರು ಜ್ಞಾನಭಾರತಿ ವಿವಿಗೆ ನೋಟಿಸ್ ನೀಡಿದ್ದರು.

'ಡಿಕೆಶಿಗೇಕೆ ಬಿಜೆಪಿ ಚಿಂತೆ?'

ಬೆಂಗಳೂರು: 'ಡಿ.ಕೆ. ಶಿವಕುಮಾರ್ ಅವರಿಗೇಕೆ ಬಿಜೆಪಿಯ ಚಿಂತೆ. ಅವರು ಎಲ್ಲಾದರೂ ಪಕ್ಷ ಕಟ್ಟಿದ್ದಾರೆಯೆ' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಪ್ರಶ್ನಿಸಿದರು.

ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಕಣ್ಣೀರು ಹಾಕಿದ್ದ ಘಟನೆ ಕುರಿತು ಶಿವಕುಮಾರ್ ನೀಡಿದ್ದ ಹೇಳಿಕೆ ಬಗ್ಗೆ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಸಚಿವರು, 'ಯಡಿಯೂರಪ್ಪ ಅವರು 60 ವರ್ಷದಿಂದ ರಾಜಕಾರಣದಲ್ಲಿ ಇದ್ದಾರೆ. ಸುದೀರ್ಘ ಹಾದಿಯನ್ನು ಕ್ರಮಿಸಿ ಮೇಲೆ ಬಂದವರು. ಅವರನ್ನು ಯಾವುದಕ್ಕೂ ಹೋಲಿಕೆ ಮಾಡಬೇಡಿ' ಎಂದರು.

'ನಾನು ಬಿಜೆಪಿಯಲ್ಲಿ ಇದ್ದೇನೆ. ಮುಂದೆಯೂ ಇದೇ ಪಕ್ಷದಿಂದಲೇ ಸ್ಪರ್ಧೆ ಮಾಡುತ್ತೇನೆ. ನಾವು ಯಾರೂ ಬೇರೆ ಯಾವುದೇ ಪಕ್ಷಕ್ಕೂ ಹೋಗುವುದಿಲ್ಲ. ಯಾವ ಪಕ್ಷದಿಂದಲೂ ನಮಗೆ ಆಹ್ವಾನವೂ ಬಂದಿಲ್ಲ' ಎಂದು ಹೇಳಿದರು.

ಸಿಸೋಡಿಯಾ, ಜೈನ್ ರಾಜೀನಾಮೆ

ದೆಹಲಿ ಅಬಕಾರಿ ನೀತಿ ಹಗರಣ: ಕೇಜ್ರಿವಾಲ್ ರಾಜೀನಾಮೆಗೂ ಬಿಜೆಪಿ ಆಗ್ರಹ

ನವದೆಹಲಿ (ಪಿಟಿಐ): ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ, ಸಚಿವ ಸತ್ಯೇಂದರ್ ಜೈನ್ ಅವರು ಮಂಗಳವಾರ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದು, ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅಂಗೀಕರಿಸಿದ್ದಾರೆ.

ದೆಹಲಿ ಅಬಕಾರಿ ನೀತಿ ಹಗರಣ ಸಂಬಂಧ ಸಿಸೋಡಿಯಾ ಅವರನ್ನು ಸಿಬಿಐ ಬಂಧಿಸಿದೆ. ಹಣ ಅಕ್ರಮ ವರ್ಗಾವಣೆ ಸಂಬಂಧ ಸತ್ಯೇಂದರ್ ಜೈನ್ ಅವರು ಕಳೆದ ಮೇ ತಿಂಗಳಿನಿಂದ ತಿಹಾರ್ ಜೈಲಿನಲ್ಲಿದ್ದಾರೆ. ಜೈನ್ ಹಾಗೂ ಸಿಸೋಡಿಯಾ ಅವರು ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಹಲವು ತಿಂಗಳಿಂದ ಆಗ್ರಹಿಸುತ್ತಿತ್ತು.

ಸಿಸೋಡಿಯಾ ಅವರ ಬಳಿ 18 ಖಾತೆಗಳು ಇದ್ದವು. ಇದರಲ್ಲಿ ಆರೋಗ್ಯ, ಹಣಕಾಸು, ಶಿಕ್ಷಣ ಮತ್ತು ಗೃಹ ಇಲಾಖೆಗಳು ಸೇರಿವೆ. ಸತ್ಯೇಂದರ್ ಜೈನ್ ಅವರ ಬಂಧನ ನಂತರ, ಜೈನ್ ಅವರ ಬಳಿ ಇದ್ದ ಆರೋಗ್ಯ, ಗೃಹ, ನಗರಾಭಿವೃದ್ಧಿ ಖಾತೆಗಳನ್ನೂ ಸಿಸೋಡಿಯಾ ಅವರಿಗೆ ನೀಡಲಾಗಿತ್ತು.


ಸಿಸೋಡಿಯಾ


ಸತ್ಯೇಂದರ್ ಜೈನ್

ಇಲ್ಲಿಯವರೆಗೂ ಜೈನ್ ಅವರು ಖಾತೆರಹಿತ ಸಚಿವರಾಗಿಯೇ ಇದ್ದರು.

ಸಿಸೋಡಿಯಾ ಅವರ ಬಳಿ ಇದ್ದ 18 ಖಾತೆಗಳನ್ನು ಕಂದಾಯ ಸಚಿವ ಕೈಲಾಶ್ ಗೆಹಲೋತ್ ಹಾಗೂ ಸಾಮಾಜಿಕ ಅಭಿವೃದ್ಧಿ ಸಚಿವ ರಾಜ್ ಕುಮಾರ್ ಆನಂದ್ ಅವರಿಗೆ ಹಂಚಿಕೆ ಮಾಡಬಹುದು ಎಂದು ಮೂಲಗಳು ತಿಳಿಸಿವೆ.

'ಗುಣಮಟ್ಟದ ಶಿಕ್ಷಣ ಹಾಗೂ ಉತ್ತಮ ಆರೋಗ್ಯ ಸೌಲಭ್ಯ ಎನ್ನುವ ಆಮ್ ಆದ್ಮಿ ಪಕ್ಷದ ಆಡಳಿತ ಕಾರ್ಯಸೂಚಿಯನ್ನು ಜಾರಿ ಮಾಡುವಲ್ಲಿ ಸಿಸೋಡಿಯಾ ಹಾಗೂ ಜೈನ್ ಅವರು ಮುಖ್ಯ ಪಾತ್ರ ವಹಿಸಿದ್ದರು. ದೆಹಲಿಯ ಶಿಕ್ಷಣ ಹಾಗೂ ಆರೋಗ್ಯ ಸೇವಾ ವಲಯದಲ್ಲಿ ಮಹತ್ವದ ಬದಲಾವಣೆ ತರುವಲ್ಲಿ ಈ ಇಬ್ಬರು ಯಶಸ್ವಿಯಾಗಿದ್ದಾರೆ' ಎಂದು ಪಕ್ಷ ಬಣ್ಣಿಸಿದೆ.

> ಇದು ಬಿಜೆಪಿ ಕಾರ್ಯಕರ್ತರು ಹಾಗೂ ಸತ್ಯಕ್ಕೆ ಸಂದ ಜಯ. ಅರವಿಂದ ಕೇಜ್ರಿವಾಲ್ ಅವರೂ ರಾಜೀನಾಮೆ ನೀಡಬೇಕು ಎಂಬ ನಮ್ಮ ಹೋರಾಟ ಮುಂದುವರಿಯಲಿದೆ
>
> **ವಿರೇಂದ್ರ ಸಚ್‌ದೇವ್**
> ಬಿಜೆಪಿ ದೆಹಲಿ ಘಟಕದ ಅಧ್ಯಕ್ಷ

> ಇದೊಂದು ಭ್ರಷ್ಟಾಚಾರ ಪ್ರಕರಣ ಎಂಬುದು ಸ್ಪಷ್ಟ. ಭ್ರಷ್ಟಾಚಾರ ವಿರೋಧಿ ಹೋರಾಟದಿಂದ ಹುಟ್ಟಿದ ಪಕ್ಷವು ಅಬಕಾರಿ ನೀತಿ ಹಗರಣದ ಕುರಿತ ಪ್ರಶ್ನೆಗಳಿಗೆ ಉತ್ತರಿಸಬೇಕು
>
> **ಅಜಯ್ ಮಾಕನ್,** ಕಾಂಗ್ರೆಸ್ ನಾಯಕ

ಬಜೆಟ್ ಸಿದ್ಧತೆ ಮೇಲೆ ಪರಿಣಾಮ

ದೆಹಲಿ ಉಪಮುಖ್ಯಮಂತ್ರಿ ಆಗಿದ್ದ ಮನೀಷ್ ಸಿಸೋಡಿಯಾ ಅವರು ಹಣಕಾಸು ಖಾತೆಯನ್ನೂ ನಿರ್ವಹಿಸುತ್ತಿದ್ದರು. ಈಗ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವುದರಿಂದ ದೆಹಲಿ ಬಜೆಟ್ ಸಿದ್ಧತೆ ಮೇಲೆ ಪರಿಣಾಮ ಬೀರಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

'ವಿವಿಧ ಇಲಾಖೆಗಳು ತಮ್ಮ ಬಜೆಟ್ ಅಂದಾಜುಗಳನ್ನು ಸಲ್ಲಿಸಿವೆ. ಅನುದಾನ ಹಂಚಿಕೆಗಳ ಕುರಿತು ಹಣಕಾಸು ಇಲಾಖೆಯು ಸಿದ್ಧತೆ ನಡೆಸುತ್ತಿತ್ತು. ಮಾರ್ಚ್ ಮೊದಲ ಅಥವಾ ಎರಡನೇ ವಾರದಲ್ಲಿ ಬಜೆಟ್ ಮಂಡಿಸುವ ಯೋಜನೆ ಇತ್ತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಸೋಡಿಯಾ ಅವರ ಬಂಧನದ ಸಂಭವ ಇದ್ದಿದ್ದರಿಂದ ಕಂದಾಯ ಸಚಿವ ಗೆಹಲೋತ್ ಅವರೂ ಬಜೆಟ್ ಸಂಬಂಧಿತ ಸಭೆಗಳಿಗೆ ಹಾಜರಾಗುತ್ತಿದ್ದರು. ಆದ್ದರಿಂದ ಗೆಹಲೋತ್ ಅವರೇ ಬಜೆಟ್ ಮಂಡಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಆರ್‌ಆರ್‌ಐನಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ರಾಮನ್ ಅಪರೂಪದ ಚಿತ್ರಗಳ ದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ ಸಿ.ವಿ.ರಾಮನ್ ಅವರ ಬಾಲ್ಯ, ಬಾಲ್ಯದ ಮನೆ, ಕುಟುಂಬ, ಶಿಕ್ಷಣ ಪಡೆದ ಸಂಸ್ಥೆಗಳು, ಭೌತವಿಜ್ಞಾನದ ಸಂಶೋಧನೆಗಳು... ಹೀಗೆ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ (ಆರ್‌ಆರ್‌ಐ) ನೂತನವಾಗಿ ನಿರ್ಮಿಸಿರುವ ಗ್ಯಾಲರಿಯಲ್ಲಿ ರಾಮನ್ ಅವರು ವಿಜ್ಞಾನ ಕ್ಷೇತ್ರಕ್ಕೆ ನೀಡಿದ್ದ ಕೊಡುಗೆಯ ಛಾಯಾಚಿತ್ರ ಗ್ಯಾಲರಿ ಗಮನ ಸೆಳೆಯುತ್ತಿದೆ.

ರಾಮನ್ ಅವರ ಅಪರೂಪದ ಛಾಯಾಚಿತ್ರಗಳನ್ನು ಸಂಗ್ರಹಿಸಿ ಆರ್‌ಆರ್‌ಐ ಗ್ಯಾಲರಿ ನಿರ್ಮಿಸಿದೆ. ಇದನ್ನು ಮಂಗಳವಾರ ಇಸ್ರೊ ಮಾಜಿ ಅಧ್ಯಕ್ಷ ಡಾ.ಕೆ.ಕಸ್ತೂರಿರಂಗನ್ ಅವರು ಉದ್ಘಾಟಿಸಿದರು. ಬಳಿಕ ಅದನ್ನು ವೀಕ್ಷಿಸಿದರು.

ಸಂಸ್ಥೆಯ ಆವರಣದಲ್ಲೇ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದ ಮಕ್ಕಳು ರಾಮನ್ ಅವರ ಚಿತ್ರ ವೀಕ್ಷಿಸಿ ಅವರ ಕೊಡುಗೆಯನ್ನು ಕೊಂಡಾಡಿದರು.

ಗ್ಯಾಲರಿ ವಿಶೇಷತೆ ಏನು?: ಚಂದ್ರಶೇಖರ ವೆಂಕಟರಾಮನ್ ಅವರು ಜನಿಸಿದ ತಮಿಳುನಾಡಿನ ತಿರುಚಿನಾಪಳ್ಳಿ ಜಿಲ್ಲೆಯ ತಿರುವನೈಕಾವಲ್‌ನ ಮನೆಯ ಚಿತ್ರ, ರಾಮನ್ ಅವರು ಭೌತವಿಜ್ಞಾನಿಗಳ ಜತೆಗೆ ಸಮಾಲೋಚನೆ, ಕೈಗಾರಿಕೆ ಹಾಗೂ ಸಂಶೋಧನೆಗಳ ವಸ್ತುಪ್ರದರ್ಶನಕ್ಕೆ ಭೇಟಿ ನೀಡಿದ್ದ ಸಂದರ್ಭ, ಶಾಲಾ ಮಕ್ಕಳ ಜೊತೆಗಿರುವ ಚಿತ್ರ, ಅವರ ಸಂಶೋಧನಾ ಕ್ಷೇತ್ರದ ಕೆಲಸಗಳು, ಪ್ರಯೋಗಾಲಯದಲ್ಲಿ ಸಂಶೋಧನೆ ನಡೆಸುತ್ತಿದ್ದ ದೃಶ್ಯ, ಅವರು ಕಲಿತ ಪ್ರೆಸಿಡೆನ್ಸಿ ಕಾಲೇಜು...ಹೀಗೆ ಹತ್ತು ಹಲವಾರು ಫೋಟೊಗಳಿವೆ.



ಇಸ್ರೊ ಮಾಜಿ ಅಧ್ಯಕ್ಷ ಕೆ.ಕಸ್ತೂರಿರಂಗನ್ ಅವರೊಂದಿಗೆ ಶಾಲಾ ವಿದ್ಯಾರ್ಥಿಗಳು ಸಮಾಲೋಚನೆ ನಡೆಸಿದರು – ಪ್ರಜಾವಾಣಿ ಚಿತ್ರ

ಪ್ರತಿ ಛಾಯಾಚಿತ್ರದ ಬಳಿಯೂ ಅದಕ್ಕೆ ಸಂಬಂಧಿಸಿದ ವಿವರಣೆಯನ್ನು ಬರೆಯಲಾಗಿದೆ. ರಾಮನ್ ಅವರ ಬದುಕು, ಸಂಶೋಧನೆಗಳನ್ನು ಈ ಚಿತ್ರಗಳು ಸಾರುತ್ತಿವೆ.

ಡಾ.ಕೆ.ಕಸ್ತೂರಿರಂಗನ್ ಅವರು ಮಾತನಾಡಿ, 'ರಾಮನ್ ಅವರು ಆರ್‌ಆರ್‌ಐ ಎಂಬ ಅದ್ಭುತ ಸಂಸ್ಥೆ ಕಟ್ಟಿದ್ದಾರೆ. ನೊಬೆಲ್ ಪ್ರಶಸ್ತಿ ಪುರಸ್ಕೃತರಾಗಿರುವ ದೇಶದ ಮೊದಲ ವಿಜ್ಞಾನಿ ಎಂಬ ಹೆಗ್ಗಳಿಕೆ ಅವರದ್ದಾಗಿದೆ. 'ರಾಮನ್ ಎಫೆಕ್ಟ್' ಎಂಬ ಸಂಶೋಧನೆಗೆ ಭೌತವಿಜ್ಞಾನ ಕ್ಷೇತ್ರದಲ್ಲಿ ಈ ಪ್ರಶಸ್ತಿ ಗಳಿಸಿದ್ದರು. ಅವರು ಉತ್ತಮ ವಾಗ್ಮಿಯೂ ಆಗಿದ್ದರು. ವಿಜ್ಞಾನ ನಿಂತ ನೀರಲ್ಲ. ಸಂಶೋಧನೆ ನಡೆದಂತೆ ಹೊಸ ಆವಿಷ್ಕಾರಗಳು ಬರುತ್ತವೆಂದು ರಾಮನ್ ನಂಬಿದ್ದರು' ಎಂದು ಹೇಳಿದರು.

'ತಮ್ಮ ಯೋಚನೆ ಬಳಸಿ ಹೊಸ ಸಂಶೋಧನೆ ನಡೆಸುವಂತೆ ವಿದ್ಯಾರ್ಥಿಗಳಿಗೆ ರಾಮನ್ ಪ್ರೋತ್ಸಾಹಿಸುತ್ತಿದ್ದರು. ರಾಮನ್ ಅವರು ಸರಳ ಹಾಗೂ ಕಡಿಮೆ ವೆಚ್ಚದ ವಸ್ತುಗಳನ್ನು ಸಂಶೋಧನೆಗೆ ಬಳಸುತ್ತಿದ್ದರು. ಆ ಸಂಶೋಧನೆಗಳು ಇಂದಿಗೂ ನಮ್ಮ ಮೇಲೆ ಪರಿಣಾಮ ಬೀರುತ್ತಿವೆ' ಎಂದರು.

ರಾಮನ್ ಅವರು ಚಿಕ್ಕ ವಯಸ್ಸಿನಲ್ಲೇ ಬುದ್ಧಿವಂತರಾಗಿದ್ದರು. ವಿದ್ಯಾಭ್ಯಾಸ ಹಾಗೂ ವೃತ್ತಿ ಜೀವನದಲ್ಲಿ ಅಪಾರ ಸಾಧನೆ ಮಾಡಿದ್ದರು ಎಂದು ಸ್ಮರಿಸಿದರು.


ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಸಮಿತಿ ಅಧ್ಯಕ್ಷರೂ ಆಗಿರುವ ಅವರು, 'ಎನ್‌ಇಪಿಯ ಮೂಲಕ ಶಿಕ್ಷಣದಲ್ಲಿ ಬದಲಾವಣೆ ತರಲಾಗುತ್ತಿದೆ. ಹೊಸ ಶಿಕ್ಷಣ ಪದ್ಧತಿಯಿಂದ ವಿಜ್ಞಾನ, ಕಲೆ, ಸಂಗೀತ ಯಾವ ವಿಷಯ ಬೇಕಿದ್ದರೂ ಆಯ್ಕೆ ಮಾಡಿಕೊಳ್ಳಬಹುದು. ಪದವಿ ವೇಳೆಗೆ ಎಲ್ಲ ಕ್ಷೇತ್ರಗಳಲ್ಲೂ ಪರಿಣತಿ ಸಾಧಿಸಬೇಕು ಎಂಬುದು ಇದರ ಉದ್ದೇಶವಾಗಿದೆ' ಎಂದರು.

'ಎನ್‌ಎಚ್‌ಎಂ: ಸೇವೆ ಕಾಯಂಗೊಳಿಸಿ'

ಬೆಂಗಳೂರು: 'ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಬೇಕು' ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಷ್ಟ್ರೀಯ ಕಾರ್ಯಾಧ್ಯಕ್ಷ ಎಂ.ವೆಂಕಟಸ್ವಾಮಿ ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎನ್‌ಎಚ್‌ಎಂ ಗುತ್ತಿಗೆ ನೌಕರರು ಕೋವಿಡ್ ಸಂದರ್ಭದಲ್ಲಿ ಆರೋಗ್ಯ ಲೆಕ್ಕಿಸದೆ ಸೇವೆ ಸಲ್ಲಿಸಿದ್ದಾರೆ. ಇದೀಗ ಸಮಾನ ಕೆಲಸಕ್ಕೆ ಸಮಾನ ವೇತನ, ವಿಶೇಷ ಭತ್ಯೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, 16 ದಿನಗಳಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಹೋರಾಟ ನಡೆಸುತ್ತಿದ್ದಾರೆ. ಪ್ರತಿಭಟನನಿರತರಲ್ಲಿ ಬಹುತೇಕರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಾಗಿದ್ದು, ಅವರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಉದಾಸೀನ ತೋರುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ತಂತ್ರಜ್ಞಾನ



ಏರ್‌ಬ್ಯಾಗ್ ಜೀನ್ಸ್




ಏರ್‌ಬ್ಯಾಗ್‌ಗಳು ಉಪಯೋಗವಾಗುವುದು ಎಂದರೆ, ಅದರ ಅರ್ಥ ಬಲವಾದ ಅಪಘಾತವಾಗಿದೆ ಎಂದೇ ಅರ್ಥ.

ಕ್ಷಮಾ ವಿ. ಭಾನುಪ್ರಕಾಶ್

ಮನೆಯಿಂದ ಹೊರಹೊರಟರೆ ಸಾಕು, ಎಲ್ಲರೂ ಆಸ್ಟ್ರೋನಾಟ್‌ಗಳ ಹಾಗೆ, ಧರಿಸಿದ ಉಡುಪಿನ ಮೇಲೊಂದು ಜ್ಯಾಕೆಟ್, ತಲೆಗೊಂದು ಹೆಲ್ಮೆಟ್, ಕಾಲುಗಳಿಗೆ ಬೂಟು ಧರಿಸಿ ಹೊರಡಬೇಕಾದ ಪರಿಸ್ಥಿತಿ! ಇದಕ್ಕೆ ಕಾರಣ, ಹೆಲ್ಮೆಟ್ ಹಾಕದಿದ್ದರೆ ದಾರಿಯಲ್ಲಿ ತಡೆದು ದಂಡ ಹಾಕುವ ಪೊಲೀಸರು ಎನ್ನಬೇಡಿ ಮತ್ತೆ. ಖಂಡಿತವಾಗಲೂ ಇದಕ್ಕೆ ಕಾರಣ ಚಂದ್ರನ ಮೇಲ್ಮೈಯಂತೆ ಕಾಣುವ, ಗುಂಡಿಗಳ ಆಗರವಾದ ರಸ್ತೆಗಳು, ಸದಾ ನಡೆಯುತ್ತಿರುವ ರಸ್ತೆ ಹಾಗೂ ಮೆಟ್ರೊ ಕಾಮಗಾರಿಯಿಂದ ಏಳುವ ದೂಳು ಇತ್ಯಾದಿ.

ಇಲ್ಲಿ, ಹೆಲ್ಮೆಟನ್ನು ಧರಿಸಬೇಕಿರುವುದು ಅಪಘಾತವಾದರೆ ಅಪಾಯವಾಗದಿರಲಿ ಎಂದು ತಾನೇ? ಇಂತಹ ಮುನ್ನೆಚ್ಚರಿಕೆಗಳನ್ನು ಸ್ವತಃ ನಾವೇ ತೆಗೆದುಕೊಳ್ಳಬೇಕೆಂಬ ಸಾಮಾನ್ಯಜ್ಞಾನ ಇಲ್ಲದಾಗ, ಸರ್ಕಾರಗಳು ಕಟ್ಟುನಿಟ್ಟಾದ ನಿಯಮಗಳನ್ನು ಜಾರಿ ಮಾಡಿ, ಕ್ರಮ ಕೈಗೊಳ್ಳಲೇಬೇಕಾಗುತ್ತದೆ. ಹಾಗೆ ಬಂದ ಹೆಲ್ಮೆಟ್ ಕಡ್ಡಾಯದ ನಿಯಮವನ್ನು ಹಿಂಬಾಲಿಸುತ್ತಲೇ ಬಂದ ಮತ್ತೊಂದು ನಿಯಮವೇ ಸೀಟ್‌ಬೆಲ್ಟ್ ಕಡ್ಡಾಯ ಎಂಬುದು. ಮೊದಲಿಗೆ ಚಾಲಕರಿಗೆ ಮಾತ್ರ ಅನ್ವಯವಾಗಿದ್ದ ಈ ನಿಯಮ, ಕ್ರಮೇಣ ಎಲ್ಲಾ ಪ್ರಯಾಣಿಕರಿಗೂ ಅನ್ವಯವೆನ್ನಲಾಯಿತು. ಈಗ ಏರ್‌ಬ್ಯಾಗ್‌ಗಳ ಸರದಿ. ಮೊದಲು ಚಾಲಕರಿಗೆ ಮಾತ್ರ ಮೀಸಲಾಗಿದ್ದ ಏರ್‌ಬ್ಯಾಗ್‌ಗಳು, ಈಗ ಕಾರಿನ ಎಲ್ಲಾ ಸೀಟ್‌ಗಳಿಗೂ ಲಭ್ಯವಾಗಲೇಬೇಕು ಎಂಬ ನಿಯಮ ಜಾರಿಯಾಗುತ್ತಿದೆ. ಅದಕ್ಕೆ ತಕ್ಕಹಾಗೆ ಕಾರು ತಯಾರಿಕಾ ಸಂಸ್ಥೆಗಳು ಹೊಸ ಬದಲಾವಣೆಗಳನ್ನು ಮಾಡಿಕೊಳ್ಳುತ್ತಿವೆ.



ಈ 'ಏರ್‌ಬ್ಯಾಗ್' ಎಂದರೆ 'ಗಾಳಿ ತುಂಬಿದ ಚೀಲ' ಎಂದರ್ಥ ಅಲ್ಲವೇ? ಇಷ್ಟೊಂದು ಸರಳವಾದ ಹೆಸರಿನ ಈ ಉತ್ಪನ್ನವನ್ನು ನೆನೆಸಿಕೊಂಡಾಕ್ಷಣ ಒಮ್ಮೆ ನಡುಕ ಬರಲಿಕ್ಕೂ ಸಾಕು. ಏಕೆಂದರೆ, ಏರ್‌ಬ್ಯಾಗ್‌ಗಳು ಉಪಯೋಗವಾಗುವುದು ಎಂದರೆ, ಅದರ ಅರ್ಥ ಬಲವಾದ ಅಪಘಾತವಾಗಿದೆ ಅಂತಲೇ. ಅಪಘಾತವಾದಾಗ, ಗಾಳಿಚೀಲಗಳು ಉಬ್ಬಿಕೊಂಡು, ನಮಗೆ ಗಾಡಿಯ ಯಾವ ಭಾಗವೂ ತಾಗಿ ದೈಹಿಕ ಆಘಾತವಾಗದಂತೆ ತಡೆಯುತ್ತವೆ; ಇಂತಹ ಜೀವರಕ್ಷಕ ಉತ್ಪನ್ನವನ್ನು ಮೊದಲಬಾರಿಗೆ ತಯಾರಿಸಿದವರು ಪೀಟರ್ ಫ್ಲೋಜಾನ್‌ಚಿಚ್ ಎಂಬ ಸ್ಲೋವೇನಿಯಾದ ಸಂಶೋಧಕ ಹಾಗೂ ಒಲಂಪಿಕ್ ಆಟಗಾರ. ಮೊದಲ ಏರ್‌ಬ್ಯಾಗ್ ತಯಾರಾದದ್ದು 1957ರಲ್ಲೇ ಆದರೂ, ವಾಣಿಜ್ಯಿಕವಾಗಿ ಕಾರುಗಳಲ್ಲಿ ಏರ್‌ಬ್ಯಾಗ್‌ಗಳ ಬಳಕೆಯು ಪ್ರಾರಂಭವಾದದ್ದು 1970ರಲ್ಲಿ.

ಈ ಗಾಳಿಚೀಲದಲ್ಲೇನೂ ಯಾವಾಗಲೂ ಗಾಳಿ ತುಂಬಿಕೊಂಡಿರುವುದಿಲ್ಲ; ಗಾಡಿಯು ಅಪಘಾತಕ್ಕೆ ಸಿಲುಕಿದಾಗ, ಆ ಅಚಾನಕ್ ಪರಿಣಾಮದ ಫಲಿತಾಂಶವಾಗಿ ಒಳಗೆ ಅಡಗಿದ್ದ ಈ ಚೀಲವು ಕ್ಷಣಮಾತ್ರದಲ್ಲೇ ಗಾಳಿಯನ್ನು ತುಂಬಿಕೊಂಡು, ಚಾಲಕರಿಗೆ ಹಾಗೂ ಪ್ರಯಾಣಿಕರಿಗೆ ರಕ್ಷಣಾಕವಚವಾಗಿ ಹೊರಬರುತ್ತದೆ. ಅಪಘಾತದ ಸಮಯದಲ್ಲಿ ಏರ್‌ಬ್ಯಾಗ್‌ಗಳು ಕ್ಷಣಮಾತ್ರದಲ್ಲೇ ಹೊರಬರಬೇಕೆಂದರೆ ಮೊದಲಿಗೆ ಆಘಾತ ಸಂವೇದಕಗಳು ಸರಿಯಾಗಿ ಕಾರ್ಯನಿರ್ವಹಿಸಬೇಕು; ಆ ಸಂವೇದಕಗಳಿಗೆ ಆಘಾತದ ಸಂವೇದನೆ ಸಿಕ್ಕ ಕ್ಷಣದಲ್ಲಿಯೇ, ಆಘಾತದ ಪ್ರಮಾಣ, ಅಪಾಯದ ಮಟ್ಟ, ಆಘಾತದ ಕೋನದಂತಹ ಅಂಶಗಳ ವಿಶ್ಲೇಷಣೆ ನಡೆಯುತ್ತದೆ; ಅಪಾಯದ ಮಟ್ಟ, ಆಘಾತದ ತೀವ್ರತೆ ಕಡಿಮೆಯಿದ್ದರೆ ಗಾಳಿಚೀಲಗಳು ಊದಿಕೊಂಡು ಪ್ರಯಾಣಿಕರ ರಕ್ಷಣೆಗೆ ಧಾವಿಸುವುದಿಲ್ಲ; ಹೆಚ್ಚು ತೀವ್ರತೆಯಿದ್ದರೆ, ಅರೆಕ್ಷಣದಲ್ಲಿ ಸಂವೇದಕಗಳ ವಿಶ್ಲೇಷಕ ಘಟಕದ ಆಜ್ಞೆಯಂತೆ, ಪ್ರತಿಕ್ರಿಯಾತ್ಮಕವಾಗಿ ರಾಸಾಯನಿಕ ಹಾಗೂ ಭೌತಿಕ ಸ್ಫೋಟ ನಡೆಯುತ್ತದೆ. 'ಸ್ಫೋಟವಾ?' ಎಂದು ಭಯಪಡಬೇಕಿಲ್ಲ! ಸ್ಫೋಟವೆಂದರೆ 'ಭಯಂಕರ', 'ಜೀವವಿನಾಶಕ' ಎನಿಸುತ್ತದಲ್ಲವೇ? ಆದರೆ ಇಲ್ಲಿ ನಡೆಯುವ ಸ್ಫೋಟವು ಜೀವ ಉಳಿಸುವಂತಹದ್ದು. ವಾಹನಕ್ಕೆ ಉಂಟಾದ ಭೌತಿಕ ಆಘಾತದಿಂದ, ಸಂವೇದಕದಲ್ಲಿ ಒಂದು ಕಿಡಿ ಉತ್ಪತ್ತಿಯಾಗುತ್ತದೆ; ಆದು ಈ ಪಾಲಿಮರ್‌ನಿಂದ ತಯಾರಾದ ಚೀಲದೊಳಗೆ ಇರುವ ರಾಸಾಯನಿಕ ಸಂಯುಕ್ತ ಪದಾರ್ಥವಾದ 'ಸೋಡಿಯಂ ಅಝೈಡ್'ಅನ್ನು ರಾಸಾಯನಿಕವಾಗಿ ಉರಿಯುವಂತೆ, ಸ್ಫೋಟಿಸಿ ವಿಘಟನೆಯಾಗುವಂತೆ ಮಾಡುತ್ತದೆ; ಅದರ ಪರಿಣಾಮವಾಗಿ ನೈಟ್ರೋಜನ್ ಅಂದರೆ ಸಾರಜನಕ ಅನಿಲವು ಉತ್ಪಾದನೆಯಾಗಿ, ಗಾಳಿಚೀಲವನ್ನು ತುಂಬಿಸುತ್ತದೆ; ಸ್ವಾಭಾವಿಕವಾಗಿ, ಹೆಚ್ಚಿನ ತಾಪಮಾನದಲ್ಲಿ ಅನಿಲಗಳು ಹರಡುವುದು, ಹಬ್ಬುವುದು ಹೆಚ್ಚು; ಹಾಗಾಗಿ, ಅರೆಕ್ಷಣದಲ್ಲೇ ಇಡಿಯ ಚೀಲವನ್ನು ಆವರಿಸಿಕೊಂಡು ಮೆತ್ತನೆಯ ದಿಂಬಿನಂತಹ ರಚನೆ ತಯಾರಾಗುತ್ತದೆ ಮತ್ತು ಪ್ರಯಾಣಿಕರನ್ನು ಕುತ್ತಿಗೆ ಮುರಿತ, ತಲೆಗೆ ಬಲವಾದ ಪೆಟ್ಟು, ಎದೆಮೂಳೆಗಳ ಮುರಿತದಂತಹ ದೈಹಿಕ ಆಘಾತಗಳಿಂದ ಕಾಪಾಡುತ್ತದೆ.

ಈ ಗಾಳಿಚೀಲಗಳು ವಾಹನದ ಒಳಗೇ ಇರಬೇಕಿಲ್ಲ, ನಾವು ಧರಿಸಿರುವ ಕವಚದಲ್ಲೂ ಇರಬಹುದು; ಉದಾಹರಣೆಗೆ, ಸೈಕಲ್ ಸವಾರರು, ಸ್ಕೂಟರ್, ಬೈಕುಗಳನ್ನು ಓಡಿಸುವವರು ತಮ್ಮ ಸುರಕ್ಷತೆಗಾಗಿ ಹೆಲ್ಮೆಟ್, ನೀ ಕ್ಯಾಪ್‌ಗಳನ್ನು ಬಳಸುವಂತೆ ಏರ್‌ಬ್ಯಾಗ್‌ಗಳಿರುವ ಪುಟ್ಟ ಪಟ್ಟಿಯನ್ನೂ ಧರಿಸಬಹುದಾಗಿದೆ; ಅದರಿಂದ ಅಪಘಾತದ ಸಮಯದಲ್ಲಿ ಗಾಳಿಚೀಲವು ಹೊರಬಂದು ಭುಜ, ಎದೆ ಹಾಗೂ ಕುತ್ತಿಗೆಯ ಭಾಗವನ್ನು ಕಾಪಾಡುತ್ತದೆ.

ಏರ್‌ಬ್ಯಾಗ್‌ಪಟ್ಟಿಯು ಕೇವಲ ದೇಹದ ಮೇಲ್ಭಾಗವನ್ನು ಮಾತ್ರ ಕಾಪಾಡುತ್ತದೆ. ಇಡೀ ದೇಹಕ್ಕೆ ರಕ್ಷಣೆ ಬೇಕಲ್ಲ ಎಂದು ಯೋಚಿಸಿದ 'ಮೋ'ಸೈಕಲ್' ಎಂಬ ಸ್ವೀಡನ್‌ನ ಸಂಸ್ಥೆಯು, 17 ವರ್ಷಗಳಿಂದ ಆ ನಿಟ್ಟಿನಲ್ಲಿ ಸಂಶೋಧನೆ ಕೈಗೊಂಡಿತ್ತು. ಅದರ ಫಲವಾಗಿ, ಈಗ ಫೆಬ್ರುವರಿ 28ರಂದು 'ಏರ್‌ಬ್ಯಾಗ್ ಜೀನ್ಸ್' ಮಾರುಕಟ್ಟೆಗೆ ಬಿಡುಗಡೆಯಾಗುತ್ತಿದೆ. ಇದು ನೋಡಲು, ಧರಿಸಲು ಸಾಮಾನ್ಯ ಜೀನ್ಸಿನ ಹಾಗೇ ಇದ್ದರೂ, ಅಪಘಾತವಾದರೆ, ಅದರೊಳಗಿನ ಗಾಳಿಚೀಲವು ಊದಿಕೊಂಡು ನಮ್ಮ ಮೂಳೆಗಳನ್ನು ಬಲವಾದ ಆಘಾತದಿಂದ ರಕ್ಷಿಸುತ್ತದೆ. ಇದೇ ಏರ್‌ಬ್ಯಾಗ್ ಜೀನ್ಸ್‌ನಿಂದ ಮಾಡಲಾದ ಪ್ಯಾಂಟ್‌ಗಳ ಜೊತೆಗೆ ಏರ್‌ಬ್ಯಾಗ್ ಜ್ಯಾಕೆಟ್ ಕೂಡ ಲಭ್ಯವಂತೆ! ಇವು ನಮ್ಮ ಇಡೀ ದೇಹವನ್ನು ರಕ್ಷಿಸುವುದಲ್ಲದೇ, ಪರಿಸರಸ್ನೇಹಿ ವಸ್ತುಗಳಿಂದ ಮಾಡಲಾಗಿದ್ದು, ಮರುಬಳಕೆ ಸಾಧ್ಯ, ಹಾಗಾಗಿ ಪರಿಸರವನ್ನೂ ರಕ್ಷಿಸುತ್ತದೆ ಎಂಬುದು ಇದನ್ನು ತಯಾರಿಸುತ್ತಿರುವ ಸಂಸ್ಥೆಯ ಆಶ್ವಾಸನೆ.

ಈ ಜೀನ್ಸ್‌ನ ಒಳಗಿರುವ ಏರ್‌ಬ್ಯಾಗ್ ರಾಸಾಯನಿಕಗಳಿಗೂ, ಕಾರುಗಳ ಏರ್‌ಬ್ಯಾಗ್‌ನೊಳಗಿರುವ ರಾಸಾಯನಿಕಗಳಿಗೂ ಏನೂ ವ್ಯತ್ಯಾಸವಿಲ್ಲ. ಇಲ್ಲಿ ಈ ಏರ್‌ಬ್ಯಾಗ್ ಅನ್ನು ಒಳಗೊಂಡ ಜೀನ್ಸಿಗೂ ದ್ವಿಚಕ್ರವಾಹನಕ್ಕೂ ಯಾಂತ್ರಿಕ ಸೇತುವೆಯಾಗಿ ಒಂದು ಬೆಲ್ಟ್ ನೀಡಲಾಗಿರುತ್ತದೆ; ಅಪಘಾತವಾಗಿ ಆ ಬೆಲ್ಟ್ ಕಳಚಿದ ಅರೆಕ್ಷಣದೊಳಗೆ, ಸಂವೇದಕಗಳು ಅದನ್ನು ದಾಖಲಿಸಿಕೊಂಡು, ಗಾಳಿಚೀಲದೊಳಗಿನ ರಾಸಾಯನಿಕವನ್ನು ವಿಘಟಿಸುವಂತೆ ಪ್ರಚೋದಿಸುತ್ತವೆ; ಅದರ ಪರಿಣಾಮವಾಗಿ ಅನಿಲದ ಉತ್ಪಾದನೆ, ಚೀಲದ ಉಬ್ಬುವಿಕೆ ಹಾಗೂ ಮೂಳೆಗಳ, ಮೂಳೆನಾರಿನ ರಕ್ಷಣೆ ಸಾಧ್ಯವಾಗುತ್ತದೆ. ಎಷ್ಟೇ ಎಚ್ಚರದಿಂದ ವಾಹನ ಚಲಾಯಿಸಿದರೂ, ಕೆಲವೊಮ್ಮೆ ಇತರ ವಾಹನಗಳಿಂದಲೋ, ಹೊರಗಿನ ಇತರ ಅಂಶಗಳಿಂದಲೋ ಅಪಘಾತವಾಗಬಹುದು; ಹಾಗಾಗಿ, ಇಂತಹ ಹೊಸ ತಂತ್ರಜ್ಞಾನಗಳ, ಉತ್ಪನ್ನಗಳ ಉಪಯೋಗಗಳನ್ನು ಬಳಸಿಕೊಳ್ಳುವುದು ಇಂದಿನ ಅನಿವಾರ್ಯತೆಯೇ ಸರಿ. ❖

ಪರಿಸರ ಸಂರಕ್ಷಣೆಗಾಗಿ ಸಮುದ್ರಮಥನ

ಉದಯ ಶಂಕರ ಪುರಾಣಿಕ

ಸಮುದ್ರ ಮಥನ ನಡೆದಾಗ ಹಾಲಾಹಲ ಮತ್ತು ಅಮೃತ ದೊರೆತ್ತಿತ್ತು ಎಂದು ಪುರಾಣಗಳಲ್ಲಿ ಹೇಳುವುದು ಅನೇಕರಿಗೆ ಗೊತ್ತಿರಬಹುದು. ಆದರೆ ನಮ್ಮ ಪರಿಸರ ಸಂರಕ್ಷಣೆಗಾಗಿ, ಇಂತಹದೊಂದು ಸಮುದ್ರ ಮಥನವನ್ನು ಮಾಡಲು ವಿಜ್ಞಾನಿಗಳು ಈಗ ಪ್ರಯತ್ನಿಸುತ್ತಿದ್ದಾರೆ ಎಂದು ಅನೇಕರಿಗೆ ತಿಳಿದಿರಲಾರದು.

ಹವಾಗುಣ ಬದಲಾವಣೆಯಿಂದಾಗಿ ಜಗತ್ತಿನಾದ್ಯಂತ ಉಂಟಾಗುತ್ತಿರುವ ನಕಾರಾತ್ಮಕ ಪರಿಣಾಮಗಳನ್ನು ಕಡಿಮೆ ಮಾಡಲು, ವಾತಾವರಣ ಸೇರಿರುವ ಇಂಗಾಲ ಡೈಯಾಕ್ಸೈಡನ್ನು ಕಡಿಮೆ ಮಾಡಬೇಕು ಎನ್ನುವ ಪ್ರಯತ್ನದಲ್ಲಿ ವಿಜ್ಞಾನಿಗಳಿದ್ದಾರೆ.

ಆದರೆ, ಗಾಳಿಯಲ್ಲಿ ಸೇರಿರುವ ಪ್ರತಿಯೊಂದು ಟನ್ ಇಂಗಾಲ ಡೈಯಾಕ್ಸೈಡನ್ನು ಪ್ರತ್ಯೇಕಿಸಲು, ಪ್ರತಿಗಂಟೆಗೆ 1.83 ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತಿದೆ. ಹೀಗೆ ಮಾಡಿದರೆ, ಪ್ರತಿ ಟನ್ ಇಂಗಾಲ ಡೈಯಾಕ್ಸೈಡ್‌ಗೆ 300ರಿಂದ 1000 ಡಾಲರ್‌ವರೆಗೂ ವೆಚ್ಚವಾಗುತ್ತದೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಇಂತಹ ಯೋಜನೆಗಳಿಗಾಗಿ ಇಷ್ಟು ಹಣ ಮತ್ತು ವಿದ್ಯುತ್ ಖರ್ಚು ಮಾಡುವುದು ಅನೇಕ ದೇಶಗಳಿಗೆ ಸಾಧ್ಯವಾಗುವುದಿಲ್ಲ. ಹೀಗಾಗಿ, ವಾತಾವರಣ ಸೇರಿರುವ ಇಂಗಾಲ ಡೈಯಾಕ್ಸೈಡನ್ನು ಪ್ರತ್ಯೇಕಿಸಲು ಇಷ್ಟೊಂದು ವಿದ್ಯುತ್, ಹಣ ವೆಚ್ಚ ಮಾಡುವ ಬದಲು, ಸಮುದ್ರದ ನೀರಿನಲ್ಲಿ ಸೇರಿರುವ ಇಂಗಾಲ ಡೈಯಾಕ್ಸೈಡನ್ನು ಪ್ರತ್ಯೇಕ ಮಾಡಿದರೆ ಹೇಗೆ ಎಂದು ಅಮೆರಿಕದ ಎಂಐಟಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆ.

ಪ್ರತಿವರ್ಷ ಮನುಷ್ಯನಿಂದ ಉತ್ಪತ್ತಿಯಾಗಿ, ಪರಿಸರ ಮಾಲಿನ್ಯ ಮಾಡುತ್ತಿರುವ ಇಂಗಾಲ ಡೈಯಾಕ್ಸೈಡ್‌ನಲ್ಲಿ ಶೇ 30ರಿಂದ 40ರಷ್ಟನ್ನು, ವಾತಾವರಣದಿಂದ ಸಮುದ್ರ ಹೀರಿಕೊಂಡಿದೆ. ಸಮುದ್ರದಲ್ಲಿ ಸೇರಿರುವ ಇಂಗಾಲ ಡೈಯಾಕ್ಸೈಡನ್ನು ನಾವು ಪ್ರತ್ಯೇಕಿಸಿ ಹೊರತಗೆದಾಗ, ವಾತಾವರಣದಲ್ಲಿರುವ ಹೆಚ್ಚಿನ ಇಂಗಾಲ ಡೈಯಾಕ್ಸೈಡನ್ನು ಸಮುದ್ರ ಹೀರಿಕೊಳ್ಳಲು ಪ್ರಾರಂಭಿಸುತ್ತದೆ. ಹೀಗೆ ಸಮುದ್ರ ಮತ್ತು ವಾತಾವರಣದಲ್ಲಿರುವ ಇಂಗಾಲ ಡೈಯಾಕ್ಸೈಡ್‌ನ ಪ್ರಮಾಣವನ್ನು ನಾವು ಕಡಿಮೆ ಮಾಡಬಹುದು ಎಂದು ಈ ವಿಜ್ಞಾನಿಗಳು ವಿವರಿಸುತ್ತಾರೆ.

ಸಮುದ್ರದಲ್ಲಿ ಸೇರಿರುವ ಇಂಗಾಲ ಡೈಯಾಕ್ಸೈಡನ್ನು ಪ್ರತ್ಯೇಕಿಸಿ, ಹೊರತಗೆಯಲು ಈ ಮೊದಲು ಕೂಡ ವಿಜ್ಞಾನಿಗಳು ಪ್ರಯತ್ನಿಸಿದ್ದರು. ಆದರೆ ಅವರಂತೆ ಅತ್ಯಂತ ದುಬಾರಿಯಾದ ವಿಶೇಷ ಮೆಂಬ್ರೇನ್‌ಗಳು ಮತ್ತು ಕೆಮಿಕಲ್‌ಗಳನ್ನು ಬಳಸುವ ವಿಧಾನವಾಗಲಿ ಅಥವಾ ವಾತಾವರಣದಿಂದ ಇಂಗಾಲ ಡೈಯಾಕ್ಸೈಡನ್ನು ಪ್ರತ್ಯೇಕಿಸಲು ಅಪಾರ ಪ್ರಮಾಣದ ವಿದ್ಯುತ್ ಬಳಸುವುದಾಗಲಿ, ಎಂಐಟಿ ವಿಜ್ಞಾನಿಗಳು ಮಾಡುತ್ತಿಲ್ಲ.

ಎಂಐಟಿ ವಿಜ್ಞಾನಿಗಳ ವಿಧಾನದಲ್ಲಿ ಮೊದಲು ಸಾವಿರಾರು ಲೀಟರ್ ಸಮುದ್ರದ ನೀರನ್ನು ಶೋಧಿಸಿ, ಯಾವುದೇ ಕಸ, ಜಲಚರಗಳು ಇಲ್ಲದಿರುವುದನ್ನು ಖಾತ್ರಿ ಪಡಿಸಿಕೊಳ್ಳಲಾಗುತ್ತದೆ. ಶೋಧಿಸಲಾದ ಒಂದು ಬೃಹತ್ ಚೇಂಬರ್‌ನೊಳಗೆ ತುಂಬಿಸಲಾಗುತ್ತದೆ. ನಂತರ ಪ್ರೋಟಾನ್‌ಗಳನ್ನು ಬಳಸಿ, ಈ ನೀರಿನ ಆಮ್ಲತೆಯನ್ನು ಹೆಚ್ಚು ಮಾಡುವ ಮೂಲಕ ಸಮುದ್ರದ ನೀರಿನಲ್ಲಿರುವ ಇಂಗಾಲ ಡೈಯಾಕ್ಸೈಡ್ ಪ್ರತ್ಯೇಕಿಸಿ, ಸಂಗ್ರಹಿಸಲಾಗುತ್ತದೆ. ನಂತರ ಮೊದಲ ಚೇಂಬರ್‌ನಿಂದ ಎರಡನೆಯ ಚೇಂಬರ್‌ನಲ್ಲಿ ಈ ಸಮುದ್ರದ ನೀರನ್ನು ತುಂಬಿಸಲಾಗುತ್ತದೆ. ಇಲ್ಲಿ ನೀರಿನ ಆಮ್ಲತೆಯನ್ನು ತಗೆದು, ಮತ್ತೊಮ್ಮೆ ನೀರು ಆಲ್ಕಲೈನ್ ಆಗುವಂತೆ ಮಾಡಲಾಗುತ್ತದೆ. ಸಮುದ್ರದ ಜಲಚರಗಳು, ಸಸ್ಯ ಮತ್ತು ಸೂಕ್ಷ್ಮಜೀವಿಗಳಿಗೆ ಈ ನೀರು ಸೂಕ್ತವಾಗಿದೆ ಎಂದು ಗುಣಮಟ್ಟ ಪರೀಕ್ಷೆಗಳನ್ನು ಮಾಡಿದ ನಂತರ, ಈ ನೀರನ್ನು ಎರಡನೆಯ ಚೇಂಬರ್‌ನಿಂದ ಸಮುದ್ರಕ್ಕೆ ಬಿಡಲಾಗುತ್ತದೆ.

ಈ ವಿಧಾನವನ್ನು ಬಳಸಿ, ಪ್ರಾಯೋಗಿಕವಾಗಿ ಸಮುದ್ರದ ನೀರಿನಿಂದ ಇಂಗಾಲ ಡೈಯಾಕ್ಸೈಡನ್ನು ಪ್ರತ್ಯೇಕಿಸಲು ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ. ಈ ವಿಧಾನದಲ್ಲಿ ಪ್ರತಿಯೊಂದು ಟನ್ ಇಂಗಾಲ ಡೈಯಾಕ್ಸೈಡ್ ಪ್ರತ್ಯೇಕಿಸಲು 0.77ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತದೆ. ತಮ್ಮ ಸಂಶೋಧನೆಯನ್ನು ಮುಂದುವರೆಸಿರುವ ವಿಜ್ಞಾನಿಗಳು, ಬೃಹತ್ ಪ್ರಮಾಣದಲ್ಲಿ ಈ ರೀತಿ ಸಮುದ್ರನೀರನ್ನು ಬಳಸುವ ಘಟಕಗಳು ಕೆಲಸ ಮಾಡಲು ಪ್ರಾರಂಭಿಸಿದಾಗ, ಬೇಕಾಗುವ ವಿದ್ಯುತ್ ಪ್ರಮಾಣವನ್ನು ಇನ್ನೂ ಕಡಿಮೆ ಮಾಡಲು ಸಾಧ್ಯವಿದೆ ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸುತ್ತಾರೆ.

ಸಮುದ್ರವನ್ನು ಸೇರಿರುವ ತ್ಯಾಜ್ಯವನ್ನು ಕೂಡ ಒಂದು ಮಟ್ಟದಲ್ಲಿ ಪ್ರತ್ಯೇಕಿಸಲು ಸಾಧ್ಯವಿದೆ ಮತ್ತು ಯಾವುದೇ ಜಲಚರ, ಸಸ್ಯ ಮತ್ತು ಸೂಕ್ಷ್ಮಜೀವಿಗಳಿಗೆ ಅಪಾಯವಾಗುವುದಿಲ್ಲ ಎನ್ನುವ ನಂಬಿಕೆ ಈ ವಿಜ್ಞಾನಿಗಳಿಗೆ ಇದೆ. ❖



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಎಸ್ಸೆಸ್ಸೆಲ್ಸಿ

1) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) (ಎ)-ಪಟ್ಟಿಯಲ್ಲಿ ನಾಯಕರು ಮತ್ತು (ಬಿ) ಪಟ್ಟಿಯಲ್ಲಿ ಅವರ ಕಾರ್ಯಗಳನ್ನು ಸೂಚಿಸಲಾಗಿದೆ, ಅವುಗಳಿಗೆ ಸರಿ ಹೊಂದುವ ಉತ್ತರದ ಗುಂಪನ್ನು ಗುರುತಿಸಿ:-

ಪಟ್ಟಿ-(ಎ)	ಪಟ್ಟಿ-(ಬಿ)
(ಎ) ರಾಮ್‌ಮೋಹನ್ ರಾಯ್	(i) ರಾಮಕೃಷ್ಣ ಮಿಷನ್
(ಬಿ) ಸ್ವಾಮಿ ದಯಾನಂದ ಸರಸ್ವತಿ	(ii) ಸತ್ಯಶೋಧಕ ಸಮಾಜ
(ಸಿ) ಸ್ವಾಮಿ ವಿವೇಕಾನಂದ	(iii) ಬ್ರಹ್ಮ ಸಮಾಜ
(ಡಿ) ಮಹಾತ್ಮ ಜ್ಯೋತಿಭಾ ಫುಲೆ	(iv) ಆರ್ಯ ಸಮಾಜ

ಉತ್ತರ: (ಡಿ)

	J	©	1	r
(A)	(i)	(ii)	(iii)	(iv)
(B)	(ii)	(i)	(iv)	(iii)
(C)	(iv)	(iii)	(ii)	(i)
(D)	(iii)	(iv)	(i)	(ii)

2) ಭಾರತ-ಚೀನಾ ದೇಶಗಳ ಸಂಬಂಧವು ಈ ತತ್ವಗಳ ಮೇಲೆ ಅವಲಂಬಿತವಾಗಿದೆ.
(ಎ) ಕಮ್ಯುನಿಸ್ಟ್ ಮತ್ತು ಹಿಂದೂ ತತ್ವ
(ಬಿ) ಆರ್ಥಿಕ ಮತ್ತು ರಾಜಕೀಯ ತತ್ವ
(ಸಿ) ಪಂಚಶೀಲ ಮತ್ತು ಹಿಂದೂ-ಚೀನಿ ಭಾಯಿಭಾಯಿ ತತ್ವ
(ಡಿ) ಪ್ರಜಾಪ್ರಭುತ್ವ ಮತ್ತು ಸಮಾನತೆಯ ತತ್ವ
ಉತ್ತರ: (ಸಿ) ಪಂಚಶೀಲ ಮತ್ತು ಹಿಂದೂ-ಚೀನಿ ಭಾಯಿಭಾಯಿ ತತ್ವ

3) ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ 'ನೀಲಿ ನೀರಿನ ನೀತಿ' (Blue Water Policy)ಯನ್ನು ಯಾರು ಜಾರಿಗೆ ತಂದನು?
ಎ) ವಾಸ್ಕೊಡಗಾಮ ಬಿ) ಆಲ್ಫೋನ್ಸೊ-ಡಿಅಲ್ಬುಕರ್ಕ್
ಸಿ) ಡೂಪ್ಲೆ ಡಿ) ಫ್ರಾನ್ಸಿಸ್ಕೊ ಡಿ ಆಲ್ಮೇಡ
ಉತ್ತರ:- (ಡಿ) ಫ್ರಾನ್ಸಿಸ್ಕೊ ಡಿ ಆಲ್ಮೇಡ


3) ಭದ್ರತಾ ಸಮಿತಿಯ ಕಾಯಂ ಸದಸ್ಯ ರಾಷ್ಟ್ರಗಳು ಈ ಕೆಳಕಂಡಂತಿದೆ.
ಎ) ಅಮೆರಿಕ, ಭಾರತ, ಪಾಕಿಸ್ತಾನ, ಶ್ರೀಲಂಕಾ ಮತ್ತು ಚೀನಾ
ಬಿ) ಅಮೆರಿಕ, ರಷ್ಯಾ, ಬ್ರಿಟನ್, ಫ್ರಾನ್ಸ್ ಮತ್ತು ಚೀನ
ಸಿ) ಅಮೆರಿಕ, ರಷ್ಯಾ, ನೇಪಾಳ, ಪಾಕಿಸ್ತಾನ ಮತ್ತು ಬಾಂಗ್ಲಾದೇಶ
ಡಿ) ಅಮೆರಿಕ, ಸ್ವಿಟ್ಜರ್‌ಲೆಂಡ್, ಚೀನಾ, ನೇಪಾಳ ಮತ್ತು ಭಾರತ
ಉತ್ತರ: (ಬಿ) ಅಮೆರಿಕ, ರಷ್ಯಾ, ಬ್ರಿಟನ್, ಫ್ರಾನ್ಸ್ ಮತ್ತು ಚೀನ

4) 1960ರ ಪ್ರಾರಂಭದಲ್ಲಿ ಜರ್ಮನ್ ಕೃಷಿ ವಿಜ್ಞಾನಿ ಮೆಕ್ಸಿಕೋ...ದೇಶದಲ್ಲಿ ನಡೆಸಿದ ಪ್ರಯೋಗದ ಫಲವಾಗಿ ಗೋಧಿಯಲ್ಲಿ ಹೆಚ್ಚು ಇಳುವರಿ ಬೀಜಗಳ ಸಂಶೋಧನೆಯಾಯಿತು. ಹಾಗಾದರೆ ಆ ವಿಜ್ಞಾನಿಯ ಹೆಸರೇನು?
ಎ) ಡಾ. ಫ್ಲಿಟರ್ ಮುಂಡೆ ಬಿ) ಡಾ. ನಾರ್ಮನ್ ಬೋಲಾರ್ಗ್
ಸಿ) ಡಾ.ಎಮಿಲಿ ಜಾರ್ಗನ್ ಡಿ) ಮೇಲಿನ ಯಾರೂ ಅಲ್ಲ
ಉತ್ತರ:- (ಬಿ) ಡಾ. ನಾರ್ಮನ್ ಬೋಲಾರ್ಗ್

5) ಸಂವಿಧಾನದ .... ವಿಧಿಯ ಅಸ್ಪೃಶ್ಯತಾ ಆಚರಣೆಯ ಒಂದು ಶಿಕ್ಷಾರ್ಹ ಅಪರಾಧ ಎಂದಿದೆ.
ಎ) 11ನೇಯ ವಿಧಿ ಬಿ) 17ನೇಯ ವಿಧಿ
ಸಿ) 13ನೇಯ ವಿಧಿ ಡಿ) 15ನೇಯ ವಿಧಿ
ಉತ್ತರ: (ಬಿ) 17ನೇಯ ವಿಧಿ

6) ಮೊದಲನೇ ಆಂಗ್ಲೋ ಮರಾಠ ಯುದ್ಧವನ್ನು ಕೊನೆಗೊಳಿಸಿದ ಒಪ್ಪಂದ
ಎ) ಬಸ್ಸೇನ್ ಒಪ್ಪಂದ ಬಿ) ಸಾಲ್ಬಾಯಿ ಒಪ್ಪಂದ
ಸಿ) ಅಲಹಾಬಾದ್ ಒಪ್ಪಂದ ಡಿ) ಲಾಹೋರ್ ಒಪ್ಪಂದ
ಉತ್ತರ:- (ಬಿ) ಸಾಲ್ಬಾಯಿ ಒಪ್ಪಂದ

7) ಈ ನಕ್ಷೆಯಲ್ಲಿ ಗುರುತಿಸಿರುವ ಪ್ರದೇಶಗಳಲ್ಲಿ ಸರಿಯಾದ ಹೊಂದಿಕೆಯಾಗುವುದನ್ನು ಗುರುತಿಸಿ.



ಎ) 1- ಕೋಸಿ, 2-ಚಂಬಲ್, 3-ಬಿಯಾಸ್
ಬಿ) 1- ಚಂಬಲ್, 2-ಹಿರಾಕುಡ್, 3-ದಾಮೋದರ್
ಸಿ) 1- ನಾಗಾರ್ಜುನ, 2-ನರ್ಮದಾ, 3-ಭಾಕ್ರಾ ನಂಗಲ್
ಡಿ) 1- ಚಂಬಲ್, 2-ಕೋಸಿ, 3-ದಾಮೋದರ್
ಉತ್ತರ: (ಸಿ) 1-ನಾಗಾರ್ಜುನ, 2-ನರ್ಮದಾ, 3-ಭಾಕ್ರಾ ನಂಗಲ್

8) ಮೈಸೂರಿನಲ್ಲಿ ಮಹಾರಾಣಿ ಬಾಲಿಕಾ ಪ್ರೌಢಶಾಲೆಯನ್ನು ಸ್ಥಾಪಿಸಿದರು ಯಾರು?
ಎ) ಕಾಂತರಾಜೇ ಅರಸ ಬಿ) ಸರ್ ಎಂ. ವಿಶ್ವೇಶ್ವರಯ್ಯ
ಸಿ) ಕೆ. ಶೇಷಾದ್ರಿ ಅಯ್ಯರ್ ಡಿ) ಎನ್ ಮಾಧವ ರಾವ್
ಉತ್ತರ:- (ಸಿ) ಕೆ. ಶೇಷಾದ್ರಿ ಅಯ್ಯರ್

9) ಈ ಕೆಳಗಿನ ಯಾವುದು ಬ್ಯಾಂಕ್ ಸಲ್ಲಿಸುವ ಸೇವೆ ಅಡಿಯಲ್ಲಿ ಬರುವುದಿಲ್ಲ?
ಎ) ಕ್ರೆಡಿಟ್/ ಡೆಬಿಟ್ ಕಾರ್ಡ್ ನೀಡುವುದು
ಬಿ) ಮನೆ/ವಾಹನ ಖರೀದಿಗೆ ಸಾಲ ನೀಡಲು ಏಜೆನ್ಸಿಗಳಿಗೆ ಹಾಗೂ ಖಾಸಗಿ ಬಂಡವಾಳದಾರರಿಗೆ ಪ್ರೋತ್ಸಾಹಿಸುವುದು
ಸಿ) ಭದ್ರತಾ ಕಪಾಟುಗಳನ್ನು ಒದಗಿಸುವುದು
ಡಿ) ಪರಸ್ಪರ ನಿಧಿಗಳನ್ನು ನಿರ್ವಹಿಸುವುದು
ಉತ್ತರ:- (ಬಿ) ಮನೆ/ವಾಹನ ಖರೀದಿಗೆ ಸಾಲ ನೀಡಲು ಏಜನ್ಸಿಗಳಿಗೆ ಹಾಗೂ ಖಾಸಗಿ ಬಂಡವಾಳದಾರರಿಗೆ ಪ್ರೋತ್ಸಾಹಿಸುವುದು

10) ಭಾರತದಲ್ಲಿ ಮೊಟ್ಟಮೊದಲು ಆಧುನಿಕ ಯೋಜನೆಯ ಬಗ್ಗೆ ಚಿಂತಿಸಿ ಅದರ ಬಗ್ಗೆ ಪುಸ್ತಕವೊಂದನ್ನು ಬರೆದವರು ಯಾರು?
ಎ) ಡಾ. ಎಂ. ಎಸ್. ಸ್ವಾಮಿನಾಥನ್ ಬಿ) ಜವಾಹರ್ ಲಾಲ್ ನೆಹರೂ
ಸಿ) ಇಂದಿರಾ ಗಾಂಧಿ ಡಿ) ಸರ್ ಎಂ. ವಿಶ್ವೇಶ್ವರಯ್ಯನವರು.
ಉತ್ತರ:- (ಡಿ) ಸರ್ ಎಂ. ವಿಶ್ವೇಶ್ವರಯ್ಯನವರು.

11). ಸರ್ಕಾರದ ಒಂದು ವರ್ಷದ ಅಂದಾಜು ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯು................
ಎ) ಸಾರ್ವಜನಿಕ ಹಣಕಾಸು ಬಿ) ಸಾರ್ವಜನಿಕ ವೆಚ್ಚಗಳು
ಸಿ) ಯೋಜನಾ ವೆಚ್ಚಗಳು ಡಿ) ಆಯವ್ಯಯ
ಉತ್ತರ: (ಡಿ) ಆಯವ್ಯಯ

(ಮುಂದುವರಿಯುವುದು....)

ಮಾದರಿ ಪ್ರಶ್ನೋತ್ತರ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು.

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ರಸಾಯನವಿಜ್ಞಾನ


ಪಿಯುಸಿ

16) ಪಾಲಿಮರ್‌ಗಳ ವರ್ಗೀಕರಣದ ಬಗ್ಗೆ ಬರೆಯಿರಿ
ಉತ್ತರ:- 3. ಥರ್ಮೋಪ್ಲಾಸ್ಟಿಕ್ ಪಾಲಿಮರ್‌ಗಳು (........ಹಿಂದಿನ ಸಂಚಿಕೆಯಿಂದ)ಈ ಪಾಲಿಮರ್‌ಗಳಲ್ಲಿರುವ ಅಂತರಾಣ್ವಿಕ ಬಲವು, ಇಲಾಸ್ಟೊಮರ್ ಮತ್ತು ಫೈಬರ್‌ಗಳಲ್ಲಿರುವ ಅಂತರಾಣ್ವಿಕ ಬಲಗಳ ನಡುವೆ ಇರುತ್ತದೆ. ಪಾಲಿಥೀನ್, ಪಾಲಿಸ್ಟೆರಿನ್, ಪಾಲಿವಿನೈಲ್ಸ್, ಇತ್ಯಾದಿ ಕೆಲವು ಸಾಮಾನ್ಯ ಥರ್ಮೋಪ್ಲಾಸ್ಟಿಕ್‌ಗಳಾಗಿವೆ.

4. **ಥರ್ಮೋಸೆಟ್ಟಿಂಗ್ ಪಾಲಿಮರ್‌ಗಳು** ಈ ಪಾಲಿಮರ್‌ಗಳು ಅಡ್ಡ ಸಂಪರ್ಕ ಹೊಂದಿದ ಅಥವಾ ಅತೀವವಾಗಿ ಕವಲೊಡೆದ ಅಣುಗಳಾಗಿವೆ, ಇದು ಅಚ್ಚುಗಳಲ್ಲಿ ಬಿಸಿಮಾಡಿದಾಗ ವ್ಯಾಪಕ ಅಡ್ಡ ಸಂಪರ್ಕವನ್ನು ಹೊಂದಿ ಅಚ್ಚೊತ್ತಲು ಬಾರದಂತಾಗುವುದು. ಇವುಗಳನ್ನು ಮರುಬಳಕೆ ಮಾಡಲು ಸಾಧ್ಯವಿಲ್ಲ. ಕೆಲವು ಸಾಮಾನ್ಯ ಉದಾಹರಣೆಗಳೆಂದರೆ ಬೆಕಲೈಟ್, ಯೂರಿಯಾ-ಫಾರ್ಮಾಲ್ಡಿಲೈಡ್ ರೆಸಿನ್‌ಗಳು, ಇತ್ಯಾದಿ.

5)**ಬೆಳವಣಿಗೆ ಪಾಲಿಮರೀಕರಣ ಆಧಾರಿತ ವರ್ಗೀಕರಣ** ಇತ್ತೀಚಿನ ದಿನಗಳಲ್ಲಿ ಸಂಕಲನ ಮತ್ತು ಸಾಂದ್ರೀಕರಣ ಪಾಲಿಮರ್‌ಗಳನ್ನು ಅವುಗಳ ರಚನೆಯಲ್ಲಿನ ಪಾಲಿಮರೀಕರಣದ ಕ್ರಿಯಾತಂತ್ರವನ್ನು ಆಧರಿಸಿ ಸರಪಳಿ ಬೆಳವಣಿಗೆ ಪಾಲಿಮರ್‌ಗಳು ಮತ್ತು ಹಂತ ಬೆಳವಣಿಗೆ ಪಾಲಿಮರ್‌ಗಳು ಎಂದೂ ಉಲ್ಲೇಖಿಸುವರು.

17) ರಬ್ಬರಿನ ವಲ್ಕನೀಕರಣ ಬಗ್ಗೆ ಬರೆಯಿರಿ
ಉತ್ತರ: ನೈಸರ್ಗಿಕ ರಬ್ಬರ್ ಅಧಿಕ ಉಷ್ಣತೆಯಲ್ಲಿ (> 335K)) ಮೃದುವಾಗುತ್ತದೆ ಮತ್ತು ಕಡಿಮೆ ಉಷ್ಣತೆಯಲ್ಲಿ (< 283K)) ಗಡಸಾಗುತ್ತದೆ ಮತ್ತು ಅಧಿಕ ನೀರನ್ನು ಹೀರುವ ಸಾಮರ್ಥ್ಯವನ್ನು ತೋರಿಸುತ್ತದೆ. ಇದು ಅಧ್ರುವೀಯ ದ್ರಾವಕಗಳಲ್ಲಿ ಕರಗುತ್ತದೆ ಮತ್ತು ಉತ್ಕರ್ಷಣಕಾರಕಗಳ ಆಕ್ರಮಣಕ್ಕೆ ನಿರೋಧಕವಲ್ಲ. ಈ ಭೌತಿಕ ಗುಣಲಕ್ಷಣಗಳನ್ನು ಸುಧಾರಿಸಲು, ವಲ್ಕನೀಕರಣ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ. ಈ ಪ್ರಕ್ರಿಯೆಯು ಕಚ್ಚಾ ರಬ್ಬರನ್ನು ಸಲ್ಫರ್ ಮತ್ತು ಸೂಕ್ತವಾದ ಸಂಯೋಜಕದ ಮಿಶ್ರಣದೊಂದಿಗೆ 373K ನಿಂದ 415K ವರೆಗಿನ ಉಷ್ಣಾಂಶದ ವ್ಯಾಪ್ತಿಯಲ್ಲಿ ಕಾಯಿಸುವುದನ್ನು ಒಳಗೊಂಡಿರುತ್ತದೆ. ವಲ್ಕನೀಕರಣದಿಂದ, ದ್ವಿ ಬಂಧಗಳ ಪ್ರತಿಕ್ರಿಯಾತ್ಮಕ ತಾಣಗಳಲ್ಲಿ ಸಲ್ಫರ್ ಅಡ್ಡ ಸಂಪರ್ಕಗಳನ್ನು ರೂಪಿಸುವುದರಿಂದಾಗಿ ರಬ್ಬರ್ ಗಟ್ಟಿಯಾಗುತ್ತದೆ. ಟೈಯರಿನಲ್ಲಿ ಬಳಕೆ ಮಾಡುವ ರಬ್ಬರ್‌ನ ಉತ್ಪಾದನೆಯಲ್ಲಿ, 5 % ಸಲ್ಫರನ್ನು ಅಡ್ಡ ಸಂಪರ್ಕ ಉಂಟುಮಾಡುವ ಕಾರಕವಾಗಿ ಬಳಸಲಾಗುತ್ತದೆ. ಸಂಶ್ಲೇಷಿತ ರಬ್ಬರ್ ಅದರ ಉದ್ದದ ಎರಡು ಪಟ್ಟು ವಿಸ್ತರಿಸುವುದಕ್ಕೆ ಸಮರ್ಥವಾಗಿರುವ ವಲ್ಕನೀಕೃತ ರಬ್ಬರ್‌ನಂತಹದೇ ಪಾಲಿಮರ್ ಆಗಿದೆ.



18) ಔಷಧಗಳ ಕೆಲವು ಪ್ರಮುಖ ವರ್ಗಗಳ ಚಿಕಿತ್ಸಕ ಕ್ರಿಯೆಯಲ್ಲಿ ಬರುವ ಆಮ್ಲನಿರೋಧಕ ಮತ್ತು ಪ್ರತಿ- ಹಿಸ್ಟಮೈನ್‌ಗಳ ಬಗ್ಗೆ ಬರೆಯಿರಿ.
ಉತ್ತರ:- ಆಮ್ಲನಿರೋಧಕ : = ಜಠರದಲ್ಲಿ ಅತಿಯಾಗಿ ಉತ್ಪತ್ತಿಯಾಗುವ ಆಮ್ಲವು ಕಿರಿಕಿರಿ ಮತ್ತು ನೋವಿಗೆ ಕಾರಣವಾಗುತ್ತದೆ. ತೀವ್ರತರವಾದ ಸಂದರ್ಭಗಳಲ್ಲಿ, ಜಠರದಲ್ಲಿ ಹುಣ್ಣು(ಅಲ್ಸರ್) ಗಳುಂಟಾಗುತ್ತವೆ. ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್ ಅಥವಾ ಅಲ್ಯೂಮಿನಿಯಂ ಮತ್ತು ಮೆಗ್ನೀಷಿಯಮ್ ಹೈಡ್ರಾಕ್ಸೈಡ್‌ಗಳ ಮಿಶ್ರಣದ ಆಮ್ಲನಿರೋಧಕಗಳನ್ನು ನೀಡುವಿಕೆ 1970ರವರೆಗೆ, ಆಮ್ಲೀಯತೆಯ ಏಕೈಕ ಚಿಕಿತ್ಸೆಯಾಗಿತ್ತು. ಆದಾಗ್ಯೂ, ಅತಿಯಾದ ಹೈಡ್ರೋಜನ್ ಕಾರ್ಬೋನೇಟ್ ಜಠರವನ್ನು ಕ್ಷಾರೀಯಗೊಳಿಸಿ ಇನ್ನೂ ಹೆಚ್ಚು ಆಮ್ಲದ ಉತ್ಪಾದನೆಯನ್ನು ಪ್ರಚೋದಿಸುತ್ತದೆ. ವಿಲೀನಗೊಳ್ಳದಿರುವಿಕೆ, ತಟಸ್ಥತೆಗಿಂತಲೂ ಮೇಲೆ pH ಹೆಚ್ಚಿಸದೇ ಇರುವುದರಿಂದಾಗಿ, ಲೋಹದ ಹೈಡ್ರಾಕ್ಸೈಡ್‌ಗಳು ಉತ್ತಮ ಪರ್ಯಾಯವಾಗಿವೆ. ಈ ಚಿಕಿತ್ಸೆಗಳು ಕೇವಲ ಲಕ್ಷಣಗಳನ್ನು ನಿಯಂತ್ರಿಸುತ್ತವೆ ಮತ್ತು ಕಾರಣವನ್ನಲ್ಲ. ಆದ್ದರಿಂದ, ಈ ಲೋಹದ ಲವಣಗಳಿಂದ, ರೋಗಿಗಳನ್ನು ಸುಲಭವಾಗಿ ಉಪಚರಿಸಲು ಸಾಧ್ಯವಾಗುವುದಿಲ್ಲ. ಮುಂದುವರೆದ ಹಂತಗಳಲ್ಲಿ, ಹುಣ್ಣು ಜೀವಕ್ಕೆ ಕುತ್ತು ತರುತ್ತದೆ ಮತ್ತು ಅದರ ಏಕೈಕ ಚಿಕಿತ್ಸೆಯೆಂದರೆ ಜಠರದ ಪೀಡಿತ ಭಾಗದ ತೆಗೆಯುವಿಕೆ. ಹಿಸ್ಟಮೈನ್ ಎಂಬ ರಾಸಾಯನಿಕ ಜಠರದಲ್ಲಿ ಪೆಪ್ಸಿನ್ ಮತ್ತು ಹೈಡ್ರೋಕ್ಲೋರಿಕ್ ಆಮ್ಲದ ಸ್ರವಿಸುವಿಕೆಯನ್ನು ಪ್ರಚೋದಿಸುತ್ತದೆಯೆಂಬ ಆವಿಷ್ಕಾರದ ಮೂಲಕ ಅತಿ ಆಮ್ಲೀಯತೆಯ ಚಿಕಿತ್ಸೆಯಲ್ಲಿ ಒಂದು ಮಹತ್ವವಾದ ತಿರುವು ಸಿಕ್ಕಿತು. ಸೈಮಿಟಿಡಿನ್ (ಟೆಗಮೆಟ್), cimetidine (tegamet), ಔಷಧವನ್ನು, ಜಠರ ಗೋಡೆಯಲ್ಲಿರುವ ಗ್ರಾಹಿಗಳೊಂದಿಗೆ ಹಿಸ್ಟಮೈನ್‌ನ ಪರಸ್ಪರಕ್ರಿಯೆಯನ್ನು ತಡೆಯಲು ವಿನ್ಯಾಸಗೊಳಿಸಲಾಗಿದೆ. ಇದು ಕಡಿಮೆ ಪ್ರಮಾಣದ ಆಮ್ಲದ ಬಿಡುಗಡೆಗೆ ಕಾರಣವಾಗುತ್ತದೆ. ಈ ಔಷಧದ ಪ್ರಾಮುಖ್ಯ ಎಷ್ಟೆಂದರೆ, ಮತ್ತೊಂದು ಔಷಧ, ರ್‍ಯಾನಿಟಿಡಿನ್ (ಜ್ಯಾಂಟಾಕ್) (ranitidine/zantac)) ಶೋಧನೆಯಾಗುವವರೆಗೂ, ಪ್ರಪಂಚದಲ್ಲೇ ಅತಿಹೆಚ್ಚು ಮಾರಾಟವಾಗುವ ಔಷಧವಾಗಿತ್ತು

ಪ್ರತಿ-ಹಿಸ್ಟಮೈನ್‌ಗಳು:- ಹಿಸ್ಟಮೈನ್ ಒಂದು ಶಕ್ತಿಶಾಲಿ ನಾಳವಿಸ್ತರಕವಾಗಿದೆ. ಇದು ವಿವಿಧ ಕಾರ್ಯಗಳನ್ನು ಹೊಂದಿದೆ. ಇದು ಶ್ವಾಸನಾಳಿಕೆಗಳ ಮತ್ತು ಕರುಳಿನಲ್ಲಿರುವ ಮೆದುಸ್ನಾಯುಗಳನ್ನು ಸಂಕುಚಿಸುತ್ತದೆ ಮತ್ತು ನವಿರಾದ ರಕ್ತನಾಳಗಳ ಗೋಡೆಗಳಲ್ಲಿರುವಂಥ ಇತರೆ ಸ್ನಾಯುಗಳನ್ನು ಸಡಿಲಿಸುತ್ತದೆ. ಸಾಮಾನ್ಯ ನೆಗಡಿ ಮತ್ತು ಪರಾಗಗಳಿಂದಾಗುವ ಅಲರ್ಜಿ ಪ್ರತಿವರ್ತನೆಗೆ ಸಂಬಂಧಿಸಿದ ಮೂಗು ಕಟ್ಟುವಿಕೆಗೂ ಸಹ ಹಿಸ್ಟಮೈನ್ ಕಾರಣವಾಗಿದೆ. ಸಂಶ್ಲೇಷಿತ ಔಷಧಗಳಾದ, ಬ್ರೋಮೋಫೆನಿರಮೈನ್ (ಡೈಮೆಟ್ಯಾಪ್) brompheniramine (Dimetapp) ಮತ್ತು ಟರ್‌ಫೆನಾಡೈನ್ (ಸೆಲ್ಡೇನ್), erfenadine (Seldane) ಪ್ರತಿ-ಹಿಸ್ಟಮೈನ್‌ಗಳಾಗಿ ವರ್ತಿಸುತ್ತವೆ.

ಪ್ರತಿ-ಹಿಸ್ಟಮೈನ್‌ಗಳು, ಎಲ್ಲಿ ಹಿಸ್ಟಮೈನ್ ತನ್ನ ಪರಿಣಾಮ ಬೀರುವುದೋ, ಅಲ್ಲಿ ಗ್ರಾಹಿಗಳ ಬಂಧಕ ಸ್ಥಳಕ್ಕೆ ಹಿಸ್ಟಮೈನ್‌ನೊದಿಗೆ ಪೈಪೋಟಿ ನಡೆಸಿ, ಹಿಸ್ಟಮೈನ್‌ನ ನೈಸರ್ಗಿಕ ಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುತ್ತವೆ.

ಪ್ರತಿ-ಹಿಸ್ಟಮೈನ್‌ಗಳು ಏಕೆ ಜಠರದ ಆಮ್ಲ ಸ್ರವಿಸುವಿಕೆಯ ಮೇಲೆ ಪ್ರಭಾವ ಬೀರುವುದಿಲ್ಲ ಎಂದರೆ ಅಲರ್ಜಿನಿರೋಧಕ (antiallergic) ಮತ್ತು ಆಮ್ಲನಿರೋಧಕ (antacid) ಔಷಧಗಳು ವಿಭಿನ್ನ ಗ್ರಾಹಿಗಳೊಂದಿಗೆ ಕಾರ್ಯ ನಿರ್ವಹಿಸುತ್ತವೆ.

ಪ್ರಜಾವಾಣಿ ನೋಡಿಯೊ

ಪಿಯುಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಹುಲಿ ಬೇಟೆ ತಡೆ ಕಾರ್ಯಾಚರಣೆ: ಮಾಹಿತಿ ಒದಗಿಸದ ರಾಜ್ಯ

ನವದೆಹಲಿ: ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ನಿರ್ದೇಶನ ನೀಡಿದ ಬಳಿಕವೂ ಹುಲಿ ಹಾಗೂ ಇತರ ಕಾಡು ಪ್ರಾಣಿಗಳ ಕಳ್ಳ ಬೇಟೆ ತಡೆ ಕಾರ್ಯಾಚರಣೆಯ ಕುರಿತು ಕರ್ನಾಟಕ ಸರ್ಕಾರ ವರದಿ ಸಲ್ಲಿಸಿಲ್ಲ.

ಕಾರ್ಯಾಚರಣೆ ಕುರಿತು ಕೇರಳ, ಮಧ್ಯ ಪ್ರದೇಶ ಅರಣ್ಯ ಇಲಾಖೆಗಳಷ್ಟೇ ಮಾಹಿತಿ ಒದಗಿಸಿವೆ. ವನ್ಯಜೀವಿ ಧಾಮಗಳಲ್ಲಿ ವಶಪಡಿಸಿಕೊಂಡ ಬಲೆಗಳು ಹಾಗೂ ವಿದ್ಯುತ್ ವೈರ್‌ಗಳ ವಿವರಗಳನ್ನು ನೀಡಿವೆ. ಈ ಸಂಬಂಧ ಹುಲಿ ಸಂರಕ್ಷಣಾ ಪ್ರಾಧಿಕಾರದಿಂದ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಪಡೆಯಲಾಗಿದೆ.

ಹುಲಿ ಸಂರಕ್ಷಿತ ಧಾಮಗಳು ಹಾಗೂ ಆಸುಪಾಸಿನ ಪ್ರದೇಶಗಳಲ್ಲಿ ಅಕ್ರಮವಾಗಿ ವಿದ್ಯುತ್ ಹರಿಸಿ ಹಾಗೂ ಬಲೆ ಹಾಕಿ ಹುಲಿ ಹಾಗೂ ಇತರ ವನ್ಯಜೀವಿಗಳನ್ನು ಕೊಲ್ಲುತ್ತಿರುವ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿವೆ. ಹೀಗಾಗಿ, ಅವುಗಳ ಕಳ್ಳ ಬೇಟೆ ನಿಯಂತ್ರಣಕ್ಕೆ ಜನವರಿ ಮೂರನೇ ವಾರದಲ್ಲಿ ಕಾರ್ಯಾಚರಣೆ ನಡೆಸಬೇಕು. ಜತೆಗೆ, ಸೂಕ್ಷ್ಮ ಪ್ರದೇಶಗಳಲ್ಲಿ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು. ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಮೂರು ತಿಂಗಳಿಗೊಮ್ಮೆ ಕಾರ್ಯಾಚರಣೆ ನಡೆಸಿ ವರದಿ ಸಲ್ಲಿಸಬೇಕು ಎಂದು ಎನ್‌ಟಿಸಿಎ ಉಪ ಮಹಾನಿರ್ದೇಶಕ ರಾಜೇಂದ್ರ ಜಿ.ಗರವಾಡ ಅವರು ಎಲ್ಲ ಹುಲಿ ಸಂರಕ್ಷಿತ ಪ್ರದೇಶಗಳ ನಿರ್ದೇಶಕರಿಗೆ 2022ರ ಜನವರಿ 14ರಂದು ಪತ್ರ ಬರೆದಿದ್ದರು. ಆದರೆ, ಈವರೆಗೆ ಬಹುತೇಕ ರಾಜ್ಯಗಳು ಮಾಹಿತಿ ನೀಡಿಲ್ಲ.

ಕರ್ನಾಟಕದಲ್ಲಿ ಫೆಬ್ರುವರಿಯಲ್ಲಿ ಎರಡು ಹುಲಿಗಳು ಅನುಮಾನಾಸ್ಪದವಾಗಿ ಮೃತಪಟ್ಟಿವೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕುಂದಕೆರೆ ವಲಯ ವ್ಯಾಪ್ತಿಯ ಮಲ್ಲಯ್ಯನಕಟ್ಟೆ ಕೆರೆಯಲ್ಲಿ ಇದೇ 7ರಂದು ಹುಲಿಯ ಮೃತದೇಹ ಪತ್ತೆಯಾಗಿತ್ತು. ಹುಲಿಯು ಜಮೀನಿನಲ್ಲಿ ಅಳವಡಿಸಿದ್ದ ವಿದ್ಯುತ್ ತಂತಿ ಬೇಲಿ ಸ್ಪರ್ಶಿಸಿ ಮೃತಪಟ್ಟಿರುವುದು ಖಚಿತವಾಗಿತ್ತು.

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಮಂಚಲದೊರೆ ಅರಣ್ಯ ಪ್ರದೇಶದಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಹುಲಿ ಕಳೇಬರ ಇತ್ತೀಚೆಗೆ ಪತ್ತೆಯಾಗಿತ್ತು. ಆದರೆ, ಹುಲಿಯ ಸಾವಿಗೆ ಕಾರಣವೇನು ಎಂಬುದನ್ನು ಅರಣ್ಯ ಇಲಾಖೆ ಈ ತನಕ ಪತ್ತೆ ಹಚ್ಚಿಲ್ಲ.

ಹುಲಿಗಳ ಸಾವು– ರಾಜ್ಯಕ್ಕೆ ಮೂರನೇ ಸ್ಥಾನ: 2012ರಿಂದ ಇಲ್ಲಿಯವರೆಗೆ ದೇಶದಲ್ಲಿ 1,062 ಹುಲಿಗಳು ಮೃತಪಟ್ಟಿವೆ. ಇದರಲ್ಲಿ ಸಹಜ ಸಾವಿನ ಪ್ರಕರಣಗಳು ಸೇರಿವೆ. ಶೇ 53ರಷ್ಟು ಹುಲಿಗಳು ಸಂರಕ್ಷಿತ ಧಾಮದಲ್ಲಿ ಮೃತಪಟ್ಟಿವೆ. ಶೇ 35.22ರಷ್ಟು ಹುಲಿಗಳು ಸಂರಕ್ಷಿತ ಧಾಮದ ಹೊರಗೆ ಸತ್ತಿವೆ. ಶೇ 11.58ರಷ್ಟು ಹುಲಿಗಳ ಕಳೇಬರಗಳನ್ನು ಅರಣ್ಯ ಇಲಾಖೆಗಳ ಸಿಬ್ಬಂದಿ ವಶಪಡಿಸಿಕೊಂಡಿದ್ದಾರೆ.


ಕಳೆದೊಂದು ದಶಕದಲ್ಲಿ ಮಧ್ಯಪ್ರದೇಶದಲ್ಲಿ ಅತೀ ಹೆಚ್ಚು ಹುಲಿಗಳು (270) ಸತ್ತಿವೆ. ಮಹಾರಾಷ್ಟ್ರ (184) ಹಾಗೂ ಕರ್ನಾಟಕ (150) ನಂತರದ ಸ್ಥಾನದಲ್ಲಿವೆ. ಅಭಯಾರಣ್ಯಗಳ ಪೈಕಿ ನಾಗರಹೊಳೆ (51) ಹಾಗೂ ಬಂಡೀಪುರ (49) ಮೂರು ಹಾಗೂ ನಾಲ್ಕನೇ ಸ್ಥಾನದಲ್ಲಿವೆ. ಬಿಆರ್‌ಟಿಯಲ್ಲಿ 10 ಹಾಗೂ ಭದ್ರಾ ಅಭಯಾರಣ್ಯದಲ್ಲಿ 6 ಹುಲಿಗಳು ಮೃತಪಟ್ಟಿವೆ.



ಸುಭಾಷಿತ
ಹೃದಯಾಂತರಾಳದಿಂದ ಬರುವ ಮಾತುಗಳು ಹೃದಯವನ್ನು ತಾಕುತ್ತವೆ.
-ರೂಮಿ

ಮನೀಷ್ ಸಿಸೋಡಿಯಾ ಬಂಧನ ಎಎಪಿ ಮುಂದೆ ಗಂಭೀರ ಬಿಕ್ಕಟ್ಟು

ದೆಹಲಿಯ ಉಪಮುಖ್ಯಮಂತ್ರಿ ಮತ್ತು ಎಎಪಿಯ ಹಿರಿಯ ಮುಖಂಡ ಮನೀಷ್ ಸಿಸೋಡಿಯಾ ಅವರನ್ನು ಸಿಬಿಐ ಬಂಧಿಸಿದೆ. ದೆಹಲಿ ಸರ್ಕಾರವು ಈಗ ರದ್ದುಪಡಿಸಿರುವ ಅಬಕಾರಿ ನೀತಿ ಜಾರಿಯಲ್ಲಿ ಈ ಹಿಂದೆ ಅಕ್ರಮ ನಡೆದಿತ್ತು ಎಂಬ ಪ್ರಕರಣದ ತನಿಖೆಯ ಭಾಗವಾಗಿ ಈ ಬಂಧನ ನಡೆದಿದೆ. ಅಬಕಾರಿ ಖಾತೆಯು ಸಿಸೋಡಿಯಾ ಅವರ ಬಳಿಯಲ್ಲಿಯೇ ಇತ್ತು. ಅಬಕಾರಿ ನೀತಿ ರೂಪಿಸುವಿಕೆ ಮತ್ತು ಅದರ ಜಾರಿಯಲ್ಲಿ ಅಕ್ರಮ ಮತ್ತು ಭ್ರಷ್ಟಾಚಾರ ನಡೆದಿದೆ ಎಂದು ಮುಖ್ಯ ಕಾರ್ಯದರ್ಶಿಯವರು ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ವರದಿ ಕೊಟ್ಟಿದ್ದರು. ಅದರ ಆಧಾರದಲ್ಲಿ ಕ್ರಮ ಕೈಗೊಂಡಿರುವ ಸಕ್ಸೇನಾ ಅವರು, ಸಿಬಿಐ ತನಿಖೆಗೆ ಶಿಫಾರಸು ಮಾಡಿದ್ದರು. ಅಕ್ರಮ ನಡೆದಿದೆ ಎಂಬ ಆರೋಪ ಕೇಳಿಬಂದ ಬಳಿಕ ನೀತಿಯನ್ನು ರದ್ದುಪಡಿಸಲಾಯಿತು. ಸಗಟು ಮಾರಾಟಗಾರರಿಗೆ ಹಳೆಯ ನೀತಿಗಿಂತ ಹೊಸ ನೀತಿಯಲ್ಲಿ ಲಾಭದ ಅಂಶ ಹೆಚ್ಚು ಎಂಬಂತಹ ಕೆಲವು ಪ್ರಶ್ನೆಗಳು ಈ ನೀತಿಯ ಕುರಿತು ಇವೆ. ಆರೋಪಿತ ವಂಚನೆ ಪ್ರಕರಣದ ಹಿಂದೆ ಕೆಲವು ವ್ಯಕ್ತಿಗಳು, ಅಧಿಕಾರಿಗಳು ಮತ್ತು ರಾಜಕಾರಣಿಗಳ ಜಾಲದ ಪಾತ್ರ ಇದೆ ಎಂದೂ ಹೇಳಲಾಗಿದೆ. ಕೆಲವು ವ್ಯಕ್ತಿಗಳು ಶಾಮೀಲಾಗಿದ್ದಾರೆ ಎಂಬುದಕ್ಕೆ ಡಿಜಿಟಲ್ ಸಾಕ್ಷ್ಯಗಳೂ ಇವೆ ಎನ್ನಲಾಗುತ್ತಿದೆ. ಈ ಅವ್ಯವಹಾರ ಪ್ರಕರಣದಿಂದ ಬಂದ ಹಣವನ್ನು ಪಂಜಾಬ್ ಮತ್ತು ಗೋವಾ ಚುನಾವಣೆಗೆ ಬಳಸಿಕೊಳ್ಳಲಾಗಿದೆ ಎಂದು ಆರೋಪಿಸಲಾಗಿದೆ.



ಇಂತಹ ಪ್ರಕರಣಗಳಿಂದ ಸಿಬಿಐಯ ವಿಶ್ವಾಸಾರ್ಹತೆ ಕುಗ್ಗುತ್ತದೆ, ಕಾನೂನು ಜಾರಿ ಸಂಸ್ಥೆಗಳ ನ್ಯಾಯಬದ್ಧತೆ ಕುರಿತಂತೆ ಜನರಲ್ಲಿರುವ ವಿಶ್ವಾಸಕ್ಕೆ ಧಕ್ಕೆಯಾಗುತ್ತದೆ

ಆದರೆ, ವಿರೋಧ ಪಕ್ಷಗಳ ಮುಖಂಡರು ಮತ್ತು ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ನೇತೃತ್ವದ ಸರ್ಕಾರಗಳ ಸಚಿವರನ್ನು ಕೇಂದ್ರ ಸರ್ಕಾರವು ನಡೆಸಿಕೊಳ್ಳುತ್ತಿರುವ ಶೈಲಿಗೆ ಅನುಗುಣವಾಗಿಯೇ ಸಿಸೋಡಿಯಾ ಅವರ ಬಂಧನ ಪ್ರಕರಣವೂ ಇದೆ. ರಾಜಕೀಯ ಪ್ರತಿಸ್ಪರ್ಧಿಗಳನ್ನು ಮತ್ತು ಸರ್ಕಾರದ ಟೀಕಾಕಾರರನ್ನು ಗುರಿಯಾಗಿಸಿ ಸಿಬಿಐ ಮತ್ತು ಜಾರಿ ನಿರ್ದೇಶನಾಲಯದಂತಹ (ಇ.ಡಿ) ತನಿಖಾ ಸಂಸ್ಥೆಗಳನ್ನು ಕೇಂದ್ರವು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬ ಆರೋಪ ಮತ್ತೆ ಕೇಳಿಬಂದಿದೆ. ಸಿಬಿಐಯನ್ನು ಈ ಹಿಂದಿನ ಸರ್ಕಾರಗಳೂ ದುರ್ಬಳಕೆ ಮಾಡಿಕೊಂಡಿದ್ದವು ಎಂಬ ಕಾರಣಕ್ಕಾಗಿಯೇ ಈ ಸಂಸ್ಥೆಗೆ 'ಪಂಜರದೊಳಗಿನ ಗಿಣಿ' ಎಂಬ ಹೆಸರು ಬಂದಿತ್ತು. ಆದರೆ, ಈಗಿನ ಸರ್ಕಾರವು ಅಧಿಕಾರಕ್ಕೆ ಬಂದ ಬಳಿಕ ವಿರೋಧ ಪಕ್ಷಗಳ ರಾಜಕಾರಣಿಗಳನ್ನೇ ಹೆಚ್ಚಾಗಿ ಬಂಧಿಸಲಾಗಿದೆ. ರಾಜಕೀಯವಾಗಿ ಕಿರುಕುಳ ನೀಡುವುದೇ ಇಂತಹ ಬಂಧನಗಳ ಉದ್ದೇಶ ಎಂಬುದನ್ನು ಪದೇ ಪದೇ ಹೇಳಲಾಗಿದೆ. ಇಂತಹ ಪ್ರಕರಣಗಳ ವಿಚಾರಣೆಗಳು ಮುಂದುವರಿಯುತ್ತವೆ ಮತ್ತು ಈ ಪ್ರಕ್ರಿಯೆಯೇ ಒಂದು ರೀತಿಯ ದಂಡನೆಯಾಗಿಬಿಡುತ್ತದೆ; 'ಇಂತಹ ಪ್ರಕರಣಗಳಲ್ಲಿನ ಆರೋಪಿತರು ಹಲವು ವರ್ಷ ಸಂದೇಹದ ನೆರಳಿನಲ್ಲಿಯೇ ಇರಬೇಕಾಗುತ್ತದೆ. ಸಿಸೋಡಿಯಾ ಅವರನ್ನು ಆರೋಪಿ ಎಂಬ ಕಾರಣಕ್ಕಾಗಿ ಬಂಧಿಸಿಲ್ಲ; ಬದಲಿಗೆ ಸಿಬಿಐ ತನಿಖೆಗೆ ಅವರು ಸಹಕರಿಸುತ್ತಿಲ್ಲ ಎಂಬ ಕಾರಣಕ್ಕೆ ಬಂಧಿಸಲಾಗಿದೆ. ಸಿಬಿಐ ವಿಶ್ವಾಸಾರ್ಹತೆಯು ಇಂತಹ ಪ್ರಕರಣಗಳಿಂದಾಗಿ ಕುಗ್ಗುತ್ತದೆ. ಕಾನೂನು ಜಾರಿ ಸಂಸ್ಥೆಗಳ ನ್ಯಾಯಬದ್ಧತೆ ಕುರಿತಂತೆ ಜನರಲ್ಲಿರುವ ವಿಶ್ವಾಸಕ್ಕೆ ಧಕ್ಕೆಯಾಗುತ್ತದೆ.

ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಆರೋಪಗಳನ್ನು ಎಎಪಿ ಅಲ್ಲಗಳೆದಿದೆ. ಬಂಧನವನ್ನು ಖಂಡಿಸಿ ರಾಷ್ಟ್ರವ್ಯಾಪಿ ಪ್ರತಿಭಟನೆಗಳನ್ನೂ ನಡೆಸಿದೆ. ಸಿಸೋಡಿಯಾ ಅವರು ಪಕ್ಷ ಮತ್ತು ಸರ್ಕಾರದಲ್ಲಿ ಎರಡನೇ ಮುಖ್ಯ ವ್ಯಕ್ತಿ. ದೆಹಲಿ ಸರ್ಕಾರದ 33 ಖಾತೆಗಳ ಪೈಕಿ 18 ಖಾತೆಗಳನ್ನು ಅವರು ನಿಭಾಯಿಸುತ್ತಿದ್ದರು. ಹಣಕಾಸು, ಆರೋಗ್ಯ ಮತ್ತು ಶಿಕ್ಷಣದಂತಹ ಮಹತ್ವದ ಖಾತೆಗಳೂ ಅವುಗಳಲ್ಲಿ ಸೇರಿದ್ದವು. ಇನ್ನೊಬ್ಬ ಹಿರಿಯ ಸಚಿವ ಸತ್ಯೇಂದ್ರ ಜೈನ್ ಅವರೂ ಕಳೆದ ಹಲವು ತಿಂಗಳಿನಿಂದ ಸೆರೆಮನೆಯಲ್ಲಿಯೇ ಇದ್ದಾರೆ. ಅವರ ವಿರುದ್ಧವೂ ಅಕ್ರಮ ಹಣ ವರ್ಗಾವಣೆಯ ಆರೋಪ ಇದೆ. ಸೆರೆಮನೆ ಸೇರಿರುವ ಸಿಸೋಡಿಯಾ ಮತ್ತು ಜೈನ್ ಅವರು ಸಚಿವ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ. ರಾಜ್ಯದ ಬಜೆಟ್ ಅನ್ನು ಶೀಘ್ರವೇ ಮಂಡಿಸಬೇಕಿದೆ ಮತ್ತು ಇಂತಹ ಸಂದರ್ಭದಲ್ಲಿ ಹಣಕಾಸು ಖಾತೆಯ ಹೊಣೆ ಹೊತ್ತಿದ್ದ ಸಿಸೋಡಿಯಾ ರಾಜೀನಾಮೆ ನೀಡಿದ್ದರಿಂದ ಸರ್ಕಾರಕ್ಕೆ ಕಷ್ಟವಾಗಬಹುದು. ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರೇ ಹಗರಣದ ಮುಖ್ಯ ಸೂತ್ರಧಾರಿ ಎಂದು ಬಿಜೆಪಿ ಮುಖಂಡರು ಆರೋಪಿಸುತ್ತಿದ್ದಾರೆ. ಕೇಜ್ರಿವಾಲ್ ಅವರೇ ತನಿಖಾ ಸಂಸ್ಥೆಗಳ ಮುಂದಿನ ಗುರಿ ಆಗಬಹುದೇ ಎಂಬ ಅನುಮಾನಕ್ಕೆ ಇದು ಕಾರಣವಾಗಿದೆ. ಹಾಗಾದರೆ, ಎಎಪಿ ಗಂಭೀರವಾದ ಬಿಕ್ಕಟ್ಟು ಎದುರಿಸಬೇಕಾಗಬಹುದು.

ಮಾರ್ಕ್ ಟ್ವೇನ್ ಹೇಳಿದ ಗಿಲೀಟಿನ ಕಾಲ



ವಿಶ್ಲೇಷಣೆ
ಆಶುತೋಷ್ ವಾರ್ಷ್ಣೇಯ

ಅದಾನಿ ಸಮೂಹಕ್ಕೆ ಸಂಬಂಧಿಸಿದ ವಿದ್ಯಮಾನವನ್ನು ಸರಿಯಾದ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಬೇಕು ಎಂದಾದರೆ, ಅದನ್ನು ತೌಲನಿಕವಾಗಿ ನೋಡಬೇಕು, ಇತಿಹಾಸದ ಅವಲೋಕನ ನಡೆಸಬೇಕು. ಇಲ್ಲಿರುವ ಮುಖ್ಯ ಪ್ರಶ್ನೆ ಹೀಗಿದೆ: ಬಂಡವಾಳಶಾಹಿ ವ್ಯವಸ್ಥೆಯ ವಿಕಾಸದ ಪ್ರಕ್ರಿಯೆಯಲ್ಲಿ ನಮಗೆ ಸರ್ಕಾರ–ವಾಣಿಜ್ಯೋದ್ಯಮದ ನಡುವಿನ ಸಂಬಂಧಗಳ ಬಗ್ಗೆ ಏನು ತಿಳಿದಿದೆ? ಸಮಕಾಲೀನ ಭಾರತದಲ್ಲಿ ಸಾದೃಶ್ಯ ಅಥವಾ ಭಿನ್ನತೆ ಎಷ್ಟರ ಮಟ್ಟಿಗೆ ಇದೆ?

ವಿಕಾಸ ಹೊಂದಿದ ಬಂಡವಾಳಶಾಹಿ ವ್ಯವಸ್ಥೆಗಳಲ್ಲಿ ಕಂಪನಿಗಳು ಉತ್ಪನ್ನಗಳಲ್ಲಿ ಹೊಸತನವನ್ನು ಹುಡುಕುವ ಆಧಾರದಲ್ಲಿ ಮತ್ತು/ಅಥವಾ ವೆಚ್ಚಗಳನ್ನು ತಗ್ಗಿಸುವ ಆಧಾರದಲ್ಲಿ ಬೆಳೆಯುತ್ತವೆ ಅಥವಾ ಸಾಯುತ್ತವೆ ಎಂದು ನಂಬಲಾಗಿದೆ. ಗ್ರಾಹಕರಲ್ಲಿ ಹೊಸ ಆಲೋಚನೆಗಳನ್ನು ಪ್ರಚೋದಿಸುವ ರೀತಿಯಲ್ಲಿ ಕಂಪನಿಗಳು ಉತ್ಪನ್ನಗಳನ್ನು ಹೊರತಂದಿವೆಯೇ– ಅಂದರೆ, ಆ್ಯಪಲ್ ಕಂಪ್ಯೂಟರ್ ರೀತಿಯ ಅಥವಾ ಐಫೋನ್ ರೀತಿಯ ಉತ್ಪನ್ನಗಳನ್ನು ಸಿದ್ಧಪಡಿಸಿವೆಯೇ? ಕಂಪನಿಗಳು ಉತ್ಪಾದನೆಯಲ್ಲಿ ಹೊಸ ತಂತ್ರವನ್ನು ಅನುಸರಿಸಿ, ಇನ್ನಷ್ಟು ಉತ್ತಮವಾದ ಯಂತ್ರಗಳನ್ನು ಬಳಸಿ ಇತರ ಕಂಪನಿಗಳ ಗಮನವನ್ನು ಸೆಳೆದಿವೆಯೇ?

ಇಂಥವು ಪಠ್ಯಗಳಲ್ಲಿ ಮಾತ್ರ ಕಾಣುವ ವ್ಯವಸ್ಥೆಗಳಾಗಿರಬಹುದು, ವಿಕಾಸ ಹೊಂದಿದ ಬಂಡವಾಳಶಾಹಿ ವ್ಯವಸ್ಥೆಯ ನಿಜ ಚಿತ್ರಣ ಇದಲ್ಲದಿರಬಹುದು. ಈ ಚಿತ್ರಣದಲ್ಲಿನ ಕೆಲವು ಮಾತ್ರ ನಿಜವಿರಬಹುದು. ವಿಕಾಸ ಹೊಂದಿದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಎಲ್ಲವನ್ನೂ, ಆ್ಯಡಂ ಸ್ಮಿತ್ ಹೇಳಿದ ಮಾರುಕಟ್ಟೆಯ ಅಗೋಚರ ಹಸ್ತವೇ (ಸ್ವಹಿತಾಸಕ್ತಿಯನ್ನು ಹೊಂದಿರುವ ವ್ಯಕ್ತಿಗಳು ಪರಸ್ಪರ ಅವಲಂಬನೆಯ ಮೂಲಕ ಸಮಾಜಕ್ಕೆ ಒಳಿತಾಗುವ ಕೆಲಸ ಮಾಡುವುದು) ಮುಂದಕ್ಕೊಯ್ಯುವ ಶಕ್ತಿಯಾಗಿರಲಿಕ್ಕಿಲ್ಲ. ಉದ್ಯಮ ಹಾಗೂ ಸರ್ಕಾರದ ನಡುವೆ ಸಂಬಂಧ ಅಲ್ಲಿಯೂ ಇರುತ್ತದೆ. ಮಿಲಿಟರಿಯಲ್ಲಿ ಇದು ಹೆಚ್ಚು ಖ್ಯಾತ. ಜೋ ಬೈಡನ್ ಕಳೆದ ವರ್ಷ ಅಮೆರಿಕದ ಸೆಮಿಕಂಡಕ್ಟರ್ ಉದ್ಯಮಕ್ಕೆ ಸಬ್ಸಿಡಿಗಳನ್ನು ಘೋಷಿಸಿದರು. ವಿದ್ಯುತ್ ಚಾಲಿತ ಕಾರುಗಳನ್ನು ತಯಾರಿಸುವ ಕಂಪನಿಗಳಿಗೂ ಸಬ್ಸಿಡಿ ಪ್ರಕಟಿಸಿದರು. ವಿಕಾಸ ಹೊಂದಿದ ಬಂಡವಾಳಶಾಹಿ ವ್ಯವಸ್ಥೆಗಳಲ್ಲಿ ಉದ್ಯಮ–ಸರ್ಕಾರದ ನಡುವೆ ಸಂಬಂಧ ಇರುತ್ತದೆಯಾದರೂ ಅದು ವ್ಯಾಪಕವಾಗಿರುವುದಿಲ್ಲ. ಅಂತಹ ಸಂಬಂಧಗಳು ಗೊತ್ತಾಗಿಬಿಡುತ್ತವೆ. ಅದಕ್ಕೆ ಶಿಕ್ಷೆಯೂ ಆಗುತ್ತದೆ. ಅದಕ್ಕಿಂತ ಹೆಚ್ಚಾಗಿ ನೀತಿಗಳು ಉದ್ಯಮಕ್ಕೆ ನಿರ್ದಿಷ್ಟವಾಗಿರುತ್ತವೆಯೇ ವಿನಾ ಅವು ಒಂದು ಕಂಪನಿ ಅಥವಾ ಒಂದು ಕುಟುಂಬಕ್ಕೆ ನಿರ್ದಿಷ್ಟವಾಗಿ ರೂಪುಗೊಂಡಿರುವುದಿಲ್ಲ.


ಆದರೆ ಇದಕ್ಕೆ ಹೋಲಿಸಿದರೆ, ಬಂಡವಾಳಶಾಹಿ ವ್ಯವಸ್ಥೆಯ ಆರಂಭಿಕ ಹಂತವು ಬಹಳ ಭಿನ್ನವಾಗಿರುತ್ತದೆ. ಬಂಡವಾಳಶಾಹಿ ವ್ಯವಸ್ಥೆಯ ಬೆಳವಣಿಗೆಯ ಜೊತೆಯಲ್ಲಿಯೇ ಭ್ರಷ್ಟಾಚಾರ ಕೂಡ ಇರುತ್ತದೆ ಎಂಬುದು ಇತಿಹಾಸದಲ್ಲಿ ದಾಖಲಾಗಿದೆ. ಗ್ರಾಮೀಣ ಪ್ರದೇಶಗಳ ದೇಶವಾಗಿದ್ದ ಅಮೆರಿಕ ಮೊದಲ ಬಾರಿಗೆ ಬೃಹತ್ ಪ್ರಮಾಣದ ಬಂಡವಾಳಶಾಹಿ ಪರಿವರ್ತನೆಯನ್ನು ಕಂಡ 1865–1900ರ ನಡುವಿನ ಅವಧಿಯನ್ನು ಪರಿಶೀಲಿಸೋಣ. ಮಾರ್ಕ್ ಟ್ವೇನ್ ತಮ್ಮ ಸಾಹಿತ್ಯಕ ನೋಟ ಹಾಗೂ ಬೌದ್ಧಿಕ ದೂರದರ್ಶಿತ್ವದ ಸಹಾಯದಿಂದ ಹೊಸ ಆರ್ಥಿಕ ಬದಲಾವಣೆಯ ಸಾರವನ್ನು ಮೊದಲು ಗುರುತಿಸಿದರು. 1873ರಲ್ಲಿ ಅವರು ಇದನ್ನು 'ಗಿಲ್ಡಡ್ ಏಜ್' (ಗಿಲೀಟಿನ ಯುಗ) ಎಂದು ಕರೆದರು. ಸರ್ಕಾರದ ಜೊತೆ ಹಲವು ಹಂತಗಳಲ್ಲಿ ಎಲ್ಲ ಬಗೆಯ ಒಪ್ಪಂದಗಳನ್ನು ಮಾಡಿಕೊಳ್ಳುತ್ತ ಅಮೆರಿಕದ ಮೊದಲ ಶತಕೋಟ್ಯಧೀಶರು– ಅಂದರೆ, ಕಾನಗಿ, ರಾಕ್‌ಫೆಲ್ಲರ್, ವಾಂಡರ್‌ಬಿಲ್ಟ್ಸ್ ಮತ್ತು ಮಾರ್ಗನ್– ಪ್ರವರ್ಧಮಾನಕ್ಕೆ ಬಂದರು. ರೈಲು ಮಾರ್ಗ ನಿರ್ಮಾಣಕ್ಕೆ 'ನನಗೆ ನಾಲ್ಕು ರಾಜ್ಯಗಳ ಶಾಸಕರು ಬೇಕಿದ್ದರು. ಹಾಗಾಗಿ ನಾನು ನನ್ನದೇ ಹಣದಿಂದ ಅವರನ್ನು ಸೃಷ್ಟಿಸಿದೆ' ಎಂದು ರೈಲು ಮಾರ್ಗಗಳ ನಿರ್ಮಾಣ ಕ್ಷೇತ್ರದ ದೈತ್ಯ ಜೇ ಗೂಲ್ಡ್ ಹೇಳಿದ್ದರು. ಅನೈತಿಕ ವಾಣಿಜ್ಯ ಚಟುವಟಿಕೆಗಳ ಮೂಲಕ ಶ್ರೀಮಂತಿಕೆ ಪಡೆದವರು ಎನ್ನಲಾದವರು ಸರ್ಕಾರಗಳನ್ನು ಹಾಗೂ ಶಾಸಕರನ್ನು ಸಲೀಸಾಗಿ 'ಖರೀದಿ'ಸುತ್ತಿದ್ದರು.

ಥಿಯೊಡೊರ್ ರೂಸ್‌ವೆಲ್ಟ್ ಅಧ್ಯಕ್ಷ ಅವಧಿಯಲ್ಲಿ (1901–09) ಒಂದಿಷ್ಟು ಶುಚಿಗೊಳಿಸುವ ಕೆಲಸ ಆರಂಭವಾಯಿತು. ಅದರ ಪರಿಣಾಮಗಳು ಒಂದಿಷ್ಟುಮಟ್ಟಿಗೆ ಕಾಣಿಸಿಕೊಂಡವು. 1860ರ ಹೊತ್ತಿನಲ್ಲಿ ಯುರೋಪಿನ ಪಶ್ಚಿಮ ಭಾಗಕ್ಕೆ ಹೋಲಿಸಿದರೆ ಅಮೆರಿಕವು ಹಿಂದುಳಿದಿತ್ತು. ಆದರೆ 1910ರ ಹೊತ್ತಿಗೆ ಅಮೆರಿಕವು ವಿಶ್ವದ ಅತ್ಯಂತ ಶ್ರೀಮಂತ ದೇಶವಾಗಿತ್ತು. ಕೈಗಾರಿಕಾ ನಾಯಕ ಆಗಿದ್ದ ಬ್ರಿಟನ್ ಹಿಂದೆ ಬಿದ್ದಿತ್ತು.

ಕೊಳೆಯುವಿಕೆಯೂ ಕ್ರಿಯಾಶೀಲತೆಯೂ ಒಟ್ಟೊಟ್ಟಿಗೇ ಇರುವ ಅರ್ಥ ಕೊಡುವ 'ಗಿಲ್ಡಡ್ ಏಜ್' ಪದವು ಅಂದಿನಿಂದ ಒಂದು ಪರಿಕಲ್ಪನೆಯನ್ನು ವಿವರಿಸುತ್ತಿದೆ, ಬಳಕೆಗೆ ಬಂದಿದೆ. ಒಂದು ಕಾಲಘಟ್ಟದ ಸ್ಥಿತಿಯನ್ನು ವಿವರಿಸಿದ 'ಗಿಲ್ಡಡ್ ಏಜ್'ನ ತೀರಾ ಈಚಿನ ಅಭಿವ್ಯಕ್ತಿಯೆಂದರೆ ಯುಯೆನ್ ಯುಯೆನ್ ಆ್ಯಂಗ್ ಅವರು 2021ರಲ್ಲಿ ಬರೆದ 'ಚೈನಾಸ್ ಗಿಲ್ಡಡ್ ಏಜ್' ಕೃತಿ. ಅವರು ಇದರಲ್ಲಿ ನಾಲ್ಕು ಭಿನ್ನ ಬಗೆಯ ಭ್ರಷ್ಟಾಚಾರಗಳನ್ನು ಗುರುತಿಸಿದ್ದಾರೆ. 1. ಸಣ್ಣಪುಟ್ಟ ಕಳ್ಳತನ (ತಳಹಂತದ ಅಧಿಕಾರಿಗಳಿಂದ ನಡೆಯುವ ಸುಲಿಗೆ, ಸಾರ್ವಜನಿಕರ ಹಣದ ದುರ್ಬಳಕೆ), 2. ಭಾರಿ ಪ್ರಮಾಣದ ಕಳ್ಳತನ (ರಾಜಕಾರಣದಲ್ಲಿ ಮೇಲಿನ ಹಂತಗಳಲ್ಲಿ ಇರುವವರು ದೊಡ್ಡ ಮಟ್ಟದಲ್ಲಿ ಸಾರ್ವಜನಿಕರ ಹಣವನ್ನು ದುರ್ಬಳಕೆ ಮಾಡಿಕೊಳ್ಳುವುದು), 3. ವೇಗವಾಗಿ ಹಣ ಮಾಡುವುದು (ಅಧಿಕಾರಶಾಹಿ ಸೃಷ್ಟಿಸುವ ಅಡ್ಡಿಗಳನ್ನು ದಾಟಿ ಮುನ್ನಡೆಯಲು ಹಣ ಕೊಡುವುದು), 4. ಸ್ಥಾನಮಾನದ ಹಣ (ಗುತ್ತಿಗೆಗೆ ಪ್ರತಿಯಾಗಿ ಉದ್ಯಮಿಗಳು ರಾಜಕಾರಣಿಗಳು ಹಾಗೂ ಅಧಿಕಾರಿಗಳಿಗೆ ಕೊಡುವ ಸೌಲಭ್ಯಗಳು ಮತ್ತು ಹಣ. ಇಂತಹ ಕೊಡುಗೆಗಳು ಒಟ್ಟಾರೆ ಹೂಡಿಕೆಯನ್ನು ಹೆಚ್ಚು ಮಾಡುತ್ತವೆ. ಆ ಮೂಲಕ ಆರ್ಥಿಕ ಚಟುವಟಿಕೆಯನ್ನು ಕೂಡ ಜಾಸ್ತಿ ಮಾಡುತ್ತವೆ).

ಮೊದಲ ಮೂರು ಬಗೆಯ ಭ್ರಷ್ಟಾಚಾರಗಳು ದೇಶದ ಆರ್ಥಿಕ ಬೆಳವಣಿಗೆಗೆ ತೊಂದರೆ ಉಂಟುಮಾಡುತ್ತವೆ ಎಂದು ಲೇಖಕಿ ವಾದಿಸುತ್ತಾರೆ. ಆದರೆ, ನಾಲ್ಕನೆಯ ಬಗೆಯ ಭ್ರಷ್ಟಾಚಾರದ ಕಡೆಗೆ ಚೀನಾ ಹೆಚ್ಚೆಚ್ಚು ವಾಲುತ್ತಿದೆ. ಇದು ಹೂಡಿಕೆಗಳನ್ನು ಹೆಚ್ಚಿಸುವ ಭ್ರಷ್ಟಾಚಾರ, ಹಾಗಾಗಿಯೇ ಬೆಳವಣಿಗೆಯನ್ನು ಉತ್ತೇಜಿಸುವಂತಹ ಭ್ರಷ್ಟಾಚಾರ. ಈ ಪ್ರಕ್ರಿಯೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಎಲ್ಲ ಹಂತಗಳ ಮೇಲ್ವರ್ಗದ ಜನರಿಗೆ ಲಾಭ ಆಗುತ್ತಿದೆ. 1995ರಿಂದ 2015ರ ನಡುವಿನ ಅವಧಿಯಲ್ಲಿ ಚೀನಾದ ಹೂಡಿಕೆ/ಜಿಡಿಪಿ ಅನುಪಾತವು ಶೇಕಡ 40ಕ್ಕಿಂತ ಕಡಿಮೆ ಆಗಿಯೇ ಇಲ್ಲ. ಆ ದೇಶದ ವಾರ್ಷಿಕ ಬೆಳವಣಿಗೆ ಪ್ರಮಾಣವು ಶೇ 9ರ ಮಟ್ಟಕ್ಕಿಂತ ಕಡಿಮೆ ಆಗಿದ್ದು ಬಹಳ ಅಪರೂಪ.

ಅದಾನಿ ಹಾಗೂ ಬಿಜೆಪಿ ನೇತೃತ್ವದ ಸರ್ಕಾರದ ನಡುವಿನ ಸಂಬಂಧವು ನಾಲ್ಕನೆಯ ಬಗೆಯ ಭ್ರಷ್ಟಾಚಾರ ಎಂದು ವಾದಿಸಬಹುದು. ಬಿಜೆಪಿಗೆ ಅವರು ವಿಶೇಷವಾಗಿ ಏನೇ ಕೊಡುಗೆ ನೀಡಿದ್ದಿರಬಹುದು. ಆದರೆ ಅವರ ಹೂಡಿಕೆಗಳು ಹೆಚ್ಚು ಇರುವುದು ಮೂಲಸೌಕರ್ಯ, ಇಂಧನ, ಧಾನ್ಯ ದಾಸ್ತಾನು, ಸಿಮೆಂಟ್ ವಲಯಗಳಲ್ಲಿ. ಅಂದರೆ, ತಾತ್ವಿಕವಾಗಿ ಈ ಹೂಡಿಕೆಗಳು ಬೆಳವಣಿಗೆಯನ್ನು ಉತ್ತೇಜಿಸುವಂಥವು ಎಂದು ಹೇಳಬಹುದು. ಆದರೆ ಈ ಬಗೆಯ ವಾದವು ಬಹಳ ಸರಳೀಕೃತ ಹೋಲಿಕೆ ಆಗುತ್ತದೆ. ಮೋದಿ ನೇತೃತ್ವದ ಭಾರತವನ್ನು ಹೋಲಿಕೆ ಮಾಡಬೇಕಿರುವುದು ಚೀನಾ ಜೊತೆಗೆ ಅಲ್ಲ. ಬದಲಿಗೆ, ಎರಡನೆಯ ಮಹಾಯುದ್ಧದ ನಂತರದ ಮೊದಲ ನಾಲ್ಕು ಏಷ್ಯನ್ ಟೈಗರ್‌ಗಳ ಪೈಕಿ ಒಂದಾದ ದಕ್ಷಿಣ ಕೊರಿಯಾ ಜೊತೆ. 60ರ ದಶಕದ ಆರಂಭದಲ್ಲಿ ದಕ್ಷಿಣ ಕೊರಿಯಾದ ತಲಾವಾರು ಆದಾಯವು ಸರಿಸುಮಾರು ಭಾರತದ ತಲಾವಾರು ಆದಾಯದಷ್ಟೇ ಇತ್ತು. ಆದರೆ 2021ರ ಡಿಸೆಂಬರ್ ಹೊತ್ತಿಗೆ ದಕ್ಷಿಣ ಕೊರಿಯಾದ ತಲಾ ಆದಾಯವು ವಿಶ್ವಬ್ಯಾಂಕ್ ಅಂದಾಜಿನ ಪ್ರಕಾರ 34,758 ಡಾಲರ್ ಆಗಿತ್ತು. ಆ ಹೊತ್ತಿನಲ್ಲಿ ಭಾರತದ ತಲಾ ಆದಾಯವು 2,100 ಡಾಲರ್ ಮಾತ್ರ ಆಗಿತ್ತು.



ದಕ್ಷಿಣ ಕೊರಿಯಾದ 'ಗಿಲ್ಡಡ್ ಏಜ್' 1960ರ ದಶಕದ ಮಧ್ಯಭಾಗದಲ್ಲಿ ಆರಂಭವಾಯಿತು. ಆ ಕಾಲಘಟ್ಟದ ವಿಶಿಷ್ಟ ಲಕ್ಷಣದ ಕಾರಣಕ್ಕಾಗಿ ಭಾರತವನ್ನು ಆ ದೇಶದ ಜೊತೆ ಹೋಲಿಸುವುದು ಹೆಚ್ಚು ಸೂಕ್ತವಾಗುತ್ತದೆ. ಆ ಕಾಲವು ಸ್ಯಾಮ್‌ಸಂಗ್, ಹುಂಡೈ, ಎಲ್‌ಜಿ, ಹಾಂಜಿನ್‌ನಂತಹ, 'ರಾಷ್ಟ್ರದ ಪಾಲಿಗೆ ಚಾಂಪಿಯನ್'ಗಳು ಎಂದು ಕರೆಸಿಕೊಂಡ ಕಂಪನಿಗಳನ್ನು ಒಳಗೊಂಡ ಗಿಲ್ಡಡ್ ಏಜ್. ಇವು ವಾಸ್ತವದಲ್ಲಿ ಕುಟುಂಬಗಳ ಪ್ರಾಬಲ್ಯದ, ಹಲವು ವಲಯಗಳಲ್ಲಿ ಕಾರ್ಯಚಟುವಟಿಕೆ ಹೊಂದಿದ್ದ ವಾಣಿಜ್ಯ ಸಮೂಹಗಳು. ಇವು ಕೂಡ ದಕ್ಷಿಣ ಕೊರಿಯಾದ ಅರ್ಥ ವ್ಯವಸ್ಥೆಯ ರೀತಿಯಲ್ಲಿಯೇ ಸರ್ಕಾರದ ಪೋಷಣೆಯಲ್ಲಿ ಬೆಳೆದವು. ಆದರೆ ಇವುಗಳ ಬೆಳವಣಿಗೆಯ ಜೊತೆಯಲ್ಲಿಯೇ ಭ್ರಷ್ಟಾಚಾರವೂ ಬೆಸೆದುಕೊಂಡಿತ್ತು. ದಕ್ಷಿಣ ಕೊರಿಯಾದ ರಾಜಕೀಯ ಅರ್ಥ ವ್ಯವಸ್ಥೆಯ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲ ವಿದ್ವಾಂಸ, ಸದರ್ನ್ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಡೇವಿಡ್ ಕಾಂಗ್ 'ಇನ್ ಕ್ರೋನಿ ಕ್ಯಾಪಿಟಲಿಸಂ' ಕೃತಿಯಲ್ಲಿ ಹೀಗೆ ಬರೆದಿದ್ದಾರೆ: 'ಕೊರಿಯಾದ ರಾಜಕೀಯದ ಇತಿಹಾಸದಲ್ಲಿ ಹಗರಣಗಳು ಮತ್ತೆ ಮತ್ತೆ ಆಗಿಹೋಗಿವೆ. ರಾಜಕೀಯ ಪ್ರಭಾವಕ್ಕೆ ಬದಲಾಗಿ ಹಣದ ಕೊಡು–ಕೊಳ್ಳುವಿಕೆ ನಡೆದಿರುವುದು ಎಲ್ಲರಿಗೂ ಗೊತ್ತಿರುವ ರಹಸ್ಯ. ಜೈಲುವಾಸ ಅನುಭವಿಸಿರುವ ಹಾಗೂ ಗಡಿಪಾರಿನ ಶಿಕ್ಷೆಗೆ ಗುರಿಯಾದವರಲ್ಲಿ ಮಾಜಿ ಅಧ್ಯಕ್ಷರು, ಅಧ್ಯಕ್ಷರ ಮಾಜಿ ಸಿಬ್ಬಂದಿ, ಮಿಲಿಟರಿ ಅಧಿಕಾರಿಗಳು, ರಾಜಕಾರಣಿಗಳು, ಅಧಿಕಾರಿಗಳು, ಬ್ಯಾಂಕರ್‌ಗಳು, ಉದ್ಯಮಿಗಳು ಹಾಗೂ ತೆರಿಗೆ ಸಂಗ್ರಹದ ಹೊಣೆಹೊತ್ತಿದ್ದವರು ಇದ್ದಾರೆ. ಬೆಳವಣಿಗೆಯು ಅದೆಷ್ಟು ಅದ್ಭುತ ಮಟ್ಟದಲ್ಲಿತ್ತು ಎಂದರೆ, ಭ್ರಷ್ಟಾಚಾರದ ವಾಸ್ತವವನ್ನು ಮುಚ್ಚಿಹಾಕಲಾಗಿತ್ತು'.

ಆದರೆ ಕುಟುಂಬಗಳ ಪ್ರಾಬಲ್ಯವಿದ್ದ ಕೊರಿಯಾದ ಕಂಪನಿಗಳು ಹಾಗೂ ಅದಾನಿ ಸಮೂಹದ ನಡುವೆ ಇರುವ ಒಂದು ದೊಡ್ಡ ವ್ಯತ್ಯಾಸವೆಂದರೆ, ಕೊರಿಯಾದ ಕಂಪನಿಗಳು ಅಂತರರಾಷ್ಟ್ರೀಯ ಮಟ್ಟದ ವ್ಯಾಪಾರೋದ್ಯಮ ವಹಿವಾಟುಗಳಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದವು. ಸ್ಯಾಮ್‌ಸಂಗ್, ಹುಂಡೈ, ಎಲ್‌ಜಿ ಕಂಪನಿಗಳು ಉತ್ಪನ್ನಗಳನ್ನು ತಯಾರಿಸಿ, ಅವುಗಳ ಮಾರಾಟದಲ್ಲಿ ತೊಡಗಿಸಿಕೊಂಡಂಥವು. ಈ ಕಂಪನಿಗಳು ಕಂಪ್ಯೂಟರ್‌ಗಳನ್ನು, ಮೊಬೈಲ್ ಫೋನ್‌ಗಳನ್ನು, ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು, ಸೆಮಿಕಂಡಕ್ಟರ್‌ಗಳನ್ನು, ವಾಹನಗಳನ್ನು ತಯಾರಿಸಿವೆ ಹಾಗೂ ವಿಶ್ವದ ಇತರ ಕಂಪನಿಗಳ ಜೊತೆ ಸ್ಪರ್ಧಿಸಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯ ಸ್ಪರ್ಧಾತ್ಮಕತೆಯು ಈ ಕಂಪನಿಗಳ ವಹಿವಾಟುಗಳಿಗೆ ಶಿಸ್ತಿನ ಬೇಲಿಯೊಂದನ್ನು ಹಾಕಿದೆ, ಅದರಿಂದಾಗಿ ಅವುಗಳ ದಕ್ಷತೆಯು ಬಹಳ ದೊಡ್ಡ ಮಟ್ಟದಲ್ಲಿ ಬೆಳೆದಿದೆ.

ಅದಾನಿ ಸಮೂಹವು ಈ ರೀತಿ ಉತ್ಪನ್ನಗಳ ಮಾರಾಟ ವಹಿವಾಟಿನಲ್ಲಿ ಹೆಚ್ಚು ತೊಡಗಿಸಿಕೊಂಡಿಲ್ಲ. ಬಂದರು, ವಿಮಾನ ನಿಲ್ದಾಣ, ಧಾನ್ಯಗಳ ದಾಸ್ತಾನು, ವಿದ್ಯುತ್ ಉತ್ಪಾದನೆ... ಇವೆಲ್ಲ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ಪನ್ನವಾಗಿ ಮಾರಾಟ ಆಗುವಂಥವಲ್ಲ. ಇವುಗಳೆಲ್ಲ ಸರ್ಕಾರದ ಬೆಂಬಲ ಪಡೆದಿರುವ ಹಾಗೂ ದೇಶಿ ಮಾರುಕಟ್ಟೆಯನ್ನು ಆದ್ಯತೆಯಾಗಿ ಇರಿಸಿಕೊಂಡಿರುವಂಥವು. ಅಂತರರಾಷ್ಟ್ರೀಯ ಮಾರುಕಟ್ಟೆಯ ವಹಿವಾಟಿನಲ್ಲಿ ತೊಡಗಿಸಿಕೊಳ್ಳುವುದರಿಂದಾಗಿ ಸಿಗುವ ದಕ್ಷತೆ ಇಲ್ಲಿ ಇರುವುದಿಲ್ಲ. ಅದಾನಿ ಸಮೂಹವು ಸ್ಯಾಮ್‌ಸಂಗ್ ಅಲ್ಲ– ಕೇಂದ್ರದ ಸಹಾಯ ಇಲ್ಲದೆ ಈ ಸಮೂಹವು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಬಹುದಾದಂಥದ್ದು ಹೆಚ್ಚೇನೂ ಇಲ್ಲ. ಭಾರತದ ಮಾಹಿತಿ ತಂತ್ರಜ್ಞಾನ ಉದ್ಯಮ ವಲಯ ಹೊಂದಿರುವ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕತೆಯ ಜೊತೆಗೂ ಈ ಸಮೂಹವನ್ನು ಹೋಲಿಸಲಾಗದು. ದಕ್ಷಿಣ ಕೊರಿಯಾ ಜೊತೆ ಹೋಲಿಸಿದರೆ, ಅದಾನಿ–ಸರ್ಕಾರದ ನಡುವಿನ ಸಂಬಂಧವು ಬಹಳ ಭಿನ್ನ. ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕತೆ ಇಲ್ಲದೆ, ಅರ್ಥ ವ್ಯವಸ್ಥೆಯ ಮೇಲೆ ಇದರ ಪ್ರಯೋಜನಗಳು ಬಹಳ ಸೀಮಿತ.

ವಾಸ್ತವದಲ್ಲಿ ಅದಾನಿ ಸಮೂಹದ ಸುತ್ತ ಮೊದಲ ಶಿಸ್ತಿನ ಚೌಕಟ್ಟು ಅಂತೂ ರೂಪುಗೊಂಡಿರುವುದು ಅಂತರರಾಷ್ಟ್ರೀಯ ವ್ಯಾಪಾರ ವಹಿವಾಟಿನ ಕಾರಣದಿಂದಾಗಿ ಅಲ್ಲ. ಬದಲಿಗೆ, ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯ ಕಾರಣದಿಂದಾಗಿ. ಈ ಸಮೂಹದ ವಾಣಿಜ್ಯೋದ್ಯಮದ ಬಗೆಯನ್ನು ಅಂತರರಾಷ್ಟ್ರೀಯ ಬಂಡವಾಳ ಮಾರುಕಟ್ಟೆಗಳು ಶಿಕ್ಷೆಗೆ ಗುರಿಪಡಿಸಿವೆ. ಕಥೆಯು ಇಲ್ಲಿಗೇ ಕೊನೆಗೊಂಡಿಲ್ಲ. ಮುಂದಿನ ದಿನಗಳಲ್ಲಿ ಇನ್ನಷ್ಟು ಇದೆ...

ಲೇಖಕ: ಬ್ರೌನ್ ವಿಶ್ವವಿದ್ಯಾಲಯದ ಅಂತರರಾಷ್ಟ್ರೀಯ ಅಧ್ಯಯನ ಹಾಗೂ ಸಮಾಜ ವಿಜ್ಞಾನದ ಪ್ರೊಫೆಸರ್
(ಲೇಖನವು ದಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಮೊದಲು ಪ್ರಕಟವಾಗಿತ್ತು)

ದಿನದ ಟ್ವೀಟ್

ನೆರವಿಗೆ ಧಾವಿಸಿ




ರೈತರ ಆದಾಯ ದುಪ್ಪಟ್ಟುಗೊಳಿಸಲಾಗುತ್ತದೆಯೇ? ಬಡಾಯಿ ಪ್ರಚಾರದ ಗುಜರಾತ್ ಅಭಿವೃದ್ಧಿ ಮಾದರಿಯಡಿ ನಲುಗುತ್ತಿರುವ ಈರುಳ್ಳಿ ಬೆಳೆಗಾರರು ಪ್ರತೀ ಹೆಕ್ಟೇರ್‌ಗೆ ಒಂದು ಲಕ್ಷ ರೂಪಾಯಿಯಷ್ಟು ನಷ್ಟ ಅನುಭವಿಸಿದ್ದಾರೆ. ಆದರೆ ಮೋದಿ ಅವರು ಎಲ್ಲ ರೈತರಿಗೂ ಅನುಕೂಲವಾಗುವಂತೆ ಎಲ್ಲ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ ಘೋಷಿಸಲು ಹಿಂದೇಟು ಹಾಕುತ್ತಿದ್ದಾರೆ.

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

ಕಿಡಿನುಡಿ

ನರೇಂದ್ರ ಮೋದಿ ಅವರು ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ ಅವರನ್ನು ನೆನಪಿಸಿಕೊಂಡು, ಅನುಕಂಪ ಗಿಟ್ಟಿಸಲು ಮುಂದಾಗಿದ್ದಾರೆ. ಖರ್ಗೆ ಅವರ ಬಗ್ಗೆಯೂ ಅನುಕಂಪ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕ ಸಭೆಯಲ್ಲಿ ಮೋದಿ ಇಂಥ ವಿಷಯಗಳನ್ನು ಚರ್ಚೆ ಮಾಡುತ್ತಾರೆ, ಆದರೆ ಕರ್ನಾಟಕಕ್ಕೆ ಏನು ಕೊಟ್ಟಿದ್ದೇನೆ ಎಂದು ಹೇಳಲ್ಲ.



ಎಚ್.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ
ಭಾನುವಾರ, 1-3-1998

• 3ನೇ ಹಂತದ ಚುನಾವಣೆ ಶೇ 53 ಮತದಾನ

ನವದೆಹಲಿ, ಫೆ. 28 (ಪಿಟಿಐ, ಯುಎನ್‌ಐ)– ಹತ್ತು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ದಮನ್ ಮತ್ತು ದಿಯುಗಳ ಒಟ್ಟು 131 ಲೋಕಸಭಾ ಕ್ಷೇತ್ರಗಳಿಗೆ ಇಂದು ನಡೆದ ಮೂರನೆಯ ಹಂತದ ಮತದಾನದ ಸಮಯದಲ್ಲಿ ಅಲ್ಲಲ್ಲಿ ಸಂಭವಿಸಿದ ಹಿಂಸಾತ್ಮಕ ಘಟನೆಗಳಲ್ಲಿ 13 ಜನ ಸತ್ತಿದ್ದು ಒಟ್ಟಾರೆ ಶೇ 53ರಷ್ಟು ಮತದಾನವಾಗಿದೆ.

ಕೇರಳದಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಸೇರಿದಂತೆ ಐವರು ಸತ್ತಿದ್ದು, ಬಿಹಾರದಲ್ಲಿ ನಡೆದ ಮರು ಮತದಾನದ ಅವಧಿಯಲ್ಲಿ ಸಂಭವಿಸಿದ ಹಿಂಸೆಗೆ ಮೂವರು ಬಲಿಯಾಗಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಮತದಾನದ ಅವಧಿ ಮುಗಿಯುತ್ತಿದ್ದಂತೆ ಸಂಭವಿಸಿದ ಪ್ರತ್ಯೇಕ ಹಿಂಸಾತ್ಮಕ ಘಟನೆಗಳಲ್ಲಿ ಐವರು ಸತ್ತಿದ್ದು 20 ಮಂದಿ ಗಾಯಗೊಂಡಿದ್ದಾರೆ. ಸತ್ತವರಲ್ಲಿ ಆಡಳಿತಾರೂಢ ನ್ಯಾಷನಲ್ ಕಾನ್ಫರೆನ್ಸ್‌ನ ಮೂವರು ಕಾರ್ಯಕರ್ತರು ಸೇರಿದ್ದಾರೆ.

• ಜೈನ್ ಆಯೋಗದ ಅವಧಿ ವಿಸ್ತರಣೆಗೆ ನಕಾರ

ನವದೆಹಲಿ, ಫೆ. 28 (ಪಿಟಿಐ): ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಜೈನ್ ಆಯೋಗದ ಅವಧಿ ವಿಸ್ತರಿಸಲು ಸಂಯುಕ್ತರಂಗ ಸರ್ಕಾರ ಸಮ್ಮತಿಸಿಲ್ಲ.

ಜೈನ್ ಆಯೋಗ ತನ್ನ ಮಧ್ಯಂತರ ವರದಿಯಲ್ಲಿ ಸಂಯುಕ್ತ ರಂಗ ಸರ್ಕಾರದ ಅಂಗಪಕ್ಷವಾದ ಡಿಎಂಕೆ ವಿರುದ್ಧ ದೋಷಾರೋಪ ಹೊರಿಸಿದ್ದರಿಂದ ಕಾಂಗ್ರೆಸ್ ಪಕ್ಷ ಬೆಂಬಲ ಹಿಂತೆಗೆದುಕೊಂಡು ಸರ್ಕಾರದ ಪತನಕ್ಕೆ ಕಾರಣವಾದುದನ್ನು ಸ್ಮರಿಸಬಹುದಾಗಿದೆ.

50 ವರ್ಷಗಳ ಹಿಂದೆ
ಗುರುವಾರ, 1-3-1973

• ಪೆಟ್ರೋಲು, ಸಿಗರೇಟು, ಉಕ್ಕು, ಭೋಗವಸ್ತುಗಳು ಮತ್ತಷ್ಟು ತುಟ್ಟಿ

ನವದೆಹಲಿ, ಫೆ. 28– ಜನಸಾಮಾನ್ಯರ ದಿನಬಳಕೆ ವಸ್ತುಗಳತ್ತ ಕೈಹಾಕದೆ, ಕೇಂದ್ರ ಹಣಕಾಸು ಸಚಿವ ವೈ.ಬಿ.ಚವಾಣ್ ಅವರು 292 ಕೋಟಿ 60 ಲಕ್ಷ ರೂ.ಗಳಷ್ಟು ಭಾರಿಯಾದ ತೆರಿಗೆ ಏರಿಕೆಗಳನ್ನು ಸೂಚಿಸಿ, ಮಧ್ಯಮ ವರ್ಗ ಬಳಸುವ ಭೋಗವಸ್ತುಗಳ ಮೇಲೆ ದೊಡ್ಡ ಹೊರೆ ಹೇರಿದರು.

1973–74ರ ಕೇಂದ್ರ ಆಯವ್ಯಯ ಮುಂಗಡ ಪತ್ರವನ್ನು ಇಂದು ಸಂಸತ್ತಿನಲ್ಲಿ ಮಂಡಿಸಿದ ಚವಾಣ್ ಅವರು, ಸಿಗರೇಟು, ಪೆಟ್ರೋಲ್, ಏರ್‌ಕಂಡೀಷನರ್‌ಗಳು ಹಾಗೂ ವಿದ್ಯುಚ್ಛಕ್ತಿ ಕುಲುಮೆಯ ಉಕ್ಕು ಇವುಗಳ ಮೇಲೆ ಅಬಕಾರಿ ಸುಂಕ ಹೆಚ್ಚಿಸಿ, ಆಮದಾಗುವ ಎಲ್ಲ ವಿಧದ ಯಂತ್ರೋಪಕರಣಗಳ ಮೇಲೆ ಆಮದು ಸುಂಕವನ್ನು ಮೇಲಕ್ಕೇರಿಸಿದರು.

• ಟ್ರಾಲಿ ಮೇಲೆ ಬಾಹುಬಲಿ

ಮಂಗಳೂರು, ಫೆ. 28– ಕಾರ್ಕಳದಿಂದ ಧರ್ಮಸ್ಥಳಕ್ಕೆ ಸಾಗಿಸಲಿರುವ 170 ಟನ್ ತೂಕದ ಬಾಹುಬಲಿ ವಿಗ್ರಹವನ್ನು ಸಾವಿರಾರು ಜನ ಮತ್ತು ಯಂತ್ರಗಳ ನೆರವಿನಿಂದ 9 ಗಂಟೆಗಳ ಕಾಲ ಶ್ರಮಿಸಿ, ಟ್ರಾಲಿಯ ಮೇಲೆ ಏರಿಸಲಾಯಿತು.

ಈ ಶುಭ ಸಂದರ್ಭದಲ್ಲಿ ನಿನ್ನೆ ರಾತ್ರಿ ಕಾರ್ಕಳದಲ್ಲಿ ಬಾಹುಬಲಿ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ವಿಗ್ರಹದ ಶಿಲ್ಪಿ ಶ್ರೀ ಆರ್.ಗೋಪಾಲಶೆಣೈ ಮತ್ತು ವಿಗ್ರಹವನ್ನು ಕೆತ್ತಿಸಿದ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆ ಅವರನ್ನು ಸನ್ಮಾನಿಸಲಾಯಿತು.

ಸಂಗತ

ಮುಕ್ತಗೊಳ್ಳಲಿ ಮೂಢನಂಬಿಕೆಯ ಶೃಂಖಲೆ

ವಿಜ್ಞಾನದ ಫಲ ಬೇಕು, ವಿಜ್ಞಾನ ಬೇಡ ಎನ್ನುವ ಧೋರಣೆಯೇ ಬಹುತೇಕ ಮುಂದುವರಿದಿದೆ

• ಬಿ.ಎಸ್.ಭಗವಾನ್


ಜಗತ್ತು ಕೈಬೆರಳುಗಳಿಗೆ ದಕ್ಕುತ್ತಿರುವಂತೆಯೇ ಜನರಲ್ಲಿ ವೈಜ್ಞಾನಿಕ ಪ್ರಜ್ಞೆ ಮೈದಳೆದು ಪಾರಂಪರಿಕ ಅಂಧಶ್ರದ್ಧೆ, ಅಪಾಯಕಾರಿ ಆಚರಣೆಗಳು ಕ್ರಮೇಣ ಮರೆಯಾಗುತ್ತವೆಂಬ ವಿಶ್ವಾಸವಿತ್ತು. ಆದರೇನು? ಈ ವಿದ್ಯುನ್ಮಾನ ದಿನಮಾನಗಳಲ್ಲೂ ಮಳೆ ಬರಲೆಂದು ಕಪ್ಪೆಗಳ ಮದುವೆ, ಕತ್ತೆಗಳ ಮೆರವಣಿಗೆ, ನೀರಿನಲ್ಲಿ ಒಂಟಿಕಾಲಿನ ಮೇಲೆ ನಿಲ್ಲುವಂತಹ ಅರ್ಥವಿಲ್ಲದ ಆಚರಣೆಗಳಿವೆ. ಸಂಖ್ಯೆ, ವಾರ, ಮಾಸ, ವರ್ಷ ನಮ್ಮ ಸರಾಗಕ್ಕೆ ನಮ್ಮದೇ ನಿರ್ಮಿತಿ. ಆದರೂ ಸಂಖ್ಯೆ 13 ಅನಿಷ್ಟವೆಂಬ ಭ್ರಮೆ ಕಾಡುತ್ತದೆ. ಇಂಥ ತಿಥಿ, ವಾರ ಅಥವಾ ಮಾಸ ಅಶುಭವಾಗುವುದಾದರೂ ಹೇಗೆ? 'ಇಂದಿನ ದಿನವೇ ಶುಭ ದಿನ' ಎಂದ ಪುರಂದರದಾಸರ ಹಿತನುಡಿ ಸಾರ್ವಕಾಲಿಕ.

ವಿಜ್ಞಾನದ ಫಲ ಬೇಕು, ವಿಜ್ಞಾನ ಬೇಡ ಎನ್ನುವ ಧೋರಣೆಯೇ ಬಹುತೇಕ ಮುಂದುವರಿದಿದೆ. ಮಕ್ಕಳಿಗೆ ಪಾಠ ಹೇಳಿದ ಹಿರಿಯ ಶಿಕ್ಷಕರೊಬ್ಬರು ಪಿಂಚಣಿ ವಿಳಂಬವಾದ ಕಾರಣಕ್ಕೆ ವಿಷ ಸೇವಿಸಿ ಇತ್ತೀಚೆಗೆ ಸಾವಿಗೆ ಶರಣಾದರು. ಈ ಸಂಗತಿ ವಿಷಾದದೊಂದಿಗೆ ಬೇಸರ ಹುಟ್ಟಿಸುತ್ತದೆ. ಕಿಂಚಿತ್ ತರ್ಕ ಬಳಸಿದ್ದರೂ ಆತ ಹತಾಶೆಯನ್ನು ಗೆಲ್ಲಬಹುದಿತ್ತು. ನಿಸರ್ಗದ ಕೂಸಾದ ಮನುಷ್ಯ ನಿಸರ್ಗವನ್ನು ನಿರ್ಲಕ್ಷಿಸುವುದೇ ಒಂದು ಮೌಢ್ಯವೆನ್ನೋಣ.

ನಮ್ಮ ಮಕ್ಕಳಿಗೆ ಉತ್ತಮ ವಿಜ್ಞಾನ ಶಿಕ್ಷಣವೇನೊ ದೊರೆಯುತ್ತಿದೆ. ನ್ಯೂನತೆಯೆಂದರೆ, ಅದು ತರಗತಿಗಷ್ಟೇ ಸೀಮಿತವಾಗಿಬಿಟ್ಟಿದೆ. ವೈಜ್ಞಾನಿಕ ಮನೋಧರ್ಮವು ಬೋಧನೆ ಮತ್ತು ಕಲಿಕೆಯ ಮುಖ್ಯ ಉತ್ಪನ್ನವಾದಾಗಲೇ ವಿಜ್ಞಾನ ಕಲಿಕೆಯ ಸಾರ್ಥಕ್ಯ. ಹಕ್ಕಿ ಹೇಗೆ ಹಾರುತ್ತದೆ? ಸಮುದ್ರದ ನೀರೇಕೆ ಉಪ್ಪು? ಆಕಾಶವೇಕೆ ನೀಲಿ? ಎಣ್ಣೆಯಲ್ಲಿ ಸಕ್ಕರೆ ಏಕೆ ಕರಗದು ಎಂಬಂಥ ಪ್ರಶ್ನೆಗಳು ಸ್ವಾಭಾವಿಕವಾದವು.

ಇತಿಹಾಸದಾದ್ಯಂತ ಮಹತ್ತರ ಆವಿಷ್ಕಾರಗಳು ಕೈಗೂಡಿರುವುದು ಬೌದ್ಧಿಕ ಕುತೂಹಲಗಳಿಂದಲೇ. ಕುತೂಹಲದ ಶಮನದಿಂದ ಸಮಾಧಾನ, ಹೊಸದೊಂದು ತಿಳಿವಿನ ಮಜಲಿಗೆ ಹೆಜ್ಜೆಯಿಡುವ ಲವಲವಿಕೆ. ಎಂದಮೇಲೆ ವ್ಯಕ್ತಿಯ ಬುಧ್ಯಂಕಕ್ಕಿಂತಲೂ (ಇಂಟಲಿಜೆನ್ಸ್ ಕೋಷಂಟ್) ಆತನ ಕೌತುಕಾಂಕ (ಕ್ಯೂರಿಯಾಸಿಟಿ ಕೋಷಂಟ್) ಹೆಚ್ಚು ಮಹತ್ವದ್ದು. ವಿದ್ಯಾರ್ಥಿಗಳು ಪಠ್ಯದಲ್ಲಿ ಇರುವುದನ್ನು ಪ್ರಶ್ನಿಸಿದರೆ, 'ಪಠ್ಯದಲ್ಲಿ ಇರುವುದಕ್ಕಿಂತಲೂ ನಿನಗೆ ಹೆಚ್ಚು ಗೊತ್ತಿದೆಯೇ?' ಎಂದು ಬೋಧಕರು ತರಾಟೆಗೆ ತೆಗೆದುಕೊಳ್ಳುವುದು ಸಸಿಯನ್ನು ಬೇರುಸಹಿತ ಕಿತ್ತಷ್ಟೇ ಪ್ರಮಾದ. ನಮ್ಮ ಯುವಜನ ಪ್ರಾಚೀನ ಗ್ರಂಥಗಳನ್ನು ಅಧ್ಯಯನ ಮಾಡಿದರಷ್ಟೇ ಅವುಗಳಲ್ಲಿನ ಸರಿ, ತಪ್ಪು ತೀರ್ಮಾನಿಸಲು ಸಾಧ್ಯ. ಇಲ್ಲದಿದ್ದರೆ ಅತಿಶಯೋಕ್ತಿ, ರೋಚಕತೆ ರಾರಾಜಿಸಿ ಮೌಢ್ಯವು ಸಮಾಜವನ್ನು ಆಳತೊಡಗುತ್ತದೆ. ತಾರಸಿಯ ಮೇಲೆ ಕೂತ ಕಾಗೆಯಲ್ಲಿ, ಒಡೆದ ಗಾಜಿನಲ್ಲಿ ಅಥವಾ ಆಲಿಕಲ್ಲು ಮಳೆಯಲ್ಲಿ ವಿಪತ್ತಿನ ಮುನ್ಸೂಚನೆಗಳನ್ನು ಕಾಣುವುದಿದೆ. ಇವಕ್ಕೆ 'ಪರಿಹಾರೋಪಾಯ'ಗಳಾಗಿ ಕುಂಡದಲ್ಲಿ ಅಮೂಲ್ಯ ಆಹಾರ ದ್ರವ್ಯಗಳು ಸುಟ್ಟು ಹೊಗೆಯಾಡುತ್ತವೆ, ಶಿಲೆಯ ಮೇಲಿನಿಂದ ಹಾಲು, ಜೇನು ಧುಮ್ಮಿಕ್ಕಿ ಪೋಲಾಗುತ್ತವೆ, ಮೂಕಪ್ರಾಣಿಗಳು ಬಲಿಯಾಗುತ್ತವೆ. ಕಾರಣ ಅರಿಯುವ, ತರ್ಕಬದ್ಧವಾಗಿ ಆಲೋಚಿಸುವ, ಪ್ರಶ್ನಿಸುವ ಜಾಯಮಾನ ರೂಢಿಸಿಕೊಂಡರೆ ಇಂತಹ ಮೂಢಾಚರಣೆಗಳಿಗೆ ಆಸ್ಪದವಾಗದು.

ಸರ್ವರಲ್ಲೂ ಒಬ್ಬ ವಿಜ್ಞಾನೋಪಾಸಕ ಇರಬೇಕೆಂಬ ನಮ್ಮ ಸಾಂವಿಧಾನಿಕ ಆಶಯ ಸ್ತುತ್ಯರ್ಹ. ಧರ್ಮ ಮತ್ತು ವಿಜ್ಞಾನ ಎರಡರ ಉದ್ದೇಶವೂ ಒಂದೇ- ಸತ್ಯಾನ್ವೇಷಣೆ. ಧರ್ಮದ ಮಾರ್ಗ ಭಾವನಾ ಪ್ರಧಾನ, ವಿಜ್ಞಾನದ್ದು ಬುದ್ಧಿ ಪ್ರಧಾನ. ವಿಜ್ಞಾನಿ ಐನ್‌ಸ್ಟೀನ್ 'ಧರ್ಮರಹಿತ ವಿಜ್ಞಾನ ಕುರುಡು, ವಿಜ್ಞಾನರಹಿತ ಧರ್ಮ ಕುಂಟು' ಎಂದು ಧರ್ಮ ಮತ್ತು ವಿಜ್ಞಾನದ ನಡುವೆ ಇರಬೇಕಾದ ಅವಿನಾಭಾವವನ್ನು ಮನಮುಟ್ಟುವಂತೆ ಸ್ಫುಟವಾಗಿಸಿದ್ದಾರೆ.



ಭಾರತೀಯ ಭೌತಶಾಸ್ತ್ರಜ್ಞ ಸರ್ ಸಿ.ವಿ.ರಾಮನ್, ಒಂದು ಪಾರದರ್ಶಕ ಮಾಧ್ಯಮದ ಮೂಲಕ ಬೆಳಕು ಸಾಗಿದಾಗ ಅದರ ಮತ್ತು ಚದುರಿದ ಬೆಳಕಿನ ತರಂಗ ದೂರದಲ್ಲಾಗುವ ವ್ಯತ್ಯಯವನ್ನು ಪತ್ತೆಹಚ್ಚಿದರು. ಈ ಆವಿಷ್ಕಾರಕ್ಕೆ ಅವರಿಗೆ ನೊಬೆಲ್ ಪ್ರಶಸ್ತಿ ಸಂದಿತು. ಸಂಶೋಧನೆಯ ಯಶಸ್ಸು ಇರುವುದು ಸ್ವತಂತ್ರ ಚಿಂತನೆ, ಪರಿಶ್ರಮದಲ್ಲಿಯೇ ವಿನಾ ಪರಿಕರದಲ್ಲಲ್ಲ ಎನ್ನುವುದನ್ನು ಸ್ವತಃ ರಾಮನ್ ಸಾಬೀತುಪಡಿಸಿದರು. ಈ 'ರಾಮನ್ ಪರಿಣಾಮ' ಕಂಡುಹಿಡಿಯುವುದಕ್ಕೆ ಅವರು ವ್ಯಯಿಸಿದ್ದು ಕೇವಲ ₹ 200.

ಧ್ವನಿ ವಿಜ್ಞಾನದಲ್ಲೂ ರಾಮನ್ ಅಪ್ರತಿಮ ಸಂಶೋಧನೆ ನಡೆಸಿದರು. ಪ್ರತಿವರ್ಷ ಫೆಬ್ರುವರಿ 28ನೇ ತೇದಿಯನ್ನು 'ರಾಷ್ಟ್ರೀಯ ವಿಜ್ಞಾನ ದಿನ' ಎಂದು ಸಂಭ್ರಮಿಸಲಾಗುತ್ತಿದೆ. ಅಂದು ದೇಶದೆಲ್ಲೆಡೆ ವಿಜ್ಞಾನ ಚಿಂತನ, ಮಂಥನ, ಪ್ರಾತ್ಯಕ್ಷಿಕೆ, ಪರಿಕಲ್ಪನೆ, ಇತ್ತೀಚಿನ ಪ್ರಗತಿ ಕುರಿತು ಚರ್ಚೆ ಏರ್ಪಾಡಾಗುತ್ತವೆ. ಈ ಬಾರಿ ಕಳೆಗಟ್ಟಿಸುವ ಕಾರ್ಯಸೂಚಿ 'ಜಾಗತಿಕ ಯೋಗಕ್ಷೇಮಕ್ಕೆ ಜಾಗತಿಕ ವಿಜ್ಞಾನ'.

ಜಗತ್ತಿನ ಎಲ್ಲ ಸಂಸ್ಕೃತಿಗಳೂ ಮೂಢನಂಬಿಕೆಗಳ ಶೃಂಖಲೆಯಿಂದ ಮುಕ್ತಗೊಳ್ಳಬೇಕು. ಇದೊಂದು ನಿದರ್ಶನ. ಸ್ಮಾರ್ಟ್‌ಫೋನ್ ವಿಜ್ಞಾನದ ಕೊಡುಗೆ, ನಮಗೆ ಹಾಗೂ ಇತರರಿಗೆ ತೊಂದರೆಯಾಗದಂತೆ ಅದರ ಬಳಕೆ ವೈಜ್ಞಾನಿಕ ಧರ್ಮ. ರಾಮನ್ ಅವರಿಗೆ ನಾವು ಸಲ್ಲಿಸಬಹುದಾದ ಗೌರವವೆಂದರೆ, ವಿಜ್ಞಾನದ ಫಲಗಳ ಅನುಭೋಗದೊಡನೆ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವುದು.

ವಾಚಕರ ವಾಣಿ

ಸೈನಿಕರ ಸೇವೆ: ಅರಿವು ಮೂಡಲಿ

ಬೆಂಗಳೂರಿನಲ್ಲಿ ವಾಹನದಲ್ಲಿ ಫಾಸ್ಟ್‌ಫುಡ್ ಮಾರುವ ರವಿಕುಮಾರ್ ಎಂಬುವರು, ಸಾಮಾಜಿಕ ಕಳಕಳಿಯಿಂದ ಯೋಧರಿಗೆ ದಿನದಲ್ಲಿ ಎರಡು ಹೊತ್ತು ಉಚಿತವಾಗಿ ತಿಂಡಿ, ಊಟ ನೀಡುತ್ತಿರುವುದು (ಪ್ರ.ವಾ., ಫೆ. 25) ಮಾದರಿ ನಡೆಯಾಗಿದೆ. ಇದು, ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತದೆ.

ದೇಶ ಕಾಯುವ ಸೈನಿಕರಿಂದ ನಮಗೆ ನೆಮ್ಮದಿಯ ಬದುಕು ಸಾಧ್ಯವಾಗಿದೆ ಎಂಬ ಅರಿವು ಬಹಳ ಜನರಿಗೆ ಇಲ್ಲ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಸೈನಿಕರು ದೇಶಕ್ಕೆ ಸಲ್ಲಿಸುವ ಸೇವೆ, ಅವರ ಒಂಟಿತನ, ಅವರ ಕಷ್ಟ-ಕಾರ್ಪಣ್ಯ, ಧೈರ್ಯ-ಸಾಹಸವನ್ನು ಬಿಂಬಿಸುವ ಸಂಗತಿಗಳು ಶಾಲಾ ಕಾಲೇಜು ಪಠ್ಯಗಳಲ್ಲಿ ಅಳವಡಿಕೆಯಾಗಿಲ್ಲ. ಅಲ್ಲದೆ ಮಾಧ್ಯಮಗಳಲ್ಲಿ ಸೈನಿಕರ ಸೇವೆಗೆ ಸಿಗಬೇಕಾದ ಪ್ರಮಾಣದಲ್ಲಿ ಮನ್ನಣೆ ಸಿಗುತ್ತಿಲ್ಲ. ಈ ದಿಸೆಯಲ್ಲಿ ಸೈನಿಕರ ಸೇವೆಯ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಪ್ರಯತ್ನಗಳು ನಡೆಯುವಂತಾಗಲಿ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಇಂಥ ಹೇಳಿಕೆ ತರವೇ?

'ಅಪ್ಪಿತಪ್ಪಿಯೂ ಸಾಬ್ರಿಗೆ ವೋಟ್ ಹಾಕಬೇಡಿ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ವಿಜಯಪುರದಲ್ಲಿ ನಡೆದ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಹೇಳಿರುವುದು (ಪ್ರ.ವಾ., ಫೆ. 28) ಒಂದು ದೊಡ್ಡ ಸಮುದಾಯವನ್ನೇ ಹೀಗಳೆದಂತಲ್ಲವೇ? ಅಲ್ಲದೆ ಈ ರೀತಿ ಹೇಳುವುದು ನ್ಯಾಯಬಾಹಿರವಲ್ಲವೇ? ಆ ಸಮುದಾಯವು ವ್ಯವಸ್ಥೆಯ ಬಗ್ಗೆ ನಂಬಿಕೆ ಕಳೆದುಕೊಳ್ಳುವುದಿಲ್ಲವೇ? ಕೋಮು ಸಾಮರಸ್ಯಕ್ಕೆ ಇದರಿಂದ ಧಕ್ಕೆಯಾಗುವುದಿಲ್ಲವೇ? ಜನನಾಯಕರು ಸಾಧಕ, ಬಾಧಕಗಳನ್ನು ಗಣನೆಗೆ ತೆಗೆದುಕೊಂಡು ಹೇಳಿಕೆಗಳನ್ನು ನೀಡುವುದು ಒಳಿತು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಪೌಷ್ಟಿಕ ಆಹಾರ: ರೈತರಲ್ಲಿ ಮೂಡಲಿ ಜಾಗೃತಿ

ರೈತರು ತಾವು ಬೆಳೆಯುವ ತರಕಾರಿ, ಹಣ್ಣುಗಳನ್ನು ತಾವು ತಿನ್ನದೆ ದುಡ್ಡಿನಾಸೆಗೆ ಎಲ್ಲವನ್ನೂ ಮಾರಿಕೊಂಡು ಅನಾರೋಗ್ಯಕ್ಕೆ ಈಡಾಗುತ್ತಿದ್ದಾರೆ. ಅವರು ಉತ್ಪಾದಿಸುವ ಪೌಷ್ಟಿಕವಾದ ಹಾಲು, ಮೊಸರು, ಬೆಣ್ಣೆ, ತುಪ್ಪವನ್ನು ಸ್ವಯಂ ಬಳಸುತ್ತಿಲ್ಲದಿರುವುದು ವಿಪರ್ಯಾಸವಾದರೂ ಕಟು ಸತ್ಯ. ಬೆಂಗಳೂರಿನ ಸೆರಗಿನಲ್ಲಿರುವ ಕಡಬಗೆರೆಯಲ್ಲಿ ಇತ್ತೀಚೆಗೆ ಸಂಬಂಧಿಕರ ಮನೆಗೆ ಹೋಗಿದ್ದಾಗ, ಅತಿಥಿಗಳು ಬಂದರೆಂದು ಹಾಲನ್ನು ಬೇಕರಿಯಿಂದ ಕೊಂಡು ತಂದರು. ಅವರ ಮನೆಯಲ್ಲಿ ಹಸುಗಳಿವೆ. ಅವುಗಳು ನೀಡುವ ಅಷ್ಟೂ ಹಾಲನ್ನು ಮಾರಾಟ ಮಾಡುತ್ತಿರುವುದನ್ನು ತಿಳಿದು ಆಶ್ಚರ್ಯವಾಯಿತು. ನಾನು ಓದುತ್ತಿದ್ದಾಗ ಮನೆಯ ಮುಂದೆ ಚಕ್ಕಡಿ ನಿಲ್ಲುತ್ತಿದ್ದ ಸ್ಥಳದಲ್ಲಿ ಬೆಲೆಬಾಳುವ ಕಾರುಗಳು ವಿರಾಜಮಾನವಾಗಿವೆ. ರೈತರಾಗಿದ್ದವರು ಇಂದು ರಿಯಲ್ ಎಸ್ಟೇಟ್ ವ್ಯವಹಾರಕ್ಕಿಳಿದಿದ್ದಾರೆ. ಯಾವುದೇ ಹಳ್ಳಿ ಪಟ್ಟಣಗಳಿಗೆ ಹೋದರೂ ಪಾನಿಪುರಿ, ಮಂಚೂರಿಯ ವ್ಯಾಪಾರ ಭರಾಟೆಯಿಂದ ಸಾಗುತ್ತಿರುತ್ತದೆ. ಆಹಾರದ ಬಗೆಗೆ ಹಳ್ಳಿಗರಿಗೆ ಇಂದು ಜಾಗೃತಿಯನ್ನು ಮೂಡಿಸಬೇಕಿದೆ. ರೈತರು ಗುಣಮಟ್ಟದ ಪೌಷ್ಟಿಕಾಂಶಯುಕ್ತ ಆಹಾರವನ್ನು ಸೇವಿಸಲಿ.

ಡಾ. ರುದ್ರೇಶ್ ಅದರಂಗಿ, ಬೆಂಗಳೂರು

ಯಾಕೆ ಈ ದುಂದುವೆಚ್ಚ?

ಧಾರವಾಡದಲ್ಲಿ ನಡೆದ 84ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೋಗಿದ್ದೆ. ಅಲ್ಲಿಯ ವ್ಯವಸ್ಥೆ ಶುಚಿಯಾಗಿತ್ತು ಹಾಗೂ ಅಡುಗೆಯು ರುಚಿಕಟ್ಟಾಗಿತ್ತು. ಆ ಸಮ್ಮೇಳನಕ್ಕೆ ಮಾಡಲಾದ ಖರ್ಚು ₹ 10 ಕೋಟಿ. ಈ ಬಾರಿ ಹಾವೇರಿಯಲ್ಲಿ ನಡೆದ 86ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೂ ಭೇಟಿ ನೀಡಿದ್ದೆ. ಅಲ್ಲಿಯ ಆಹಾರ ಪದಾರ್ಥ ಹಾಗೂ ಆಹಾರ ಸೇವಿಸುವ ಸ್ಥಳ ಅವ್ಯವಸ್ಥೆಯಿಂದ ಕೂಡಿತ್ತು. ಖಾಲಿ ಜಾಗದ ಸುತ್ತಲೂ ತಗಡು ಜೋಡಿಸಿ ಮೂತ್ರ ವಿಸರ್ಜನೆಗೆ ಅವಕಾಶ ಮಾಡಲಾಗಿತ್ತು. ಮೊಬೈಲ್ ಶೌಚಾಲಯ ಇದ್ದರೂ ಸೌಕರ್ಯಗಳಿರಲಿಲ್ಲ. ಆದರೂ ಈ ಬಾರಿಯ ಸಮ್ಮೇಳನಕ್ಕೆ ಸರ್ಕಾರದಿಂದ ಮಂಜೂರಾಗಿದ್ದ ₹ 20 ಕೋಟಿಗಿಂತ ಇನ್ನೂ ₹ 5 ಕೋಟಿ ಹೆಚ್ಚುವರಿ ಹಣ ಖರ್ಚಾಗಿದೆ ಎನ್ನಲಾಗಿದೆ (ಪ್ರ.ವಾ., ಫೆ. 28). ನಮ್ಮ ಸ್ವಂತ ಮನೆಯ ಸಮಾರಂಭಕ್ಕೆ ಗುತ್ತಿಗೆ ನೀಡುವಾಗ ಹತ್ತಾರು ಕಡೆ ವಿಚಾರಿಸಿ, ಯೋಗ್ಯ ದರದಲ್ಲಿ ಸಿಗುವ ಗುತ್ತಿಗೆದಾರನನ್ನು ಗೊತ್ತುಮಾಡುತ್ತೇವೆ. ಆದರೆ ಇಲ್ಲೇಕೆ ಈ ರೀತಿ ದುಂದುವೆಚ್ಚ? ಸಾರ್ವಜನಿಕರ ದುಡ್ಡು ಎಂದೋ? ಅಥವಾ ಕೇಳಲು ಯಾರೂ ಇಲ್ಲವೆಂದೋ?

ಪ್ರಭು ಬ. ನೀಲಿ, ಗುಲಗಾಲ ಜಂಬಗಿ, ಮುಧೋಳ

ವರದಿಗಳಲ್ಲಿ ಕಾಣೆಯಾಗುತ್ತಿದೆ 'ಹಿಂದುಳಿದ ಜಿಲ್ಲೆ'

ಪ್ರತಿವರ್ಷ ಬಜೆಟ್ ಮಂಡಿಸುವ ಮುನ್ನಾದಿನ 'ಕರ್ನಾಟಕ ಆರ್ಥಿಕ ಸಮೀಕ್ಷೆ' ವರದಿಯನ್ನು ಪ್ರಕಟಿಸುವುದು ರೂಢಿಯಲ್ಲಿದೆ. ಈ ವರದಿಗಳಲ್ಲಿ ಪ್ರಾದೇಶಿಕ ಅಸಮಾನತೆಯ ಬಗ್ಗೆ ಒಂದು ಅಧ್ಯಾಯದಲ್ಲಿ ಚರ್ಚೆ ಮಾಡಲಾಗುತ್ತಿತ್ತು. ಇದನ್ನು ಕೈಬಿಟ್ಟು 2021-22ರ ವರದಿಯಲ್ಲಿ 'ಅಭಿವೃದ್ಧಿ ಅಂತರ ತುಂಬುವುದು' ಎಂಬ ಪರಿಭಾಷೆಯ ಅಧ್ಯಾಯದಲ್ಲಿ ರಾಜ್ಯದ ಹಿಂದುಳಿದ ಜಿಲ್ಲೆ, ತಾಲ್ಲೂಕುಗಳ ಪ್ರಗತಿ- ವಿಗತಿಯ ವಿಶ್ಲೇಷಣೆ ಮಾಡಲಾಗಿದೆ. ಈಗ 2022-23ರ ವರದಿಯಲ್ಲಿ ಅಭಿವೃದ್ಧಿ ಅಂತರದ ಬಗ್ಗೆಯಾಗಲೀ, ಪ್ರಾದೇಶಿಕ ಅಸಮಾನತೆ ಬಗ್ಗೆಯಾಗಲೀ ಅಥವಾ ವಿಶೇಷ ಅಭಿವೃದ್ಧಿ ಯೋಜನೆ ಬಗ್ಗೆಯಾಗಲೀ ಚರ್ಚೆಯೇ ಇಲ್ಲ. ಇದಕ್ಕೆ ಸಂಬಂಧಿಸಿದ ಅಧ್ಯಾಯವನ್ನು ಕೈಬಿಡಲಾಗಿದೆ.

ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಣೆಯಾಗಿದೆ ಎಂದು ನಾವು ಭಾವಿಸಬೇಕೆ? ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2019-21ರ ವರದಿ ಮತ್ತು ನೀತಿ ಆಯೋಗ ಪ್ರಕಟಿಸಿರುವ 'ಬಹುಮುಖಿ ಬಡತನ' ವರದಿಯು ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ತೀವ್ರ ಉಲ್ಬಣಿಸಿರುವ ಅಪೌಷ್ಟಿಕತೆ ಮತ್ತು ಬಹುಮುಖಿ ಬಡತನದ ಬಗ್ಗೆ ಬೆಳಕು ಚೆಲ್ಲುತ್ತವೆ. ಈಗ ಸರ್ಕಾರವು ಹಿಂದುಳಿದ ಜಿಲ್ಲೆ, ತಾಲ್ಲೂಕು ಎಂಬ ನುಡಿಗೆ ಬದಲಾಗಿ 'ಆಕಾಂಕ್ಷಿ ಜಿಲ್ಲೆ- ತಾಲ್ಲೂಕು' (ಆ್ಯಸ್ಪಿರೇಷನಲ್) ಎಂಬ ನುಡಿಯನ್ನು ಬಳಸುತ್ತಿದೆ. ಕರ್ನಾಟಕ ಮಾನವ ಅಭಿವೃದ್ಧಿ ವರದಿಗಳಲ್ಲಿಯೂ ಪ್ರಾದೇಶಿಕ ಅಸಮಾನತೆ ಬಗ್ಗೆ ಒಂದು ಅಧ್ಯಾಯವಿರುತ್ತಿತ್ತು. ಈಗ ಅದೂ ಕಾಣೆಯಾಗುತ್ತಿದೆ. ಅಭಿವೃದ್ಧಿಯಲ್ಲಿ ಹಿಂದುಳಿದ ಜಿಲ್ಲೆಗಳು ಈಗ ಸರ್ಕಾರದ ವರದಿಗಳಲ್ಲಿಯೇ ಕಾಣೆಯಾಗುತ್ತಿವೆ. ಇದು ಅಪೇಕ್ಷಣೀಯ ಬೆಳವಣಿಗೆಯಲ್ಲ. ಇದಕ್ಕೆ ಸರ್ಕಾರ ಉತ್ತರ ನೀಡುವ ಸೌಜನ್ಯವನ್ನು ತೋರುತ್ತದೆ ಎಂದು ನಾವು ಭಾವಿಸುತ್ತೇವೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗರಿಷ್ಠ ಪಿಂಚಣಿ ಸುತ್ತಮುತ್ತ



ಪ್ರಜಾವಾಣಿ ವಾರ್ತೆ

‘ಉದ್ಯೋಗಿಗಳ ಪಿಂಚಣಿ ಯೋಜನೆ’ಯ (ಇಪಿಎಸ್) ಲಾಭ–ನಷ್ಟದ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಯಾರು ಆಯ್ಕೆ ಮಾಡಿಕೊಳ್ಳಬಹುದು, ಆಯ್ಕೆ ಮಾಡಿಕೊಳ್ಳುವ ಬಗೆ ಹೇಗೆ, ನಿವೃತ್ತಿಯ ಬಳಿಕ ಭವಿಷ್ಯನಿಧಿಯ ಇಡುಗಂಟು ಎಷ್ಟು ಸಿಗುತ್ತದೆ ಹಾಗೂ ಪಿಂಚಣಿ ಎಷ್ಟು ಬರಬಹುದು ಎಂಬ ಲೆಕ್ಕಾಚಾರಗಳು ನಡೆಯುತ್ತಿವೆ.

ಎಲ್ಲರಿಗೂ ತಿಳಿದಿರುವ ಹಾಗೆ, ನೌಕರರ ಭವಿಷ್ಯ ನಿಧಿಗೆ (ಇಪಿಎಫ್) ಉದ್ಯೋಗಿಯ ಪ್ರತಿ ತಿಂಗಳ ಮೂಲವೇತನ ಮತ್ತು ತುಟ್ಟಿಭತ್ಯೆಯ (ಡಿ.ಎ) ಶೇ 12ರಷ್ಟನ್ನು ವಂತಿಗೆಯಾಗಿ ಪಾವತಿಸಲಾಗುತ್ತದೆ. ಇಷ್ಟೇ ಪ್ರಮಾಣದ ವಂತಿಗೆಯನ್ನು ಉದ್ಯೋಗಿ ಕೆಲಸ ಮಾಡುವ ಸಂಸ್ಥೆಯು ನೌಕರರ ಭವಿಷ್ಯ ನಿಧಿಗೆ (ಇಪಿಎಫ್) ನೀಡುತ್ತದೆ.

ಉದ್ಯೋಗದಾತ ಸಂಸ್ಥೆ ಪಾವತಿಸುವ ವಂತಿಗೆಯಿಂದ ಶೇ 8.33ರಷ್ಟು ಪ್ರಮಾಣವು ಇಪಿಎಫ್‌ನಿಂದ ಇಪಿಎಸ್‌ಗೆ ವರ್ಗಾವಣೆಯಾಗುತ್ತದೆ. ಆದರೆ, ಭವಿಷ್ಯ ನಿಧಿಗೆ ಪಾವತಿಯಾಗುವ ಉದ್ಯೋಗಿಯ ಪಾಲಿನ ಶೇ 12ರಷ್ಟು ಪ್ರಮಾಣವು ಇಪಿಎಫ್‌ನಲ್ಲಿಯೇ ಉಳಿಯುತ್ತದೆ. ಪಿಂಚಣಿ ನಿಧಿಗೆ ವರ್ಗಾವಣೆಯಾಗುವ ಮೊತ್ತವು, ಉದ್ಯೋಗಿ ನಿವೃತ್ತಿಯಾದ ಬಳಿಕ ಈ ಪಿಂಚಣಿ ರೂಪದಲ್ಲಿ ಪ್ರತಿ ತಿಂಗಳು ಪಾವತಿಯಾಗುತ್ತದೆ.

ಈ ಮೊದಲು, ಉದ್ಯೋಗಿ ಪಡೆಯುತ್ತಿದ್ದ ಪಿಂಚಣಿ ಮೊತ್ತ ತೀರಾ ಕಡಿಮೆಯಿತ್ತು. ಮೂಲವೇತನದ ಮೇಲೆ ಇದ್ದ ಗರಿಷ್ಠ ಮಿತಿಯಿಂದಾಗಿ, ಹೆಚ್ಚಿನ ಪಿಂಚಣಿ ಪಡೆಯಲು ಉದ್ಯೋಗಿಗೆ ಸಾಧ್ಯವಾಗುತ್ತಿರಲಿಲ್ಲ. ಇದನ್ನು ಸಾಧ್ಯವಾಗಿಸಲು 2014ರ ಸೆಪ್ಟೆಂಬರ್ 1ರಂದು ನಿಯಮದಲ್ಲಿ ಮಾರ್ಪಾಡು ಮಾಡಲಾಯಿತು.

ಈಗ ಸೇವೆಯಲ್ಲಿರುವ ನೌಕರರು 2014ರ ಸೆ.1ರಿಂದ ಪೂರ್ವಾನ್ವಯವಾಗುವಂತೆ ಪಿಂಚಣಿ ಯೋಜನೆಗೆ ವಂತಿಗೆ ನೀಡಬೇಕಿದೆ. ಹಾಗೆಂದ ಮಾತ್ರಕ್ಕೆ ಕೈಯಿಂದ ಹಣ ಪಾವತಿಸಬೇಕು ಎಂದೇನಿಲ್ಲ. ಎಲ್ಲ ಉದ್ಯೋಗದಾತ ಸಂಸ್ಥೆಗಳು ಭವಿಷ್ಯ ನಿಧಿ ಖಾತೆಗೆ ಉದ್ಯೋಗಿಯ ವೇತನದ ಶೇ 12ರಷ್ಟು ವಂತಿಗೆಯನ್ನು ಪಾವತಿಸುತ್ತಾ ಬಂದಿವೆ. ಉದ್ಯೋಗಿಯೊಬ್ಬರು ಅಧಿಕ ಪಿಂಚಣಿ ಯೋಜನೆಯನ್ನು ಆಯ್ಕೆ ಮಾಡಿಕೊಂಡ ಬಳಿಕ, ಈ ಮೊತ್ತವು (ಶೇ 8.33ರಷ್ಟು ವಂತಿಗೆ ಲೆಕ್ಕಾಚಾರದಲ್ಲಿ) ಉದ್ಯೋಗಿಗಳ ಪಿಂಚಣಿ ಯೋಜನೆಗೆ ವರ್ಗಾವಣೆಯಾಗುತ್ತದೆ. ಈ ಪ್ರಕ್ರಿಯೆಯಲ್ಲಿ, ಉದ್ಯೋಗಿಯ ಭವಿಷ್ಯ ನಿಧಿಯಲ್ಲಿ ಮೊತ್ತ ಕಡಿಮೆಯಾಗುತ್ತದೆ. ಹೀಗಾಗಿ, ನಿವೃತ್ತಿಯಾದ ಬಳಿಕ ಸಿಗುವ ಪಿ.ಎಫ್. ಇಡುಗಂಟಿನ ಪ್ರಮಾಣ ಸಹಜವಾಗಿ ಕಡಿಮೆ ಇರಲಿದೆ.

ಮೇ 3ರ ಒಳಗೆ ಉದ್ಯೋಗಿ ಹಾಗೂ ಉದ್ಯೋಗದಾತ ಸಂಸ್ಥೆಯು ಜಂಟಿಯಾಗಿ ನಿಗದಿತ ನಮೂನೆಯ ಅರ್ಜಿಯನ್ನು ನೌಕರರ ಭವಿಷ್ಯನಿಧಿ ಸಂಘಟನೆಗೆ (ಇಪಿಎಫ್‌ಒ) ಸಲ್ಲಿಸಬೇಕು. ಅರ್ಜಿ ಸ್ವೀಕೃತವಾದಲ್ಲಿ, ಉದ್ಯೋಗಿಗೆ 58 ವರ್ಷ ಪೂರ್ಣಗೊಂಡ ಬಳಿಕ ಪಿಂಚಣಿ ಶುರುವಾಗುತ್ತದೆ. ಒಂದು ವೇಳೆ ಉದ್ಯೋಗಿ ಮೃತಪಟ್ಟಲ್ಲಿ, ಆತನ ಸಂಗಾತಿಗೆ ಶೇ 50ರಷ್ಟು ಪಿಂಚಣಿ ನೀಡಲಾಗುತ್ತದೆ.

2014ರ ಸೆ. 1ರ ನಂತರ ನಿವೃತ್ತಿ ಹೊಂದಿದ ವರಿಗೂ ಹೊಸ ಪಿಂಚಣಿ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ (2014ಕ್ಕಿಂತ ಮೊದಲು ನಿವೃತ್ತರಾದವರು ಗರಿಷ್ಠ ಪಿಂಚಣಿಗಾಗಿ ಇಪಿಎಸ್–95ಗೆ ಅರ್ಜಿ ಸಲ್ಲಿಸಿದ್ದರೆ ಅವರಿಗೂ ಅರ್ಹತೆ ಇದೆ). ಉದ್ಯೋಗಿಯು ನಿವೃತ್ತಿಯಾಗಿದ್ದಲ್ಲಿ, 2014ರ ಸೆ.1ರಿಂದ ಪೂರ್ವಾನ್ವಯವಾಗುವಂತೆ ಪಿಂಚಣಿ ಯೋಜನೆಗೆ ನೀಡಬೇಕಿರುವ ಮೊತ್ತವನ್ನು ಕೈಯಿಂದ ಪಾವತಿಸಿ, ಪಿಂಚಣಿಗೆ ಅರ್ಹತೆ ಪಡೆಯಬಹುದು. ನಿವೃತ್ತಿಯಾದಾಗ ಸಿಕ್ಕ ಇಡುಗಂಟಿನ ಒಂದಿಷ್ಟು ಮೊತ್ತವನ್ನು ಪಿಂಚಣಿ ನಿಧಿಗೆ ಹಾಕಿದರೆ, ಅದು ಪ್ರತೀ ತಿಂಗಳು ಪಿಂಚಣಿ ರೂಪದಲ್ಲಿ ದೊರೆಯುತ್ತದೆ ಎಂದು ಹೇಳಲಾಗಿದೆ.

ನೌಕರರ ಭವಿಷ್ಯ ನಿಧಿಯಲ್ಲಿ ಜಮೆಯಾಗುವ ಮೊತ್ತಕ್ಕೆ ಬಡ್ಡಿ ಸಿಗುತ್ತದೆ. ಆದರೆ. ಪಿಂಚಣಿ ಯೋಜನೆಗೆ ವರ್ಗಾವಣೆಯಾಗುವ ಹಣಕ್ಕೆ ಬಡ್ಡಿ ಸೌಲಭ್ಯ ಸಿಗುವುದಿಲ್ಲ.

ಸುಪ್ರೀಂ ಕೋರ್ಟ್ ಹೇಳಿದ್ದೇನು?

ಕೇಂದ್ರ ಸರ್ಕಾರವು ನೌಕರರ ಭವಿಷ್ಯ ನಿಧಿ ಯೋಜನೆಗೆ (ಇಪಿಎಸ್) 2014ರಲ್ಲಿ ಕೆಲವು ತಿದ್ದುಪಡಿಗಳನ್ನು ತಂದಿತು. ಇಪಿಎಸ್‌ಗೆ ಶೇ 8.33ರಷ್ಟು ದೇಣಿಗೆ ನೀಡಲಾಗುತ್ತದೆ. ಪಿಂಚಣಿ ಲೆಕ್ಕ ಹಾಕುವಾಗ ನೌಕರರ ಗರಿಷ್ಠ ವೇತನ ತಿಂಗಳಿಗೆ ₹15,000 ಮಾತ್ರ ಎಂದು ಪರಿಗಣಿಸಲಾಗುವುದು ಎಂದು ತಿದ್ದುಪಡಿಯಲ್ಲಿ ಹೇಳಲಾಗಿತ್ತು. ಅದಕ್ಕೂ ಮೊದಲು ಪಿಂಚಣಿ ಲೆಕ್ಕ ಹಾಕಲು ಪರಿಗಣಿಸುತ್ತಿದ್ದ ಗರಿಷ್ಠ ವೇತನವು ₹6,500 ಇತ್ತು. ಆದರೆ, ಉದ್ಯೋಗದಾತರು ನೈಜ ವೇತನದ ಆಧಾರದಲ್ಲಿ ಹೆಚ್ಚಿನ ವಂತಿಗೆ ನೀಡಲು ಅವಕಾಶ ಇತ್ತು. 2014ರ ಸೆಪ್ಟೆಂಬರ್ 1ರ ನಂತರ ನೌಕರಿಗೆ ಸೇರಿದವರು ಮತ್ತು ₹15,000ಕ್ಕಿಂತ ಹೆಚ್ಚಿನ ವೇತನ ಇರುವವರು ಇಪಿಎಸ್‌ಗೆ ಅರ್ಹರಲ್ಲ ಎಂದು ತಿದ್ದುಪಡಿಯಲ್ಲಿ ಹೇಳಲಾಗಿತ್ತು. ಆದರೆ, ನೌಕರರ ಸಂಘಟನೆಗಳು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಲಿಲ್ಲ. ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ವಿರುದ್ಧ ಈ ನೌಕರರ ಸಂಘಟನೆಗಳು ಹೈಕೋರ್ಟ್‌ನಲ್ಲಿ ದೂರು ದಾಖಲಿಸಿದವು. ಈ ಪ್ರಕರಣಗಳಲ್ಲಿ ನೌಕರರ ಸಂಘಗಳ ಪರವಾಗಿ ಹೈಕೋರ್ಟ್‌ಗಳು ತೀರ್ಪು ನೀಡಿದವು. ಇಪಿಎಫ್‌ಒ ಇದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತು. ಸುಪ್ರೀಂ ಕೋರ್ಟ್ 2022ರ ನವೆಂಬರ್‌ನಲ್ಲಿ ಅಂತಿಮ ಆದೇಶ ನೀಡಿತು.

2014ರ ಸೆಪ್ಟೆಂಬರ್ 1ರ ಬಳಿಕ ಕೆಲಸಕ್ಕೆ ಸೇರಿದ ಮತ್ತು ತಿಂಗಳಿಗೆ ₹15,000ಕ್ಕಿಂತ ಹೆಚ್ಚು ವೇತನ ಹೊಂದಿರುವ ನೌಕರರಿಗೆ ಇಪಿಎಸ್ ಸೌಲಭ್ಯವನ್ನು ನಿರ್ಬಂಧಿಸುವ ಹಕ್ಕು ಕೇಂದ್ರ ಸರ್ಕಾರಕ್ಕೆ ಇದೆ ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. ಆದರೆ, 2014ರ ಸೆಪ್ಟೆಂಬರ್ 1ಕ್ಕೆ ಮೊದಲು ಇಪಿಎಫ್ ಸದಸ್ಯರಾದವರು ಮತ್ತು ಆ ಬಳಿಕವೂ ಕೆಲಸದಲ್ಲಿ ಮುಂದುವರಿದವರಿಗೆ ತಮ್ಮ ಪೂರ್ಣ ವೇತನದ (ಮೂಲ ವೇತನ ಮತ್ತು ತುಟ್ಟಿಭತ್ಯೆ) ಆಧಾರದಲ್ಲಿ ಪಿಂಚಣಿ ಪಡೆಯುವ ಅವಕಾಶವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಬೇಕು ಎಂದೂ ತೀರ್ಪಿನಲ್ಲಿ ಹೇಳಲಾಗಿತ್ತು. ಈ ಅವಕಾಶವನ್ನು ಆಯ್ಕೆ ಮಾಡಿಕೊಳ್ಳಲು ಬಯಸುವವರಿಗೆ ನಾಲ್ಕು ತಿಂಗಳು ಸಮಯ ಕೊಡಬೇಕು ಎಂದೂ ಕೋರ್ಟ್ ಹೇಳಿತ್ತು. ಈ ಸಮಯದ ಗಡುವು 2023ರ ಮಾರ್ಚ್ 3ಕ್ಕೆ ಕೊನೆಗೊಳ್ಳುತ್ತದೆ. ಆದರೆ, ಇಪಿಎಫ್‌ಒ ಈ ಗಡುವನ್ನು ಮತ್ತೂ ಎರಡು ತಿಂಗಳು ವಿಸ್ತರಿಸಿದೆ. ಈ ಗಡುವು 2023ರ ಮೇ 3ಕ್ಕೆ ಕೊನೆಗೊಳ್ಳುತ್ತದೆ.

ಹೆಚ್ಚುವರಿ ಪಿಂಚಣಿ ಲೆಕ್ಕಾಚಾರ

ನೌಕರನ ಪಿಂಚಣಿಗೆ ಅರ್ಹವಾದ ವೇತನ ಮತ್ತು ಪಿಂಚಣಿಗೆ ಅರ್ಹವಾದ ಸೇವಾವಧಿಯನ್ನು ಲೆಕ್ಕಹಾಕಿ ಪಿಂಚಣಿಯ ಮೊತ್ತವನ್ನು ನಿಗದಿ ಮಾಡಲಾಗುತ್ತದೆ. ಪಿಂಚಣಿಗೆ ಅರ್ಹವಾದ ವೇತನ ಮತ್ತು ಪಿಂಚಣಿಗೆ ಅರ್ಹವಾದ ಸೇವಾವಧಿ ಅಂದರೆ ಏನು ಎಂಬುದನ್ನು ವಿವರಿಸಲಾಗಿದೆ.

‘ಪಿಂಚಣಿಗೆ ಅರ್ಹವಾದ ವೇತನ’: ನೌಕರ ನಿವೃತ್ತಿಯಾದ ದಿನದ ಹಿಂದಿನ 60 ತಿಂಗಳ ಸರಾಸರಿ ವೇತನವನ್ನು ‘ಪಿಂಚಣಿಗೆ ಅರ್ಹವಾದ ವೇತನ’ ಎಂದು ಪರಿಗಣಿಸಲಾಗುತ್ತದೆ. ಈ 60 ತಿಂಗಳ ಅವಧಿಯಲ್ಲಿ ನೌಕರ ಪಡೆದ ಮೂಲವೇತನ ಮತ್ತು ತುಟ್ಟಿಭತ್ಯೆಯನ್ನು (ಅನ್ವಯವಾಗುವುದಿದ್ದರೆ) ಕೂಡಿಸಲಾಗುತ್ತದೆ. ಅದನ್ನು 60ರಿಂದ ಭಾಗಿಸಿದಾಗ ಬರುವ ಮೊತ್ತವೇ, ‘ಪಿಂಚಣಿಗೆ ಅರ್ಹವಾದ ವೇತನ’.

‘ಪಿಂಚಣಿಗೆ ಅರ್ಹವಾದ ಸೇವಾವಧಿ’: ಇಪಿಎಫ್‌ನಿಂದ ಇಪಿಎಸ್ ಖಾತೆಗೆ ವಂತಿಗೆ ಸಂದಾಯವಾದ ಅವಧಿಯನ್ನು ‘ಪಿಂಚಣಿಗೆ ಅರ್ಹವಾದ ಸೇವಾವಧಿ’ ಎಂದು ಕರೆಯಲಾಗುತ್ತದೆ. ಯಾವುದೇ ಇಪಿಎಸ್ ಖಾತೆಗೆ ಕನಿಷ್ಠ 10 ವರ್ಷವಾದರೂ ವಂತಿಗೆ ಸಂದಾಯವಾಗಿದ್ದರೆ ಮಾತ್ರ, ಆ ಖಾತೆದಾರ ಪಿಂಚಣಿಗೆ ಅರ್ಹವಾಗುತ್ತಾನೆ. ಅಂದರೆ, ಈ ಯೋಜನೆ ಅಡಿ ಪಿಂಚಣಿ ಪಡೆಯಲು ಕನಿಷ್ಠ 10 ವರ್ಷಗಳವರೆಗೆ ಕೆಲಸ ಮಾಡಿರಬೇಕು ಮತ್ತು ಇಪಿಎಸ್ ಖಾತೆಗೆ ವಂತಿಗೆ ಸಂದಾಯವಾಗಿರಬೇಕು. ಅದೇ ರೀತಿ ಪಿಂಚಣಿ ಲೆಕ್ಕಾಚಾರದ ವೇಳೆ, ಗರಿಷ್ಠ ಸೇವಾವಧಿಗೂ ಮಿತಿ ಹಾಕಲಾಗಿದೆ. ನೌಕರ 35 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದ್ದರೂ, ಗರಿಷ್ಠ 35 ವರ್ಷಗಳನ್ನು ಮಾತ್ರ ಸೇವಾವಧಿ ಎಂದು ಪರಿಗಣಿಸಲಾಗುತ್ತದೆ. ಒಬ್ಬ ನೌಕರ 20 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದ್ದರೆ, ಆತನ ಸೇವಾವಧಿಗೆ ಹೆಚ್ಚುವರಿಯಾಗಿ 2 ವರ್ಷಗಳನ್ನು ಸೇರಿಸಲಾಗುತ್ತದೆ. (ಉದಾಹರಣೆಗೆ ನೌಕರ 20 ವರ್ಷ ಸೇವೆ ಸಲ್ಲಿಸಿದ್ದರೆ, ಅದು 22 ವರ್ಷವಾಗುತ್ತದೆ. 25 ವರ್ಷ ಸೇವೆ ಸಲ್ಲಿಸಿದ್ದರೆ ಅದು 27 ವರ್ಷವಾಗುತ್ತದೆ).

- ನೌಕರ ನಿವೃತ್ತಿಯಾದ ದಿನದ ಹಿಂದಿನ 60 ತಿಂಗಳ ಸರಾಸರಿ ವೇತನವನ್ನು ಪರಿಗಣಿಸಲಾಗುತ್ತದೆ. 60 ತಿಂಗಳ ಸರಾಸರಿ ವೇತನ ₹ 50,000 ಎಂದು ಪರಿಗಣಿಸೋಣ
- ಆ ವ್ಯಕ್ತಿ ಒಟ್ಟು 25 ವರ್ಷ ಸೇವೆ ಸಲ್ಲಿಸಿದ್ದಾನೆ ಎಂದು ಪರಿಗಣಿಸೋಣ. 2 ಹೆಚ್ಚುವರಿ ವರ್ಷಗಳೂ ಸೇರಿ ಸೇವಾವಧಿ 27 ವರ್ಷವಾಗುತ್ತದೆ
- ಪಿಂಚಣಿಗೆ ಅರ್ಹವಾದ ವೇತನವನ್ನು (₹50,000), ಪಿಂಚಣಿಗೆ ಅರ್ಹವಾದ ಸೇವಾವಧಿಯೊಂದಿಗೆ (25 + 2 = 27 ವರ್ಷ) ಗುಣಿಸಲಾಗುತ್ತದೆ. ಬರುವ ಮೊತ್ತವನ್ನು 70ರಿಂದ (ಸರಾಸರಿ ಜೀವಿತಾವಧಿ) ಭಾಗಿಸಲಾಗುತ್ತದೆ. ಆಗ ಉಳಿಯುವ ಮೊತ್ತವೇ ಇಪಿಎಸ್ ಪಿಂಚಣಿ ಮೊತ್ತ

ಉದಾಹರಣೆಗೆ...

₹50,000 X 27 = 13,50,000

13,50,000 ÷ 70 = ₹19,285.7 ಪಿಂಚಣಿ ಮೊತ್ತ

ಕಡಿಮೆ ಪಿಂಚಣಿ , ಹೆಚ್ಚು ಪಿಂಚಣಿ ವ್ಯತ್ಯಾಸ (ಒಂದು ತಿಂಗಳ ಲೆಕ್ಕಾಚಾರ)

ಹಳೆಯ ಇಪಿಎಫ್ ಮತ್ತು ಇಪಿಎಸ್ ವ್ಯವಸ್ಥೆ

ಇದರಲ್ಲಿ ಇಪಿಎಸ್‌ಗೆ ಪರಿಗಣಿಸುವ ವೇತನಕ್ಕೆ ಗರಿಷ್ಠ ₹15,000ದ ಮಿತಿ ಅನ್ವಯವಾಗುತ್ತದೆ.
ಇಲ್ಲಿ ನೌಕರನೊಬ್ಬ ₹40,000 (ಮೂಲವೇತನ ಮತ್ತು ತುಟ್ಟಿಭತ್ಯೆ) ಪಡೆಯುತ್ತಿದ್ದರೆ...

- ವೇತನದ ಶೇ 12ರಷ್ಟು ಮೊತ್ತ, ₹4,800 ಇಪಿಎಫ್ ಖಾತೆಗೆ ಆತನ ವೇತನದಿಂದ ಜಮೆಯಾಗುತ್ತದೆ
- ನೌಕರನ ವೇತನದ ಶೇ 12ರಷ್ಟು ಮೊತ್ತ, ₹4,800 ಅನ್ನು ಉದ್ಯೋಗದಾತ ಸಂಸ್ಥೆಯೂ ಇಪಿಎಫ್‌ಗೆ ನೀಡುತ್ತದೆ.
- ಸಂಸ್ಥೆಯು ನೀಡಿದ ಶೇ 12ರಷ್ಟು ಮೊತ್ತದಲ್ಲಿ ಶೇ 3.67ರಷ್ಟು ಮಾತ್ರ ಇಪಿಎಫ್ ಖಾತೆಗೆ ಜಮೆಯಾಗಬೇಕು. ಆದರೆ ₹15,000ರ ಮಿತಿ ಅನ್ವಯವಾಗಿ ಇಪಿಎಸ್ ಖಾತೆಗೆ ಜಮೆಯಾದ ₹1,250 ಹೊರತುಪಡಿಸಿ, ಉಳಿದ ₹3,550 ಇಪಿಎಫ್ ಖಾತೆಗೆ ಜಮೆಯಾಗುತ್ತದೆ
- ಸಂಸ್ಥೆಯು ನೀಡಿದ ಶೇ12ರಷ್ಟು ಮೊತ್ತದಲ್ಲಿ ಶೇ 8.33ರಷ್ಟು ಮೊತ್ತವು ಇಪಿಎಸ್ ಖಾತೆಗೆ ಹೋಗಬೇಕು. ಆದರೆ, ಈ ಶೇ 8.33ರಷ್ಟು ಮೊತ್ತಕ್ಕೆ ಗರಿಷ್ಠ ₹15,000ದ ವೇತನ ಮಿತಿ ಅನ್ವಯವಾಗುತ್ತದೆ. ಹೀಗಾಗಿ ₹15,000ದಲ್ಲಿ ಶೇ 8.33ರಷ್ಟು, ಅಂದರೆ **₹1,250** ಮಾತ್ರ ಇಪಿಎಸ್ ಖಾತೆಗೆ ಜಮೆಯಾಗುತ್ತದೆ. ಹೀಗೆ ಜಮೆಯಾದ ಮೊತ್ತದ ಆಧಾರದಲ್ಲಿ ನೌಕರ ನಿವೃತ್ತನಾದ ನಂತರ ಪಿಂಚಣಿಯಾಗಿ ದೊರೆಯುವುದು.
- ನೌಕರನ ವೇತನದಿಂದ ಕಡಿತ ಮಾಡಲಾದ ₹4,800 ಮತ್ತು ಉದ್ಯೋಗದಾತ ಸಂಸ್ಥೆ ನೀಡಿದ ₹3,550 ಸೇರಿ ಒಟ್ಟು **₹8,350** ನೌಕರನ ಇಪಿಎಫ್ ಖಾತೆಗೆ ಜಮೆಯಾಗುತ್ತದೆ. ಇಪಿಎಫ್ ಖಾತೆಗೆ ಹೆಚ್ಚು ವಂತಿಗೆ ಸಂದಾಯವಾಗುವ ಕಾರಣ, ನಿವೃತ್ತಿಯ ಸಂದರ್ಭದಲ್ಲಿ ಅಥವಾ ಕೆಲಸ ಬಿಟ್ಟಾಗ ದೊಡ್ಡ ಮೊತ್ತದ ಇಡುಗಂಟು ದೊರೆಯುತ್ತದೆ

ನೂತನ ಇಪಿಎಫ್ ಮತ್ತು ಇಪಿಎಸ್ ವ್ಯವಸ್ಥೆ

ಇದರಲ್ಲಿ ಇಪಿಎಸ್‌ಗೆ ಪರಿಗಣಿಸುವ ವೇತನಕ್ಕೆ ಗರಿಷ್ಠ ₹15,000ದ ಮಿತಿ ಅನ್ವಯವಾಗುವುದಿಲ್ಲ
ಇಲ್ಲಿ ನೌಕರನೊಬ್ಬ ₹40,000 (ಮೂಲವೇತನ ಮತ್ತು ತುಟ್ಟಿಭತ್ಯೆ) ಪಡೆಯುತ್ತಿದ್ದರೆ...

- ವೇತನದ ಶೇ 12ರಷ್ಟು ಮೊತ್ತ, ₹4,800 ಇಪಿಎಫ್ ಖಾತೆಗೆ ಆತನ ವೇತನದಿಂದ ಜಮೆಯಾಗುತ್ತದೆ
- ನೌಕರನ ವೇತನದ ಶೇ 12ರಷ್ಟು ಮೊತ್ತ, ₹4,800 ಅನ್ನು ಉದ್ಯೋಗದಾತ ಸಂಸ್ಥೆಯೂ ಇಪಿಎಫ್‌ಗೆ ನೀಡುತ್ತದೆ
- ಸಂಸ್ಥೆಯು ನೀಡಿದ ಶೇ 12ರಷ್ಟು ಮೊತ್ತದಲ್ಲಿ ಇಪಿಎಸ್ ಖಾತೆಗೆ ಜಮೆಯಾದ ₹3,332 ಹೊರತುಪಡಿಸಿ, ಉಳಿದ ₹1,468 ಇಪಿಎಫ್ ಖಾತೆಗೆ ಜಮೆಯಾಗುತ್ತದೆ
- ಸಂಸ್ಥೆಯು ನೀಡಿದ ಶೇ12ರಷ್ಟು ಮೊತ್ತದಲ್ಲಿ ಶೇ 8.33ರಷ್ಟು ಮೊತ್ತವು ಇಪಿಎಸ್ ಖಾತೆಗೆ ಹೋಗಬೇಕು. ಹೀಗಾಗಿ ₹40,000ರಲ್ಲಿ ಶೇ 8.33ರಷ್ಟು, ಅಂದರೆ **₹3,332** ಇಪಿಎಸ್ ಖಾತೆಗೆ ಜಮೆಯಾಗುತ್ತದೆ. ಹೀಗೆ ಜಮೆಯಾದ ಮೊತ್ತವೇ ನೌಕರ ನಿವೃತ್ತನಾದ ನಂತರ ಪಿಂಚಣಿಯಾಗಿ ದೊರೆಯುವುದು. ಇಲ್ಲಿ ಹೆಚ್ಚು ಮೊತ್ತ ಜಮೆಯಾಗುವ ಕಾರಣ, ನಿವೃತ್ತಿಯ ನಂತರ ನೌಕರನಿಗೆ ಹೆಚ್ಚು ಪಿಂಚಣಿ ದೊರೆಯುತ್ತದೆ
- ನೌಕರನ ವೇತನದಿಂದ ಕಡಿತ ಮಾಡಲಾದ ₹4,800 ಮತ್ತು ಉದ್ಯೋಗದಾತ ಸಂಸ್ಥೆ ನೀಡಿದ ₹1,468 ಸೇರಿ ಒಟ್ಟು **₹6,268** ನೌಕರನ ಇಪಿಎಫ್ ಖಾತೆಗೆ ಜಮೆಯಾಗುತ್ತದೆ. ಇಪಿಎಫ್ ಖಾತೆಗೆ ಕಡಿಮೆ ವಂತಿಗೆ ಸಂದಾಯವಾಗುವ ಕಾರಣ, ನಿವೃತ್ತಿಯ ಸಂದರ್ಭದಲ್ಲಿ ಅಥವಾ ಕೆಲಸ ಬಿಟ್ಟಾಗ ದೊರೆಯುವ ಇಡುಗಂಟಿನ ಮೊತ್ತ ಕಡಿಮೆ ಇರುತ್ತದೆ

ಆಧಾರ: ಕ್ಲಿಯರ್‌ಟ್ಯಾಕ್ಸ್.ಕಾಂ, ಪಿಟಿಐ

ಸಿನಿ ಬಿಟ್ಸ್

ಮಾರ್ಚ್ 3ಕ್ಕೆ ಕಾಸಿನಸರ

ರಾಷ್ಟ್ರ ಪ್ರಶಸ್ತಿ ವಿಜೇತ ‘ಹೆಬ್ಬೆಟ್ ರಾಮಕ್ಕ’ ಸಿನಿಮಾ ನಿರ್ದೇಶಿಸಿದ್ದ ಎನ್. ಆರ್. ನಂಜುಂಡೇಗೌಡ ಅವರ ಹೊಸ ಸಿನಿಮಾ ‘ಕಾಸಿನಸರ’ ಬಿಡುಗಡೆಗೆ ದಿನಾಂಕ ನಿಗದಿಯಾಗಿದ್ದು, ಮಾರ್ಚ್ 3ರಂದು ರಾಜ್ಯದ ನೂರಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಸಿನಿಮಾ ತೆರೆಕಾಣಲಿದೆ.

ಚಿತ್ರದಲ್ಲಿ ‘ಚಿನ್ನಾರಿಮುತ್ತ’ ನಟ ವಿಜಯ ರಾಘವೇಂದ್ರ ಅವರು ಪ್ರಗತಿಪರ ರೈತನಾಗಿ ನಟಿಸಿದ್ದಾರೆ. ವಿಜಯ್‌ಗೆ ನಟಿ ಹರ್ಷಿಕಾ ಪೂಣಚ್ಚ ‘ಸಂಪಿಗೆ’ ಎಂಬ ಪಾತ್ರದಲ್ಲಿ ಜೋಡಿಯಾಗಿದ್ದಾರೆ. ಗ್ರಾಮೀಣ ಸೊಗಡಿನಲ್ಲಿ ನಡೆಯುವ ಕೌಟುಂಬಿಕ ಸಂಬಂಧಗಳ ಸುತ್ತ ಹೆಣೆಯಲಾದ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಸಾವಯುವ ಕೃಷಿಯ ಬಗ್ಗೆ ಹೇಳಲಾಗಿದೆ. ಗ್ರಾಮೀಣ ಭಾಗದಿಂದಲೇ ಬಂದ ದೊಡ್ಡನಾಗಯ್ಯ ಅವರು ಈ ಚಿತ್ರ ನಿರ್ಮಾಣ ಮಾಡಿದ್ದಾರೆ.

‘ನಾವು ಎಷ್ಟೇ ಆಧುನಿಕತೆಗೆ ತೆರೆದುಕೊಂಡರೂ, ಕೃತಕ ಬುದ್ಧಿಮತ್ತೆ ಎಷ್ಟೇ ಅಭಿವೃದ್ಧಿಯಾದರೂ, ಬೇರು ಹುಡುಕುತ್ತ ಹಳ್ಳಿಗೇ ಬರಬೇಕು. ಅಲ್ಲಿ ಬದುಕುವ ರೈತರ ಬದುಕನ್ನು ಇಣುಕಿ ನೋಡಲೇಬೇಕು. ಕಲಾವಿದನಾಗಿ ನಾನು ಹಲವು ಪಾತ್ರಗಳಲ್ಲಿ ನಟಿಸಿದ್ದೇನೆ. ಈ ಪೈಕಿ ಬಹಳ ಗಂಭೀರವಾಗಿ ಯೋಚನೆಗೆ ಹಚ್ಚುವ ಸಿನಿಮಾ ‘ಕಾಸಿನಸರ’. ಇಲ್ಲಿ ನಾನು ಮೊದಲ ಬಾರಿ ರೈತನ ಪಾತ್ರಕ್ಕೆ ಬಣ್ಣಹಚ್ಚಿದ್ದೇನೆ. ಹಳ್ಳಿಯ ಬದುಕಿನ ಮೇಲೆ ನಮ್ಮ ಬದುಕು ಅವಲಂಬಿತವಾಗಿದೆ ಎನ್ನುವ ಸಂದೇಶ ಇಲ್ಲಿ ನಗರವಾಸಿಗಳಿಗಿದೆ’ ಎನ್ನುತ್ತಾರೆ ವಿಜಯ ರಾಘವೇಂದ್ರ.

‘ರೈತರ ಬದುಕು ಕೊಂಚ ಏರುಪೇರಾದರೂ ಎದುರಾಗಬಹುದಾದ ಸಂಕಷ್ಟ ಒಂದೆರಡಲ್ಲ. ಈ ಹೊಡೆತವನ್ನು ಖಂಡಿತವಾಗಿಯೂ ಯಾರಿಂದಲೂ ತಡೆದುಕೊಳ್ಳಲು ಸಾಧ್ಯವಿಲ್ಲ. ‘ಕಾಸಿನಸರ’ ಎನ್ನುವುದು ಕೇವಲ ಒಡವೆಯಲ್ಲ. ಒಂದು ರೈತ ಕುಟುಂಬವನ್ನು ಕಾಪಾಡುವುದರ ಜೊತೆಗೆ ಆತನ ಆರ್ಥಿಕ ಪರಿಸ್ಥಿತಿ, ಸಂಬಂಧಗಳ ಮೌಲ್ಯ ಕಾಪಾಡುವ ವಸ್ತುವದು’ ಎಂದರು ವಿಜಯ್.

ಚಿತ್ರಕ್ಕೆ ಶ್ರೀಧರ್ ವಿ. ಸಂಭ್ರಮ ಅವರ ಸಂಗೀತ ನಿರ್ದೇಶನವಿದೆ.



ಹರ್ಷಿಕಾ ಪೂಣಚ್ಚ, ವಿಜಯ ರಾಘವೇಂದ್ರ

ರಾಮಾಚಾರಿ 2.0 ಕಥೆಯೇನು?

ತಾಯಿ ಮಗನ ಭಾವುಕ ಸಂಬಂಧ, ಸಸ್ಪೆನ್ಸ್ ಥ್ರಿಲ್ಲರ್, ವಿಷ್ಣುವರ್ಧನ್, ರವಿಚಂದ್ರನ್ ಮೇಲಿನ ಅಭಿಮಾನವಿರುವ ಚಿತ್ರ ‘ರಾಮಾಚಾರಿ 2.0’. ಇತ್ತೀಚೆಗೆ ಚಿತ್ರದ ಟ್ರೈಲರ್ ಬಿಡುಗಡೆಯಾಗಿದೆ. ತೇಜ್ ಆರ್. ಚಿತ್ರದ ನಿರ್ದೇಶಕ ಹಾಗೂ ನಾಯಕ.

ಏನಂದ್ರು ‘ರಾಮಾಚಾರಿ’? : ‘ರಾಮಾಚಾರಿ ಚಿತ್ರದಲ್ಲಿದ್ದ ಚಾಮಯ್ಯ ಮೇಷ್ಟ್ರಂತಹ ಪಾತ್ರ ಬೇಕಿತ್ತು. ಅದಕ್ಕೆ ರಾಘವೇಂದ್ರ ರಾಜ್‌ಕುಮಾರ್ ಅವರನ್ನು ಭೇಟಿಯಾದೆ. ಅವರು ಒಪ್ಪಿಕೊಂಡರು. ಈ ಸಿನಿಮಾ ಒಳ್ಳೆಯ ತಂಡದಿಂದ ನಿರ್ಮಾಣಗೊಂಡಿದೆ. ಸರಿಯಾದ ವ್ಯಕ್ತಿಗಳನ್ನು ಸರಿಯಾದ ಜಾಗದಲ್ಲಿ ನಿಯೋಜಿಸಿದ್ದೆ. ಅವರವರ ಕೆಲಸ ಚೆನ್ನಾಗಿ ಮಾಡಿದ್ದಾರೆ. ಸಿನಿಮಾ ತುಂಬಾ ಚೆನ್ನಾಗಿ ಮೂಡಿಬಂದಿದೆ ಎಂದರು ತೇಜ್.

ಪನಾರೋಮಿಕ್ ಸ್ಟುಡಿಯೋಸ್ ಮತ್ತು ಮೇಘನಾ ಕ್ರಿಯೇಷನ್ಸ್ ಬ್ಯಾನರ್ ಅಡಿ ಈ ಚಿತ್ರ ನಿರ್ಮಾಣಗೊಂಡಿದೆ. ಏಪ್ರಿಲ್ 7ರಂದು ಬಿಡುಗಡೆಯಾಗಲಿದೆ. ತೇಜ್ ಜೊತೆ ರಾಘವೇಂದ್ರ ರಾಜ್‌ಕುಮಾರ್, ಸ್ಪರ್ಶರೇಖಾ, ಚಂದನಾ, ಸ್ವಾತಿ, ವಿಜಯ್ ಚೆಂಡೂರ್, ಪ್ರಭು ಸೂರ್ಯ, ಕೌಸ್ತುಭಮಣಿ ತಾರಾಗಣದಲ್ಲಿದ್ದಾರೆ. ಸುಂದರಮೂರ್ತಿ ಅವರ ಸಂಗೀತ, ಪ್ರದ್ಯೋತ್ ಅವರ ಹಿನ್ನೆಲೆ ಸಂಗೀತವಿದೆ.



ತೇಜ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಛತ್ತೀಸಗಡದ** ರಾಯಪುರದಲ್ಲಿ ಇತ್ತೀಚೆಗೆ ನಡೆದ ಕಾಂಗ್ರೆಸ್ ಮಹಾಧಿವೇಶದನಲ್ಲಿ ಪಾಲ್ಗೊಂಡಿದ್ದ ಪಕ್ಷದ ಮುಖಂಡರಿಗೆ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಅವರು ದುಬಾರಿ ಉಡುಗೊರೆ ನೀಡಿ ಸ್ವಾಗತ ಮಾಡಿದರು ಎಂಬ ಚರ್ಚೆ ಶುರುವಾಗಿದೆ. ಬಘೆಲ್ ಅವರು ಮುಖಂಡರಿಗೆ ‘ಚಿನ್ನದ ಹಾರ’ ತೊಡಿಸುತ್ತಿದ್ದಾರೆ ಎಂದು ಹೇಳಲಾಗುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ‘ರಾಜ್ಯದಲ್ಲಿ ಆಲೂಗಡ್ಡೆಗಿಂತ ಚಿನ್ನ ಅಗ್ಗವಾಗಿದೆಯೇ’ ಎಂದು ಜಾಲತಾಣ ಬಳಕೆದಾರರೊಬ್ಬರು ಪ್ರಶ್ನಿಸಿದ್ದಾರೆ. ಬಘೆಲ್ ಅವರು ಚಿನ್ನದ ಸರ ಖರೀದಿಸಲು ಮಾಡಿರುವ ವೆಚ್ಚದ ವಿವರ ನೀಡುವಂತೆ ಆಗ್ರಹಿಸಿದ್ದಾರೆ. ಆದರೆ, ಈ ಸುದ್ದಿ ಸುಳ್ಳು.

✓ **ಬಘೆಲ್ ಅವರು** ಕಾಂಗ್ರೆಸ್ ಮುಖಂಡರನ್ನು ಸ್ವಾಗತಿಸುವಾಗ ತೊಡಿಸಿದ ಹಾರವು ಚಿನ್ನದ ಬಣ್ಣದಲ್ಲಿ ಕಾಣುವುದರಿಂದ ಅದನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದು ‘ದಿ ಲಾಜಿಕಲ್ ಇಂಡಿಯನ್’ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಮುಖಂಡರಿಗೆ ತೊಡಿಸಿದ್ದು ‘ಬಿರನ್’ ಎಂಬ ಸರ. ಇದನ್ನು ಹುಲ್ಲು ಹಾಗೂ ಖರ್ಸಾಲಿ ಎಂಬ ಮರದ ಭಾಗವನ್ನು ಬಳಸಿ ತಯಾರಿಸಲಾಗುತ್ತದೆ. ಛತ್ತೀಸಗಢ ಹಾಗೂ ಮಧ್ಯಪ್ರದೇಶದಲ್ಲಿ ವಾಸವಾಗಿರುವ ಬೈಗಾ ಬುಡಕಟ್ಟು ಸಮುದಾಯದವರು ಇದನ್ನು ತಯಾರಿಸಿದ್ದಾರೆ. ಬಿರನ್ ಸರವು ಸಮುದಾಯದ ಸಂಸ್ಕೃತಿಯ ಪ್ರತೀಕ ಎನ್ನಲಾಗುತ್ತಿದೆ. ನೈಸರ್ಗಿಕ ವಸ್ತುಗಳನ್ನು ಬಳಸಿ ತಯಾರಿಸಿದ ಹಾರವನ್ನು ಚಿನ್ನದ ಸರ ಎಂಬುದಾಗಿ ಸುಳ್ಳು ಹೇಳಲಾಗುತ್ತಿದೆ ಎಂದು ಸ್ವತಃ ಬಘೆಲ್ ಅವರೇ ಟ್ವೀಟ್ ಮಾಡಿ ಸ್ಪಷ್ಟನೆ ನೀಡಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ನೆಮ್ಮದಿಯ ನೆಲೆಗಳು

ಗುಡಿಯ ಪೂಜೆಯೊ, ಕಥೆಯೊ, ಸೊಗಸು ನೋಟವೊ, ಹಾಡೊ |
ಬಡವರಿಂಗುಪಕೃತಿಯೊ, ಆವುದೋ ಮನದ ||
ಬಡಿದಾಟವನು ನಿಲಿಸಿ ನೆಮ್ಮದಿಯನೀವೊಡದೆ |
ಬಿಡುಗಡೆಯೊ ಜೀವಕ್ಕೆ – ಮಂಕುತಿಮ್ಮ || **832** ||

ಪದ-ಅರ್ಥ: ಬಡವರಿಂಗುಪಕೃತಿಯೊ = ಬಡವರಿಗೆ (ಬಡವರಿಗೆ) + ಉಪಕೃತಿಯೊ(ಉಪಕಾರವೊ), ನೆಮ್ಮದಿಯನೀವೊಡದೆ = ನೆಮ್ಮದಿಯನು + ಈವೊಡೆ(ಕೊಡುವುದಾದರೆ) + ಅದೆ.

ವಾಚ್ಯಾರ್ಥ: ಗುಡಿಯಲ್ಲಿ ಪೂಜೆಯೊ, ಕಥೆಯೋ, ಸುಂದರವಾದ ನೋಟವೋ, ಹಾಡೋ, ಬಡವರಿಗೆ ಮಾಡುವ ಉಪಕಾರವೊ, ಯಾವುದೇ ಆಗಲಿ, ಅದು ಮನಸ್ಸಿನ ಹೊಯ್ದಾಟವನ್ನು ನಿಲ್ಲಿಸಿ, ಸಮಾಧಾನ ನೀಡುವುದಾದರೆ, ಅದೇ ಜೀವಕ್ಕೆ ಬಿಡುಗಡೆಯ ಮಾರ್ಗ.

ವಿವರಣೆ: ಅವನೊಬ್ಬ ರಾಜ. ಎಲ್ಲ ಭೋಗಭಾಗ್ಯಗಳಿದ್ದರೂ ಮನದಲ್ಲಿ ಸಂತೋಷ, ಶಾಂತಿ ಇರಲಿಲ್ಲ. ತನಗೆ ಶಾಂತಿಯ ಮಾರ್ಗವನ್ನು ತಿಳಿಸುವವರಿಗೆ ಬಹುದೊಡ್ಡ ಬಹುಮಾನ ಎಂದು ಘೋಷಣೆ ಮಾಡಿದ. ಬಹುಮಾನದ ಆಸೆಗೆ ನೂರಾರು ಜನ, ನೂರಾರು ಸಲಹೆಗಳನ್ನು ಕೊಟ್ಟರೂ ಶಾಂತಿ ಇಳಿಯಲಿಲ್ಲ. ಒಂದು ದಿನ ಒಬ್ಬ ಸನ್ಯಾಸಿ ಬಂದು, ರಾಜನೊಂದಿಗೆ ಮಾತನಾಡಿ ಹೇಳಿದ, “ಇದು ತುಂಬ ಸುಲಭ. ನಿಮ್ಮ ರಾಜ್ಯದಲ್ಲಿ ಅತ್ಯಂತ ಸಂತೋಷ, ಶಾಂತಿಯಿಂದ ಇರುವವನನ್ನು ಹುಡುಕಿಸಿ. ಅವನ ಅಂಗಿಯನ್ನು ನೀವು ಹಾಕಿಕೊಂಡರೆ ಆ ಶಾಂತಿ, ಸಂತೋಷ ನಿಮ್ಮದೇ”. ರಾಜಮಂತ್ರಿಗಳಿಗೆ ಅಂಥವನನ್ನು ಹುಡುಕಲು ಆಜ್ಞೆ ಮಾಡಿದ.ದೂತರು ರಾಜ್ಯದ ಮೂಲೆ ಮೂಲೆಗಳನ್ನು ಹುಡುಕಿಹೋದರು. ಸದಾ ಸಂತೋಷದಲ್ಲಿರುವವರು ಸಿಕ್ಕಾರೆಯೇ ಎಂದುಪರೀಕ್ಷಿಸಿದರು. ಎಲ್ಲರಿಗೂ ಒಂದಲ್ಲ ಒಂದು ತೊಂದರೆ ಕಾಡುತ್ತಿತ್ತು. ಕೆಲವರಿಗೆ ಸಧ್ಯಕ್ಕೆ ತೊಂದರೆ ಇಲ್ಲದಿದ್ದರೂ ಮುಂದೆ ಬಂದೀತು ಎಂಬ ಚಿಂತೆ ಬಾಧಿಸಿ, ಇಂದಿನ ಸಂತೋಷವನ್ನು ಹಾಳು ಮಾಡಿತ್ತು. ಕೊನೆಗೊಬ್ಬ ತರುಣ ಸಿಕ್ಕ. ಅವನು ಕಾಡಿಗೆ ಹೋಗಿ ಮರ ಕಡಿದು ತಂದು ಮಾರಾಟಮಾಡಿ ಜೀವನ ಸಾಗಿಸುವವನು. ಅವನು ಯಾವಾಗಲೂ ನಗುನಗುತ್ತಲೇ ಇರುವವನು. ಯಾರು ಕೇಳಿದರೂ “ತುಂಬ ಚೆನ್ನಾಗಿದ್ದೇನೆ” ಎಂದು ನಕ್ಕು ಹೋಗಿಬಿಡುತ್ತಿದ್ದ. ಅವನಿಗೆ ನಾಳಿನ ಯಾವುದರ ಬಗ್ಗೆಯೂ ಚಿಂತೆಯಿಲ್ಲ. ಅವನೇ ಅತ್ಯಂತ ಸಂತೋಷ ಜೀವಿ ಎಂದು ತೀರ್ಮಾನ ಮಾಡಿ ಅವನನ್ನು ರಾಜನ ಬಳಿಗೆ ಕರೆ ತಂದರು. ಸನ್ಯಾಸಿಯೂಅಲ್ಲಿಯೇ ಇದ್ದ. ರಾಜ “ಅಯ್ಯಾ, ನಿನ್ನ ಅಂಗಿಯನ್ನು ನನಗೆಕೊಡು” ಎಂದು ಕೇಳಿದ. ತರುಣ ಮತ್ತೆ ಘೊಳ್ಳನೆ ನಕ್ಕು-,“ಸ್ವಾಮೀ, ನನ್ನ ಹತ್ತಿರ ಅಂಗಿಯೇ ಇಲ್ಲ. ನಾನು ಯಾವಾಗಲೂಹೀಗೆಯೇ ಬರಿಮೈಯಲ್ಲೇ ಇರುವುದು” ಎಂದ.ಸನ್ಯಾಸಿ ಹೇಳಿದ, “ರಾಜಾ, ಈ ತರುಣನ ಹತ್ತಿರ ಯಾವಭೋಗಭಾಗ್ಯಗಳಿಲ್ಲ, ಅಂಗಿಯೂ ಇಲ್ಲ, ಆದರೆ ಸಂತೋಷ ನೆಲೆಯಾಗಿದೆ. ಸಂತೋಷ ದೊರಕುವುದು ವಸ್ತುಗಳಿಂದಲ್ಲ,ಅಧಿಕಾರದಿಂದಲ್ಲ, ಸುತ್ತಲೂ ಸಂತೋಷವನ್ನು ಎಲ್ಲದರಲ್ಲಿ ಕಾಣುವ ಮನೋಧರ್ಮದಿಂದ”. ಕಗ್ಗ ಹೇಳುವುದು ಅದನ್ನೇ, ಸಂತೋಷವನ್ನು ಹುಡುಕಿಕೊಂಡು ಎಲ್ಲೆಲ್ಲಿಯೋ ಸುತ್ತ ಬೇಡ. ಅದು ನಿನಗೆ ಪೂಜೆಯಲ್ಲೋ, ಕಥೆಯಲ್ಲೋ, ಸುಂದರ ಪ್ರದೇಶದ ದರ್ಶನದಲ್ಲೋ ಹಾಡಿನಲ್ಲೋ ಅಥವಾ ನೀನು ದೀನರಿಗೆ ಮಾಡುವ ಸಹಾಯದಲ್ಲೋ ದೊರೆಯಬಹುದು. ಯಾವ ಕಾರ್ಯದಿಂದ ಮನದ ಬಡಿದಾಟ ಕಡಿಮೆಯಾಗುವುದೋ ಅದೇ ನಿನಗೆ ನೆಮ್ಮದಿಯ ತಾಣ, ಅದರಿಂದ ದಣಿದ ಜೀವಕ್ಕೆ ಬಿಡುಗಡೆ, ಬದುಕಿಗೆ ಶಾಂತಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮಾರ್ಚ್ 1, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಫಾಲ್ಗುಣ ಶುದ್ಧ ದಶಮಿ ಅಹೋರಾತ್ರ ನಕ್ಷತ್ರ: ಮೃಗಶಿರ ಗಂ. 09-52 ಯೋಗ: ಪ್ರೀತಿ ಗಂ. 17-02, ಕರಣ: ತೈತಿಲ ಗಂ. 17-28, ಕುಂಭ ಮಾಸದ 16 ನೇ ದಿನ.
ರಾಹುಕಾಲ : ಮಧ್ಯಾಹ್ನ 12-00 –01-30
ಸೂರ್ಯೋದಯ : 06-50 ಸೂರ್ಯಾಸ್ತ : 06-36
ಮುಸ್ಲಿಂ ದಿನಾಂಕ : 08 ಶಬನ್
ಅದೃಷ್ಟ ಸಂಖ್ಯೆ : 9, 5

ಮೇಷ: ಆರೋಗ್ಯದ ಬಗೆಗಿನ ಕಾಳಜಿಯು ಅನಾರೋಗ್ಯದಿಂದ ದೂರವಿರಿಸುತ್ತದೆ. ಪ್ರೇಮವಿವಾಹಕ್ಕಾಗಿ ಕಾಯುತ್ತಿರುವವರು ಇನ್ನೂ ಸ್ವಲ್ಪ ದಿನ ಕಾಯಬೇಕಾಗಬಹುದು. ತಂದೆಯ ಆರೋಗ್ಯವು ಕ್ಷೀಣಿಸಬಹುದಾದ್ದರಿಂದ ಎಚ್ಚರ ವಹಿಸಿ.

ವೃಷಭ: ವಿದೇಶಿ ವ್ಯವಹಾರಗಳನ್ನು ಹೊಂದಿರುವಂತಹವರು ವ್ಯಕ್ತಿಗಳು ಹೆಚ್ಚಿನ ಲಾಭ ಅಪೇಕ್ಷಿಸಬಹುದು. ಬಂಧುಗಳು ಹಾಗೂ ಸಹೋದ್ಯೋಗಿಗಳ ಬೆಂಬಲ ಚೆನ್ನಾಗಿರುತ್ತದೆ. ವಾಹನ ಚಲಾಯಿಸುವಾಗ ಎಚ್ಚರವಿರಲಿ.

ಮಿಥುನ: ಉತ್ತಮ ಪ್ರಯತ್ನದಿಂದಾಗಿ ನೀವು ಬಯಸಿದ ಕಡೆ ಕೆಲಸ ಸಿಗುವ ಸಾಧ್ಯತೆ ಇದೆ. ಬೃಹತ್ ಮೊತ್ತದ ವ್ಯವಹಾರವನ್ನು ಹೊಂದಿರುವವರು ಎದುರಾಳಿಗಳ ಮೇಲಿನ ಗಮನವನ್ನು ಹೆಚ್ಚು ಮಾಡಿಕೊಳ್ಳುವುದು ಒಳ್ಳೆಯದು.

ಕರ್ಕಾಟಕ: ಆಸ್ತಿ ಪಾಲುದಾರಿಕೆಯಂಥ ಮಹತ್ತರ ಕಾರ್ಯಗಳಲ್ಲಿ ತಾಳ್ಮೆ ವಹಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸೂಕ್ತ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಶ್ರದ್ಧೆ ವಹಿಸಿದರೆ ಗೆಲುವು ನಿಮ್ಮೆಡೆಯೇ ಇರುತ್ತದೆ.

ಸಿಂಹ: ಇನ್ನೊಬ್ಬರ ಮನೆಯ ವಿಚಾರವಾಗಿ ನೀವು ಯೋಚಿಸುವುದಾಗಲಿ ಅಥವಾ ಮಾತನಾಡಿಕೊಳ್ಳುವುದಾಗಲಿ ಮಾಡಿಕೊಂಡು ಗೌರವ ಕಡಿಮೆ ಮಾಡಿಕೊಳ್ಳದಿರಿ. ಗೃಹೋಪಯೋಗಿ ವಸ್ತುಗಳ ಮಾರಾಟದಿಂದ ಲಾಭ..

ಕನ್ಯಾ: ಚಿತ್ರಕಲಾ ಪ್ರದರ್ಶನದಲ್ಲಿ ಪಾಲ್ಗೊಳ್ಳುವ ಉತ್ತಮ ಅವಕಾಶ ಲಭಿಸುವುದು. ಮನೆ ಬದಲಾವಣೆ ವಿಚಾರಗಳು ಚರ್ಚೆಗೆ ಬಂದು ಹಿರಿಯರ ಮಾತಿನಂತೆ ನಡೆಯುವಿರಿ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪರಿಶ್ರಮದಿಂದ ಫಲ.

ತುಲಾ: ಗಂಭೀರ ಹಾಗೂ ತಾಳ್ಮೆಯಿಂದ ಕಾರ್ಯ ನಿರ್ವಹಿಸಿದಲ್ಲಿ ಯಶಸ್ಸು ಖಂಡಿತವಾಗಿಯೂ ನಿಮ್ಮದಾಗಲಿದೆ. ಈ ದಿನ ಎಂದಿನಂತಲ್ಲದೆ ಮನಸ್ಸು ಹೆಚ್ಚು ಉಲ್ಲಾಸದಿಂದ ಕೂಡಿರುವುದರಿಂದ ಕೆಲಸ ಕಾರ್ಯ ನಡೆಯುವುದು.

ವೃಶ್ಚಿಕ: ಸಮೀಪವರ್ತಿಗಳ ಸಹಕಾರದಿಂದ ವ್ಯಾಪಾರ ವಹಿವಾಟುಗಳ ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ. ಕುಟುಂಬದ ಕಿರಿಯ ಸೋದರನಿಗೆ ವಿವಾಹ ನಿಶ್ಚಯವಾಗುವುದು.

ಧನು: ನಿಮ್ಮನ್ನು ನೀವೇ ಪ್ರಶ್ನಿಸಿಕೊಳ್ಳುವ ಸಮಯ ಎದುರಾಗುವುದು. ಮಾಡಿದ ಪಾಪದ ಫಲ ಅನುಭವಕ್ಕೆ ಬರಲಿದೆ. ಬಂಧುಗಳಿಂದ ಉಡುಗೊರೆಯ ರೂಪದಲ್ಲಿ ದ್ರವ್ಯಲಾಭವಾಗುವುದು.

ಮಕರ: ವಾಹನ ಚಾಲನೆಯಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ. ಸಹೋದರರ ಜತೆ ಉತ್ತಮ ಬಾಂಧವ್ಯ ಹೊಂದುವುದರಿಂದ ಹೆಚ್ಚಿನ ಕಾರ್ಯಗಳಲ್ಲಿ ಅನುಕೂಲ ಇರುವುದು. ಸ್ನೇಹ ಸಂಬಂಧಗಳಿಗೆ ಹೆಚ್ಚಿನ ಪ್ರಾಮುಖ್ಯ ನೀಡಿರಿ.

ಕುಂಭ: ನಿರಂತರ ಕೆಲಸ ಕಾರ್ಯಗಳಿಂದ ದಣಿದ ನಿಮಗೆ ಸ್ವಲ್ಪಮಟ್ಟಿನ ಬಿಡುವು ಆರಾಮ ವೆನಿಸುವುದು. ಕಚೇರಿಯಲ್ಲಿ ಎಲ್ಲರೊಂದಿಗೆ ಸಂತೋಷವಾಗಿರುವಿರಿ. ಮನೆ ನಿರ್ಮಾಣದ ಕೆಲಸಗಳನ್ನು ಪೂರ್ತಿಗೊಳ್ಳಲಿದೆ.

ಮೀನ: ನಿಮ್ಮ ಸಹೋದ್ಯೋಗಿಯೊಬ್ಬರು ವೃತ್ತಿಗೆ ಅನುಕೂಲವಾಗುವಂತಹ ಅತಿ ಉತ್ತಮ ಉಪಾಯಗಳನ್ನು ನೀಡಲಿದ್ದು ಅವರ ಅನುಭವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲಿದ್ದಾರೆ. ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಪದಬಂಧ 5245

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕರದಲ್ಲಿಟ್ಟುಕೊಂಡಿರುವ ಸಲಕರಣೆ (4)
3.ವಂಚಕ ಇಲ್ಲಿದ್ದಾನೆ (4)
5.ಮುಂದುಗಡೆಯೇ ಪ್ರತ್ಯಕ್ಷ! (3)
7.ಗುರಾಣಿ ಹಿಡಿದಿರುವ ಅರಸಿ (2)
8.ತಡಸಲು ಸೇರುವಾಗ ಆಗಿರುವ ನಿಧಾನ (2)
10.ಒಳ್ಳೆಯ ದಿನ (3)
11.ಕುರಿಯ ತುಪ್ಪಟದಿಂದ ಮಾಡಿದ ಬಟ್ಟೆ (3)
13.ದಾಖಲೆಗಳಲ್ಲಿ ಗಮನಿಸಬೇಕೆಂದು ಸೇರಿಸುವ ವಿಶೇಷ ಅಂಶ (2)
15.ಬೀಜ ಬಿತ್ತಲು ಮಾಡಿರುವ ಮಡಿ (2)
16.ಕಾಠಿಣ್ಯವನ್ನು ಹೀಗೆನ್ನಿ (3)
18.ರತ್ನಖಚಿತ ವಸ್ತು (4)
19.ಹೆಣ್ಣು ದುಂಬಿ ಇಲ್ಲಿದೆ (4)

ಮೇಲಿಂದ ಕೆಳಕ್ಕೆ
1.ಈತ ಸೋಲಿಸಲ್ಪಟ್ಟವನು (4)
2.ರಭಸದಲ್ಲಿ ಹರಿದ ದ್ರವ (2)
3.ಮುಕ್ತಿಗೊಂದು ಪರ್ಯಾಯ ಪದ (2)
4.ಮಣಿ ಧರಿಸಿದ ಚಲುವೆ (3)
6.ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
7.ಮುಚ್ಚುಮರೆಯಿಲ್ಲದ ಬಹಿರಂಗ ವ್ಯವಹಾರ (4)
9.ದರೋಡೆಯು ಈ ರೀತಿ ಕಾಣುತ್ತಿದೆ (4)
12.ಬಡವ ಬಗ್ಗಿದಾಗ ಮೆತ್ತಿದ ಕೆಸರು! (3)
14.ಬೇರೊಂದು ದೇಶಕ್ಕೆ ಕಳಿಸುವ ರಾಜಪ್ರತಿನಿಧಿ (4)
15.ಈತ ತಿಳುವಳಿಕೆ ಇಲ್ಲದವನು (3)
16.ಗಡಿಬಿಡಿಯಿಂದ ಪ್ರವೇಶಿರುವ ಎಲ್ಲೆ (2)
17.ಪುಷ್ಪ ಇಲ್ಲಿ ಕಾಣುತ್ತಿದೆ (2)

1			2	■	3			4
	■	■	5	6		■	■	
	■	■	■		■	■	7	
8	9	■	10			■		■
■		■	■	■	■	■		■
■		■	11	12		■	13	14
15		■	■		■	■	■	
	■	■	16		17	■	■	
18				■	19			

5244ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಕ್ಕ 3.ಶಾಪ
5.ಪಳಿಯುಳಿಕೆ 6.ಗಡವ
7.ಪಾರ್ಥಿವ 8.ಸಾರ್ವಜನಿಕ
9.ಸಂಧಾನ 10.ಪ್ರಪಾತ
13.ಸೋದಾಹರಣ
14.ನಿಜ 15.ಹಾಲು

ಮೇಲಿಂದ ಕೆಳಕ್ಕೆ:
1.ಅನುರಾಗ 2.ಆಯುಧ
4.ಪರಾಭವ 5.ಪರ್ಯವಸಾನ
7.ಪಾಕಪ್ರವೀಣ
9.ಸಂಜೀವಿನಿ 11.ತಡಸಲು
12.ಕುಹಕಿ

ಸುಡೊಕು 5631

			3		8		2	4
8		6				5		
	5		4		6		7	
			1		2		4	
		9		3				
6			8		9	2		5
	8		6		1		9	
7		2		8		3		1
	6		2		3		5	7

5630 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಸರ್ಕಾರ ಅನುಮೋದಿಸಿದ್ದು 148 ಕೆರೆ; 102ರಲ್ಲಿ ಕಾಮಗಾರಿಗೆ ಮುಂದಾದ ಪಾಲಿಕೆ

ತೂಬು: 46 ಕೆರೆಗಳನ್ನು ಬಿಟ್ಟ ಬಿಬಿಎಂಪಿ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಅಮೃತ ನಗರೋತ್ಥಾನ ಯೋಜನೆಯಲ್ಲಿ 148 ಕೆರೆಗಳಿಗೆ 'ಸ್ಲೂಯಿಸ್ ಗೇಟ್' (ತೂಬು) ಅಳವಡಿಸಲು ರಾಜ್ಯ ಸರ್ಕಾರ ಅನುಮೋದನೆ ನೀಡಿದ್ದರೂ, ಅಷ್ಟು ಹಣವನ್ನು 102 ಕೆರೆಗಳಿಗೇ ಬಿಬಿಎಂಪಿ ವೆಚ್ಚ ಮಾಡುತ್ತಿದೆ. 46 ಕೆರೆಗಳನ್ನು ಕೈಬಿಟ್ಟಿದೆ.

'ಪೂರ್ವ ಮುಳುಗಿದ ಬೆಂಗಳೂರಿಗೆ' ಕೆರೆಗಳಿಂದ ಬೃಹತ್ ಪ್ರಮಾಣದಲ್ಲಿ ನೀರು ಹರಿದಿದೆ. ಈ ಹರಿವಿನ ಪ್ರಮಾಣ ನಿಯಂತ್ರಿಸಿದರೆ ಮುಳುಗಡೆಯಂತಹ ಸಮಸ್ಯೆ ಬರುವುದಿಲ್ಲ ಎಂದು ಬಿಬಿಎಂಪಿ ತನ್ನ ವ್ಯಾಪ್ತಿಯ 102 ಕೆರೆಗಳಿಗೆ 'ಸ್ಲೂಯಿಸ್ ಗೇಟ್' ನಿರ್ಮಿಸಲು ₹36.85 ಕೋಟಿ ವೆಚ್ಚ ಮಾಡಲಿದೆ.

ಹಿಂದಿನ ಕಾಲದಲ್ಲಿ ಕೆರೆಗೆ ನೀರನ್ನು ನಿಧಾನವಾಗಿ ಹರಿಸಲು ಕಲ್ಲಿನ ಕಂಬದ ರೂಪದಲ್ಲಿ ನಿರ್ಮಿಸಲಾಗುತ್ತಿದ್ದ 'ತೂಬು' ವಿಧಾನವನ್ನೇ ಬಿಬಿಎಂಪಿ ಇದೀಗ ಹೈಟೆಕ್ ಆಗಿ 'ಸ್ಲೂಯಿಸ್ ಗೇಟ್' ಆಗಿ ನಿರ್ಮಿಸುತ್ತಿದೆ.

2022ರ ಸೆಪ್ಟೆಂಬರ್‌ನಲ್ಲಿ ನಗರದಲ್ಲಿ ಅತಿಹೆಚ್ಚು ಮಳೆ ಸುರಿಯಿತು. ಈ ಸಂದರ್ಭದಲ್ಲಿ ಮಹದೇವಪುರ, ಬೊಮ್ಮನಹಳ್ಳಿ, ಯಲಹಂಕ ವಲಯಗಳಲ್ಲಿ ಪ್ರವಾಹದ ಪರಿಸ್ಥಿತಿ ಉಂಟಾಗಿ, ನಾಗರಿಕರ ಆಸ್ತಿಗಳಿಗೆ ಅಪಾರ ಪ್ರಮಾಣದಲ್ಲಿ ಹಾನಿ ಉಂಟಾಗಿತ್ತು. ಕೆರೆಗಳು ಕೋಡಿ ಹರಿದು ಬೃಹತ್ ಪ್ರಮಾಣದಲ್ಲಿ ನೀರು ಹರಿಯಿತು. ಇದನ್ನು ನಿಯಂತ್ರಿಸಲು ಹಾಗೂ ನೀರಿನ ಹರಿವಿನ ಗತಿಯನ್ನು ಕಡಿಮೆ ಮಾಡಲು ಸರ್ಕಾರದ ಆದೇಶದಂತೆ (ನಅಇ 782 ಎಂಎನ್‌ವೈ 2022 (ಇ) ಬಿಬಿಎಂಪಿ ತೂಬುಗಳನ್ನು ನಿರ್ಮಿಸಲು ಮುಂದಾಗಿದೆ. ಇದಕ್ಕಾಗಿ, ವಲಯವಾರು ಎಂಟು ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆದಿದ್ದು, ಇದೀಗ ಅಂತಿಮ ಹಂತದಲ್ಲಿದೆ.

ತೂಬು: ಯಾವ ಕೆರೆಗೆ ಎಷ್ಟು?

ವಲಯ	ಕೆರೆಗಳು	ವೆಚ್ಚ (₹ ಕೋಟಿಗಳಲ್ಲಿ)
ಪೂರ್ವ	3	2
ಪಶ್ಚಿಮ	2	1
ದಕ್ಷಿಣ	5	3.5
ಬೊಮ್ಮನಹಳ್ಳಿ	25	8
ದಾಸರಹಳ್ಳಿ	5	1.25
ಮಹದೇವಪುರ	25	9
ರಾಜರಾಜೇಶ್ವರಿ	23	7.10
ಯಲಹಂಕ	14	5
ಒಟ್ಟು	102	36.85

ಸರ್ಕಾರದಿಂದ 2022ರ ಸೆ.28ರಂದು ವಿಷಯ ಸಂಖ್ಯೆ 2ರಂತೆ ಅನುಮೋದನೆಯಾಗಿರುವ ಕೆರೆಗಳು 148. ಯಾವ ವಲಯದಲ್ಲಿ ಎಷ್ಟು ಕೆರೆಗಳಿಗೆ ಎಷ್ಟು ವೆಚ್ಚ ಎಂಬುದನ್ನೂ ನಮೂದಿಸಲಾಗಿದೆ. ಆದರೆ, ಟೆಂಡರ್ ಪ್ಯಾಕೇಜ್‌ನಲ್ಲಿ 46 ಕೆರೆಗಳನ್ನು ಕೈಬಿಡಲಾಗಿದೆ. ಬಿಬಿಎಂಪಿ ಪ್ರಧಾನ ಕಚೇರಿಯಲ್ಲಿರುವ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್‌ಗೆ ಸಂಪೂರ್ಣ ಮಾಹಿತಿ ಇಲ್ಲ. ಅಧಿಕಾರ ವಿಕೇಂದ್ರೀಕರಣದಿಂದ ವಲಯವಾರು ಇರುವ ಕಾರ್ಯಪಾಲಕ ಎಂಜಿನಿಯರ್‌ಗಳೇ ಟೆಂಡರ್‌ಗಳನ್ನು ಕರೆಯುತ್ತಿದ್ದಾರೆ.

ಶಾಸಕರಿಂದ ಹೆಚ್ಚಿನ ವೆಚ್ಚ!: 'ಶಾಸಕರ ಆಣತಿ ಮೇರೆಗೆ ಮಾತ್ರ ಕೆರೆಗಳ ಅಭಿವೃದ್ಧಿ ಕಾರ್ಯವನ್ನು ಸ್ಥಳೀಯ ಎಂಜಿನಿಯರ್‌ಗಳು ಕೈಗೊಳ್ಳುತ್ತಿದ್ದಾರೆ. ಸರ್ಕಾರದಿಂದ ಅಭಿವೃದ್ಧಿಗೆ ಕಾಮಗಾರಿ ಅನುಮೋದನೆಯಾಗಿದ್ದರೂ ಕೆಲವು ಕೆರೆಗಳ ಅಭಿವೃದ್ಧಿ ಆರಂಭವಾಗಿಯೇ ಇಲ್ಲ. ಉದಾಹರಣೆಗೆ ಕೆಂಚೇನಹಳ್ಳಿ ಕೆರೆ ಹಾಗೂ ಕೆಂಗೇರಿಯಲ್ಲಿರುವ ಗಾಂಧಿನಗರ ಕೆರೆ. ಅದೇ ರೀತಿ ತೂಬು ಅಳವಡಿಕೆಯಲ್ಲೂ ಕೆಲವೇ ಕೆರೆಗಳಿಗೆ ಹೆಚ್ಚಿನ ಹಣ ವೆಚ್ಚ ಮಾಡಲಾಗುತ್ತಿದೆ' ಎಂದು ಪರಿಸರ ಕಾರ್ಯಕರ್ತರಾದ ಟಿ.ಇ. ಶ್ರೀನಿವಾಸ್, ಮಲ್ಲಿಕಾರ್ಜುನಸ್ವಾಮಿ, ಟಿ. ಮೋಹನ್ ದೂರಿದರು.

ಕೂಡಲೇ ಕಾಮಗಾರಿ...: ರಾಜ್ಯ ಸರ್ಕಾರದ ನಿರ್ದೇಶನದಂತೆ ಕೆರೆಗಳಲ್ಲಿ ತೂಬು ಅಳವಡಿಸಲು ಆಯಾ ವಲಯವಾರು ವಿಭಾಗದಿಂದಲೇ ಟೆಂಡರ್ ಕರೆಯಲಾಗಿದೆ. ಮಳೆಗಾಲದ ವೇಳೆಗೆ ಈ ಕೆಲಸ ಮುಗಿಸಬೇಕು ಎಂಬ ಉದ್ದೇಶವಿದೆ. ಹೀಗಾಗಿ ಪ್ಯಾಕೇಜ್ ಟೆಂಡರ್ ಕರೆಯಲಾಗಿದೆ ಎಂದು ಬಿಬಿಎಂಪಿ ಕೆರೆಗಳ ವಿಭಾಗ ಮುಖ್ಯ ಎಂಜಿನಿಯರ್ ವಿಜಯಕುಮಾರ ಹರಿದಾಸ್ ಹೇಳಿದರು.

ಅನುಮೋದನೆ, ಟೆಂಡರ್‌ನಲ್ಲಿ ವ್ಯತ್ಯಾಸ

ಕಾಮಗಾರಿಗೆ ವಲಯವಾರು ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆಯಲಾಗಿದೆ. ಆಯಾ ವಲಯದಲ್ಲಿರುವ ಎಲ್ಲ ಕೆರೆಗಳಿಗೆ ತೂಬು ಅಳವಡಿಸುವ ಕಾಮಗಾರಿ ಎಂದು ಟೆಂಡರ್‌ನಲ್ಲಿ ಹೇಳಲಾಗಿದೆ. ಆದರೆ, ಬಿಬಿಎಂಪಿಯ ಕಡತದಲ್ಲಿರುವ ಮಾಹಿತಿ ವಿಭಿನ್ನವಾಗಿದೆ. ಪ್ರತಿಯೊಂದು ವಲಯದಲ್ಲಿ ಯಾವ ಕೆರೆಗಳಿಗೆ ತೂಬು ಅಳವಡಿಸಬೇಕು, ಎಷ್ಟು ವೆಚ್ಚ ಎಂಬ ಮಾಹಿತಿ ಇದ್ದು, ಇದರಲ್ಲಿರುವುದು 102 ಕೆರೆಗಳಷ್ಟೇ. ಅಷ್ಟಕ್ಕೇ ಸರ್ಕಾರ ಅನುಮೋದನೆ ನೀಡಿರುವ ₹38.85 ಕೋಟಿ ವೆಚ್ಚವಾಗುತ್ತದೆ. ಉಳಿದ 46 ಕೆರೆಗಳ ಮಾಹಿತಿ ಕಡತದಲ್ಲಿ ಇಲ್ಲ.

ಪಶ್ಚಿಮ ಹಾಗೂ ದಾಸರಹಳ್ಳಿ ವಲಯದಲ್ಲಿ ಕ್ರಮವಾಗಿ 2 ಮತ್ತು 5 ಕೆರೆಗಳಿಗೆ ತೂಬು ಅಳವಡಿಸುವ ಬಗ್ಗೆ ಅನುಮೋದನೆ, ಕಡತದ ಮಾಹಿತಿ ಸರಿಯಾಗಿದೆ. ಪೂರ್ವ ವಲಯದಲ್ಲಿ ಅನುಮೋದನೆಯಾಗಿರುವುದು 4 ಕೆರೆ, ಪಟ್ಟಿಯಲ್ಲಿರುವುದು 3, ದಕ್ಷಿಣದಲ್ಲಿ 7ಕ್ಕೆ 5, ಬೊಮ್ಮನಹಳ್ಳಿಯಲ್ಲಿ 38ಕ್ಕೆ 25, ಮಹದೇವಪುರದಲ್ಲಿ 52ಕ್ಕೆ 40, ರಾಜರಾಜೇಶ್ವರಿನಗರದಲ್ಲಿ 30ಕ್ಕೆ 23, ಯಲಹಂಕದಲ್ಲಿ 22ಕ್ಕೆ 14 ಕೆರೆಗಳಿಗೆ ಮಾತ್ರ ತೂಬು ಅಳವಡಿಸಲಾಗುತ್ತಿದೆ.

ಇತರೆ ವೆಚ್ಚ ₹8 ಕೋಟಿ!

102 ಕೆರೆಗಳಲ್ಲಿ ಅಳವಡಿಸಲಾಗುತ್ತಿರುವ ತೂಬುಗಳ ಕಾಮಗಾರಿಗೆ ವಿಸ್ತೃತ ಯೋಜನಾ ವರದಿ, ಯೋಜನಾ ನಿರ್ವಹಣೆ ಸಲಹೆ (ಪಿಎಂಸಿಗೆ) ಮತ್ತು ಇತರೆ ವೆಚ್ಚವಾಗಿ ಬಿಬಿಎಂಪಿ ₹8.22 ಕೋಟಿ ವೆಚ್ಚ ಮಾಡುತ್ತಿದೆ. ಸಾಮಾನ್ಯವಾಗಿ ಪಿಎಂಸಿಗೆ ಯೋಜನೆ ಶೇ 10ರಷ್ಟನ್ನು ನೀಡಲಾಗುತ್ತದೆ. ಅಂದರೆ ₹3.6 ಕೋಟಿಯಾಗುತ್ತದೆ. ಇನ್ನುಳಿದ ನಾಲ್ಕೂವರೆ ಕೋಟಿಗೂ ಹೆಚ್ಚು ಇತರೆ ವೆಚ್ಚವಾಗಿದೆ.



ಕೆರೆಗಳಲ್ಲಿ ಅಳವಡಿಸುವ ತೂಬುಗಳ ಮಾದರಿ



ರಾಜ್ಯದ 19 ಗಡಿ ಜಿಲ್ಲೆಗಳ ಕನ್ನಡ ಸಾಹಿತ್ಯ ಪರಿಷತ್ ಘಟಕಗಳಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಮಂಗಳವಾರ ತಲಾ ₹ 1 ಲಕ್ಷ ಅನುದಾನ ವಿತರಿಸಲಾಯಿತು. ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಷಿ, ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ ಮತ್ತೀಹಳ್ಳಿ ಇದ್ದರು (ಕುಳಿತವರು)

ಗಡಿ ಜಿಲ್ಲೆ: ತಲಾ ₹1 ಲಕ್ಷ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೆರೆ ರಾಜ್ಯಗಳಿಗೆ ಹೊಂದಿಕೊಂಡಿರುವ ಕರ್ನಾಟಕದ 19 ಗಡಿ ಜಿಲ್ಲೆಗಳ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕಗಳು, ಆಯಾ ಗಡಿಭಾಗಕ್ಕೆ ಸಂಬಂಧಿಸಿದ ವಿಶಿಷ್ಟವಾದ ವಿಷಯ ಆಯ್ಕೆ ಮಾಡಿಕೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ ಸಲಹೆ ನೀಡಿದರು.

ಕನ್ನಡ ನಾಡು-ನುಡಿ, ಸಂಸ್ಕೃತಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಆಯೋಜಿಸಲು ಎಲ್ಲ 19 ಗಡಿ ಜಿಲ್ಲೆಗಳ ಕನ್ನಡ ಸಾಹಿತ್ಯ ಪರಿಷತ್ ಘಟಕಗಳಿಗೆ ಪ್ರಾಧಿಕಾರದ ವತಿಯಿಂದ ತಲಾ ₹ 1 ಲಕ್ಷ ಅನುದಾನವನ್ನು ಮಂಗಳವಾರ ವಿತರಿಸಿ ಅವರು ಮಾತನಾಡಿದರು.

'ಗಡಿಭಾಗದ ಹಳ್ಳಿಯಲ್ಲಿ ಅಥವಾ ಗಡಿಗೆ ಹೊಂದಿಕೊಂಡ ಹೊರರಾಜ್ಯದ ಕನ್ನಡ ಪ್ರದೇಶದಲ್ಲಿ ಸ್ಥಳೀಯ ಸಾಂಸ್ಕೃತಿಕ ಮತ್ತು ಕಲಾಪ್ರತಿಭೆಯನ್ನು ಪ್ರೋತ್ಸಾಹಿಸಬೇಕಿದೆ. ಜೊತೆಗೆ, ಗಡಿಭಾಗದ ಜನರ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಕುರಿತು ವಿಚಾರಗೋಷ್ಠಿ, ಸಂವಾದಗಳನ್ನು ಅಲ್ಲಿನ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕಗಳು ಆಯೋಜಿಸಬೇಕು. ಅದಕ್ಕೆ ನೆರವಾಗುವ ಉದ್ದೇಶದಿಂದ ಈ ಅನುದಾನ ನೀಡಲಾಗಿದೆ. ಈ ಅನುದಾನದ ಜೊತೆಗೆ ಆಯಾ ಜಿಲ್ಲಾ ಘಟಕಗಳು ತಮ್ಮ ಸಂಪನ್ಮೂಲವನ್ನೂ ಕ್ರೋಡೀಕರಿಸಿ ಅರ್ಥಪೂರ್ಣವಾಗಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು' ಎಂದೂ ಅವರು ಮನವಿ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಷಿ ಮಾತನಾಡಿ, 'ಮುಂದಿನ ವರ್ಷಗಳಲ್ಲಿಯೂ ಗಡಿನಾಡ ಜಿಲ್ಲಾ ಸಾಹಿತ್ಯ ಪರಿಷತ್ ಘಟಕಗಳಿಗೆ ಪ್ರಾಧಿಕಾರದಿಂದ ಅನುದಾನ ನೀಡುವ ಸಂಪ್ರದಾಯ ಮುಂದುವರೆಸಬೇಕು' ಎಂದರು.

ಎಲ್ಲ 19 ಗಡಿ ಜಿಲ್ಲೆಗಳ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕಗಳ ಅಧ್ಯಕ್ಷರು ಮತ್ತು ಪ್ರತಿನಿಧಿಗಳಿಗೆ ಅನುದಾನದ ಹಂಚಿಕೆ ಪತ್ರ ಹಾಗೂ ಚೆಕ್‌ನ್ನು ಪ್ರಾಧಿಕಾರದ ಅಧ್ಯಕ್ಷರು ವಿತರಿಸಿದರು. ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ ಮತ್ತೀಹಳ್ಳಿ ಇದ್ದರು.

ಸಂಕ್ಷಿಪ್ತ ಸುದ್ದಿ

25ರಿಂದ 'ಅಕ್ಕರ ಗೊಟ್ಟಿಯ ಅಲಂಪಿನ ಇಂಪು'

ಬೆಂಗಳೂರು: ಕಮಲಾ ಹಂಪನಾ ಸಾಹಿತ್ಯ ವೇದಿಕೆ ಮತ್ತು ಕರ್ನಾಟಕ ಜೈನ ಅಸೋಸಿಯೇಷನ್ ಸಂಯುಕ್ತ ಆಶ್ರಯದಲ್ಲಿ 'ಅಕ್ಕರ ಗೊಟ್ಟಿಯ ಅಲಂಪಿನ ಇಂಪು' (ಸಾಹಿತ್ಯ ಗೋಷ್ಠಿಯ ಸೊಬಗಿನ ಸವಿ) ಎನ್ನುವ ಸಮಾವೇಶವು ಮಾರ್ಚ್ 25 ಹಾಗೂ 26ರಂದು ನಗರದಲ್ಲಿ ನಡೆಯಲಿದೆ.

ಕಮಲಾ ಹಂಪನಾ ಸಾಹಿತ್ಯ ವೇದಿಕೆಯ ಕಾರ್ಯದರ್ಶಿಗಳಾದ ರಾಜ್ಯಶ್ರೀ ಎಚ್.ಎನ್. ಹಾಗೂ ಕಾವ್ಯಶ್ರೀ ಎಚ್.ಎನ್. ಪ್ರಕಟಣೆಯ ಮೂಲಕ ಈ ವಿಷಯ ತಿಳಿಸಿದ್ದಾರೆ.

ಪೂರ್ವದ ಹಳಗನ್ನಡದಲ್ಲಿ ರಚಿತವಾದ ಕೃತಿಗಳು ಲಭ್ಯವಿಲ್ಲ. ಒಂಬತ್ತನೆಯ ಶತಮಾನದಿಂದ ಹದಿಮೂರನೆಯ ಶತಮಾನದವರೆಗೆ ಚಂಪೂಕಾವ್ಯಗಳ ಸುಗ್ಗಿಯ ಕಾಲವಿತ್ತು. ಈ ಕಾವ್ಯಗಳಲ್ಲಿ ಹುದುಗಿರುವ ಸತ್ವವನ್ನು ಹೊಸ ತಲೆಮಾರಿಗೆ ಪರಿಚಯಿಸುವ ಪ್ರಯತ್ನವಾಗಿ ಈ ಸಮಾವೇಶವನ್ನು ವೇದಿಕೆಯು ಆಯೋಜಿಸುತ್ತಿದೆ. ಸಮಾವೇಶ ನಡೆಯಲಿರುವ ಸ್ಥಳ ಹಾಗೂ ಗೋಷ್ಠಿಗಳ ಕುರಿತು ಮುಂದಿನ ಹೇಳಿಕೆಯಲ್ಲಿ ಮಾಹಿತಿ ಲಭ್ಯವಾಗಲಿದೆ.

ಇಂದಿನಿಂದ ಪ್ರವೇಶ ಪ್ರಾರಂಭ

ಬೆಂಗಳೂರು: ನಗರದ ಉನ್ನತಿ ಸೆಂಟರ್ 18ರಿಂದ 25 ವರ್ಷದವರೆಗಿನ ನಿರುದ್ಯೋಗಿಗಳಿಗೆ 35 ದಿನಗಳ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಬುಧವಾರದಿಂದ ಪ್ರವೇಶ ಪ್ರಾರಂಭವಾಗಲಿದೆ.

ಈ ತರಬೇತಿಗೆ ಯಾವುದೇ ವಿದ್ಯಾರ್ಹತೆ ನಿಗದಿಪಡಿಸಿಲ್ಲ. ಕನಿಷ್ಠ ಶುಲ್ಕ ಇರಲಿದೆ. ಸ್ಪೋಕನ್ ಇಂಗ್ಲಿಷ್, ಬೇಸಿಕ್ ಕಂಪ್ಯೂಟರ್ ಸೇರಿ ಕೌಶಲ ವೃದ್ಧಿಗೆ ಸಂಬಂಧಿಸಿದ ತರಬೇತಿಗಳನ್ನು ನೀಡಲಾಗುತ್ತದೆ. ಉದ್ಯೋಗವನ್ನು ಕೂಡ ಒದಗಿಸಿಕೊಡುವುದಾಗಿ ಕೇಂದ್ರವು ಭರವಸೆ ನೀಡಿದೆ.

ವಿಳಾಸ: ಉನ್ನತಿ ಸೆಂಟರ್, ನಂ.1, ದೇವಸ್ಥಾನದ ರಸ್ತೆ, ಎನ್‌ಜಿಇಎಫ್ ಬಡಾವಣೆ, (ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದ ಬಳಿ), ಸದಾನಂದನಗರ, ಬೆಂಗಳೂರು

ಸಂಪರ್ಕಕ್ಕೆ: 9980667191

ನಿಧನ ವಾರ್ತೆ

ಎನ್. ಪದ್ಮಾ



ನೆಲಮಂಗಲ: ಪಟ್ಟಣದ ಕೆರೆಬೀದಿಯ ನಿವಾಸಿ ಎನ್. ಪದ್ಮಾ (76) ಅವರು ವಯೋಸಹಜ ಅನಾರೋಗ್ಯದಿಂದ ಮಂಗಳವಾರ ಬೆಳಿಗ್ಗೆ ನಿಧನರಾದರು.

ಇವರಿಗೆ ಪತಿ ಎನ್.ನಂಜುಂಡ ಶಾಸ್ತ್ರಿ, ಇಬ್ಬರು ಪುತ್ರಿಯರು ಹಾಗೂ ಇಬ್ಬರು ಪುತ್ರರು ಇದ್ದಾರೆ.

ಅಶ್ವತ್ಥಮ್ಮ



ಬೆಂಗಳೂರು: ಅಬಕಾರಿ ಗುತ್ತಿಗೆದಾರರಾಗಿದ್ದ ದಿವಂಗತ ಎ. ಎಚ್. ಸಿದ್ದಗಂಗಪ್ಪ ಅವರ ಪತ್ನಿ ಅಶ್ವತ್ಥಮ್ಮ (82) ಅವರು ಇಲ್ಲಿನ ಮಾಗಡಿ ರಸ್ತೆಯ ಸ್ವಗೃಹದಲ್ಲಿ ಮಂಗಳವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪುತ್ರಿ ಹಾಗೂ ಐವರು ಪುತ್ರರಿದ್ದಾರೆ.

ಸುದ್ದಿ 2 ನಿಮಿಷ

'ಕಾಕಂಬಿ ರಫ್ತಿನಲ್ಲೂ ಅಕ್ರಮ'

ಬೆಂಗಳೂರು: 'ಅಬಕಾರಿ ಇಲಾಖೆಯಲ್ಲಿ ಕಾಕಂಬಿ ರಫ್ತಿನಲ್ಲೂ ಅಕ್ರಮ ನಡೆದಿದ್ದು, ಲೋಕಾಯುಕ್ತದಲ್ಲಿ ದೂರು ದಾಖಲಾಗಿದೆ. ಆದರೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಈ ಬಗ್ಗೆ ಚರ್ಚೆ ಮಾಡದೆ, ಟಿಪ್ಪು ವರ್ಸಸ್ ಸಾವರ್ಕರ್, ಟಿಪ್ಪು ವರ್ಸಸ್ ಅಬ್ಬಕ್ಕ ಬಗ್ಗೆ ಮಾತನಾಡುತ್ತಾರೆ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ ದೂರಿದರು.

ಕೆಪಿಸಿಸಿ ಮಾಧ್ಯಮ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಂಬೈಯ ಕೆ.ಎನ್. ರಿಸೋರ್ಸಸ್ ಎಂಬ ಕಂಪನಿ ಯಾವುದೇ ದಾಖಲೆ ಇಲ್ಲದೆ ಸೆಪ್ಟೆಂಬರ್‌ನಲ್ಲಿ 2 ಲಕ್ಷ ಟನ್ ರಫ್ತಿಗೆ ಅನುಮತಿ ಪಡೆದಿದ್ದಾರೆ. ಅಷ್ಟೇ ಅಲ್ಲ, ನಮ್ಮಲ್ಲಿ ಮಲ್ಪೆ ಬಂದರು ಇದ್ದರೂ ಗೋವಾದಿಂದ ರಫ್ತಿಗೆ ಅನುಮತಿ ನೀಡಿರುವುದೇಕೆ? ₹2 ಲಕ್ಷ ಕೋಟಿ ಎಂದು ಲೆಕ್ಕ ಹಾಕಿದರೂ ಶೇ 40 ಕಮಿಷನ್‌ನಂತೆ ₹80 ಕೋಟಿಗೆ ಡೀಲ್ ಆಗಿದೆ' ಎಂದು ದೂರಿದರು.

'ಈ ಸಂಬಂಧ ಅವರು ಆಡಿಯೊ ತುಣುಕೊಂದನ್ನು ಕೇಳಿಸಿದರು.

ಪಲ್ಯವನ್ನು ಅನ್ನದಂತೆ ಉಪಯೋಗಿಸಿ: ಡಾ.ಭುಜಂಗಶೆಟ್ಟಿ



ನೆಲಮಂಗಲ: ಸಕ್ಕರೆ ಅಂಶವಿರುವ ಅನ್ನ, ಧಾನ್ಯಗಳನ್ನು ತ್ಯಜಿಸಿ. ಪಲ್ಯವನ್ನು ಅನ್ನದಂತೆ ಉಪಯೋಗಿಸಿ. ಕಾಳುಗಳು, ಮೀನು, ಮಾಂಸ, ಮೊಟ್ಟೆಯ ಹಳದಿ ಭಾಗ ಸೇರಿಸಿ ದೇಹಕ್ಕೆ ಅನುಗುಣವಾಗಿ ತಿನ್ನಬೇಕು. ನಡಿಗೆ ವ್ಯಾಯಾಮ ಮಾಡಬೇಕು. ಕಾಫಿ, ಟೀಯನ್ನು ಸ್ವೀಟ್ನರ್ ಹಾಕಿಕೊಂಡು ಕುಡಿಯಬಹುದು. ಕ್ರಮೇಣ ಸಕ್ಕರೆ ಔಷಧಗಳನ್ನು ದೂರ ಮಾಡುತ್ತ ಬರಬೇಕು ಎಂದು ನೇತ್ರತಜ್ಞ ಡಾ.ಭುಜಂಗಶೆಟ್ಟಿ ತಿಳಿಸಿದರು.

ಲಯನ್ಸ್ ಸಂಸ್ಥೆ, ವೈದ್ಯಕೀಯ ಸಂಘ, ಔಷಧ ವ್ಯಾಪಾರಿಗಳ ಸಂಘ ಮತ್ತು ನಿವೃತ್ತ ನೌಕರರ ಸಂಘದ ಸಹಯೋಗದಲ್ಲಿ ನಡೆದ 'ಶುಗರ್‌ಗೆ ಹೇಳಿ ಗುಡ್‌ಬೈ' ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಎಣ್ಣೆ, ಬೆಣ್ಣೆ, ತುಪ್ಪ ಸೇವಿಸಿದರೆ ಕೊಲೆಸ್ಟ್ರಾಲ್ ಹೆಚ್ಚುತ್ತದೆ. ಹೃದಯಕ್ಕೆ ಒಳ್ಳೆಯದಲ್ಲ ಎಂಬ ತಪ್ಪು ಕಲ್ಪನೆಗಳಿವೆ. ಇವೆಲ್ಲ ಮಾನವನ ದೇಹಕ್ಕೆ ಅವಶ್ಯಕ' ಎಂದರು. ಲಯನ್ಸ್ ಸಂಸ್ಥೆ ಅಧ್ಯಕ್ಷ ಡಾ.ಜಿ.ಎ. ವೆಂಕಟೇಶುಲು, ಲಯನ್ಸ್ ಸಂಸ್ಥೆ ಜಿಲ್ಲಾ ಪಾಲಕ ರಾಜಶೇಖರಯ್ಯ, ಕಾರ್ಯದರ್ಶಿ ಡಾ.ರಾಜೇಂದ್ರ ಪ್ರಸಾದ್, ಹರ್ಷ ಸಮೂಹ ಸಂಸ್ಥೆಯ ಅಧ್ಯಕ್ಷ ಎಸ್. ಶಿವಕುಮಾರ್, ಡಾ.ನಸೀರ್ ಅಬ್ಬಾಸ್, ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷ ವಾದಿರಾಜ್ ಹಾಗೂ ಪುಟ್ಟಯ್ಯ ಇದ್ದರು.

ಚುಟುಕು ಸುದ್ದಿ

ಗ್ರಂಥಾಲಯಗಳಿಗೆ ₹121 ಕೋಟಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಗ್ರಂಥಾಲಯಗಳಿಗೆ 2023–24ನೇ ಸಾಲಿನ ವೆಚ್ಚಗಳಿಗೆ ₹121.18 ಕೋಟಿ ಅನುಮೋದನೆ ನೀಡಲಾಗಿದೆ.

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರ ಗ್ರಂಥಾಲಯ ಪ್ರಾಧಿಕಾರದ ಐದು ವಲಯಗಳ ಆಯವ್ಯಯ ಸಭೆಯಲ್ಲಿ ಮಂಗಳವಾರ ನಿರ್ಣಯ ಕೈಗೊಳ್ಳಲಾಯಿತು.

ಕಿದ್ವಾಯಿ ಆವರಣ, ಬಾಲಭವನದ ಹೊಸ ಆಡಿಟೋರಿಯಂನಲ್ಲಿ ಹೊಸ ಗ್ರಂಥಾಲಯ ಸ್ಥಾಪಿಸಲು ಸಭೆಯಲ್ಲಿ ಸೂಚಿಸಲಾಯಿತು. ಹೊಸ ಕಟ್ಟಡ ನಿರ್ಮಿಸಲು ಸ್ವಂತ ಆದಾಯ ಹೆಚ್ಚಿಸಿಕೊಳ್ಳಲು ಸಲಹೆ ನೀಡಲಾಯಿತು.

ಪಶ್ಚಿಮವಲಯದಲ್ಲಿ ಡಾ. ವಿಷ್ಣುವರ್ಧನ್ ಸಭಾಂಗಣವಿದ್ದು, ಅಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳುವವರಿಗೆ ಪ್ರತಿವಾರ 2 ದಿನ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡಬೇಕು. ಪ್ರತಿ ವಲಯಕ್ಕೆ ಒಂದು ಮೊಬೈಲ್ ಗ್ರಂಥಾಲಯ ವ್ಯವಸ್ಥೆ ಕಲ್ಪಿಸಲು ವ್ಯಾನ್ ಖರೀದಿ, ಮಕ್ಕಳ ಪ್ರತಿಭೆ ಗುರುತಿಸಲು 'ಮೇಕರ್ಸ್ ಸ್ಪೇಸ್' ಯೋಜನೆ ಜಾರಿ, ಗ್ರಂಥಾಲಯಗಳ ಸ್ವಚ್ಛತಾ ಸಿಬ್ಬಂದಿ, ಸಹಾಯಕರಿಗೆ ಕನಿಷ್ಠ ವೇತನ ಪಾವತಿಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಬಿಬಿಎಂಪಿ ವತಿಯಿಂದ ಗ್ರಂಥಾಲಯ ಇಲಾಖೆಗೆ ಸೆಸ್ ಮೊತ್ತ ಪಾವತಿಸಲು ಎಸ್ಕ್ರೋ ಖಾತೆ ತೆರೆಯಲು ಸೂಚಿಸಲಾಯಿತು.

ಅಂಬಾನಿ ಕುಟುಂಬಕ್ಕೆ 'ಜೆಡ್ ಪ್ಲಸ್' ಭದ್ರತೆ: 'ಸುಪ್ರೀಂ' ಸಮ್ಮತಿ

ನವದೆಹಲಿ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಮತ್ತು ಅವರ ಕುಟುಂಬದವರಿಗೆ ದೇಶ, ವಿದೇಶಗಳಲ್ಲಿ 'ಜೆಡ್ ಪ್ಲಸ್' ಭದ್ರತೆ ಒದಗಿಸುವಂತೆ, ಅದಕ್ಕೆ ಅವರಿಂದಲೇ ವೆಚ್ಚ ಭರಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಚಿತ್ರಾವಳಿ



ನವದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನ ಡೆಪ್ಯುಟಿ ಸ್ಪೀಕರ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ 'ವಿಜಯವಾಣಿ' ಸಹಾಯಕ ಸಂಪಾದಕ ರುದ್ರಣ್ಣ ಹರ್ತಿಕೋಟೆ ಅವರಿಗೆ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷೆ ರಂಜನಾ ಪ್ರಕಾಶ್ ದೇಸಾಯ್ ಅವರು 'ಉತ್ಕೃಷ್ಟ ಪತ್ರಿಕೋದ್ಯಮದ ರಾಷ್ಟ್ರೀಯ ಪ್ರಶಸ್ತಿ' ನೀಡಿ ಗೌರವಿಸಿದರು



ಬಿ.ಎಂ.ಶ್ರೀ. ಪ್ರತಿಷ್ಠಾನ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎನ್. ಜಗದೀಶ್ ಕೊಪ್ಪ ಅವರಿಗೆ 'ವಿ.ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ'ಯನ್ನು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಪ್ರದಾನ ಮಾಡಿದರು. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು, ಅಧ್ಯಕ್ಷ ಬೈರಮಂಗಲ ರಾಮೇಗೌಡ ಹಾಗೂ ಪತ್ರಕರ್ತೆ ಆರ್. ಪೂರ್ಣಿಮಾ ಇದ್ದಾರೆ. – ಪ್ರಜಾವಾಣಿ ಚಿತ್ರ



ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಪ್ರಯುಕ್ತ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನವದೆಹಲಿಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಕ್ಷೇತ್ರದಲ್ಲಿನ ಅತ್ಯುತ್ತಮ ಸಾಧನೆಗೆ ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಮಂಡಳಿ ನೀಡುವ ರಾಷ್ಟ್ರ ಮಟ್ಟದ ಪ್ರಶಸ್ತಿಯನ್ನು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎ.ಎಂ. ರಮೇಶ್ ಅವರಿಗೆ ಪ್ರದಾನ ಮಾಡಿದರು. ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಪ್ರೊ.ಎ.ಕೆ. ಸೂದ್, ಮಾಜಿ ಪ್ರಧಾನ ವೈಜ್ಞಾನಿಕ ಸಲಹೆಗಾರ ಪ್ರೊ.ಕೆ. ವಿಜಯರಾಘವನ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಪ್ರೊ.ಎಸ್. ಚಂದ್ರಶೇಖರ್ ಇದ್ದರು. ಪ್ರಶಸ್ತಿ ₹5 ಲಕ್ಷ ನಗದು ಒಳಗೊಂಡಿದೆ.

ಪರಿಚಯಸ್ಥರಿಂದಲೇ ಮಾರಕಾಸ್ತ್ರಗಳಿಂದ ಹೊಡೆದು ಕೃತ್ಯ

ಏಜೆನ್ಸಿ ಮಾಲೀಕನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಕಮ್ಯುನಿಕೇಷನ್ ಜಾಹೀರಾತು ಏಜೆನ್ಸಿ ಮಾಲೀಕ ಲಿಯಾಕತ್ ಅಲಿ ಖಾನ್ (44) ಅವರನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.



ಲಿಯಾಕತ್

'ಚಂದ್ರಾ ಲೇಔಟ್ ದುರ್ಗಾ ಪರಮೇಶ್ವರಿ ದೇವಸ್ಥಾನ ಬಳಿಯ ನಿವಾಸಿ ಲಿಯಾಕತ್, ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ವಾಸವಿದ್ದರು. ನಾಯಂಡನಹಳ್ಳಿಯ ಚೆಟ್ಟೀಸ್ ಬಂಕ್ ಸಮೀಪದಲ್ಲಿರುವ ಮನೆಯಲ್ಲಿ ಸೋಮವಾರ ರಾತ್ರಿ ಲಿಯಾಕತ್ ಮೃತದೇಹ ಪತ್ತೆಯಾಗಿದೆ. ಮಗ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಲಿಯಾಕತ್ ಅವರು 20 ವರ್ಷಗಳಿಂದ ಗಂಗೊಂಡನಹಳ್ಳಿಯಲ್ಲಿ ರಾಯಲ್ ಕಮ್ಯುನಿಕೇಷನ್ ಏಜೆನ್ಸಿ ನಡೆಸುತ್ತಿದ್ದರು. ನಿತ್ಯವೂ ಬೆಳಿಗ್ಗೆ ನಾಗರಬಾವಿಯಲ್ಲಿರುವ ಜಿಮ್‌ಗೆ ಹೋಗುತ್ತಿದ್ದ ಲಿಯಾಕತ್, ವ್ಯಾಯಾಮ ಮುಗಿಸಿ ಕಚೇರಿಗೆ ತೆರಳುತ್ತಿದ್ದರು. ರಾತ್ರಿ 11 ಗಂಟೆ ಸುಮಾರಿಗೆ ವಾಪಸು ಮನೆಗೆ ಹೋಗುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಸೋಮವಾರ ಜಿಮ್‌ಗೆ ಹೋಗುವುದಾಗಿ ಹೇಳಿ ಹೋಗಿದ್ದ ಲಿಯಾಕತ್, ರಾತ್ರಿ 12 ಗಂಟೆಯಾದರೂ ಮನೆಗೆ ವಾಪಸು ಬಂದಿರಲಿಲ್ಲ. ಗಾಬರಿಗೊಂಡಿದ್ದ ಮನೆಯವರು, ಲಿಯಾಕತ್ ಅವರಿಗಾಗಿ ಹುಡುಕಾಟ ಆರಂಭಿಸಿದ್ದರು. ಜಿಮ್‌ಗೆ ಹೋಗಿ ವಿಚಾರಿಸಿದಾಗ, ಲಿಯಾಕತ್ ಬಂದಿಲ್ಲವೆಂದು ಹೇಳಿದ್ದರು. ಕಚೇರಿಗೆ ಹೋಗಿ ನೋಡಿದಾಗ, ಅಲ್ಲಿಯೂ ಅವರು ಇರಲಿಲ್ಲ.'

'ನಾಯಂಡನಹಳ್ಳಿಯ ಚೆಟ್ಟೀಸ್ ಬಂಕ್ ಸಮೀಪದಲ್ಲಿರುವ ಲಿಯಾಕತ್ ಅವರಿಗೆ ಸೇರಿದ್ದ ಮನೆಗೆ ಹೋಗಿದ್ದ ಮಗ, ಬಾಗಿಲು ತೆರೆದು ಕೊಠಡಿಯಲ್ಲಿ ಪರಿಶೀಲಿಸಿದ್ದ. ರಕ್ತಸಿಕ್ತ ಸ್ಥಿತಿಯಲ್ಲಿ ಲಿಯಾಕತ್ ಮೃತದೇಹ ಕಂಡಿತ್ತು' ಎಂದು ಪೊಲೀಸರು ಹೇಳಿದರು.

ಹಣಕಾಸು ವಿಚಾರಕ್ಕೆ ಕೊಲೆ: 'ಗಂಗೊಂಡನಹಳ್ಳಿ ನಿವಾಸಿಗಳಾದ ವಸೀಮ್ ಮತ್ತು ಜೋಹರ್ ಎಂಬುವರು ಲಿಯಾಕತ್ ಬಳಿ ಹಣ ಪಡೆದಿದ್ದರು. ಹಣಕಾಸು ವಿಚಾರವಾಗಿ ಕೊಲೆ ನಡೆದಿರುವ ಅನುಮಾನವಿದೆ. ಜೊತೆಗೆ, ಕಚೇರಿ ಕೆಲಸಗಾರ ಇಲಿಯಾಜ್ ಖಾನ್ ಮೇಲೂ ಸಂಶಯ ಇರುವುದಾಗಿ ಕುಟುಂಬದವರು ತಿಳಿಸಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ವಸೀಮ್, ಜೋಹರ್, ಇಲಿಯಾಜ್ ಸದ್ಯ ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ. ಕೊಲೆಗೆ ನಿಖರ ಕಾರಣವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ' ಎಂದು ಹೇಳಿದರು.

ಆತ್ಮಹತ್ಯೆಗೆ ಯತ್ನಿಸಿದ ಆರೋಪಿ?

ಲಿಯಾಕತ್ ಅಲಿ ಖಾನ್ ಕೊಲೆ ಪ್ರಕರಣದ ಆರೋಪಿ ಎನ್ನಲಾದ ಇಲಿಯಾಜ್, ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಸದ್ಯ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಕೊಲೆ ಪ್ರಕರಣದಲ್ಲಿ ಇಲಿಯಾಜ್ ಮೇಲೆ ಅನುಮಾನವಿತ್ತು. ಆತನಿಗಾಗಿ ಹುಡುಕಾಟ ನಡೆದಿತ್ತು. ಆತ ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸಂಗತಿ ಮಂಗಳವಾರ ಸಂಜೆ ಗೊತ್ತಾಯಿತು' ಎಂದು ಪೊಲೀಸರು ಹೇಳಿದರು. 'ಔಷಧ ಮಳಿಗೆಯೊಂದರಲ್ಲಿ ಮಾತ್ರೆ ಖರೀದಿಸಿದ್ದ ಇಲಿಯಾಜ್, ಅವುಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಆತನ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ವಶಕ್ಕೆ ಪಡೆದು ವಿಚಾರಣೆ ನಡೆಸಬೇಕಿದೆ' ಎಂದು ತಿಳಿಸಿದರು.

ದರ್ಗಾ ಚಾವಣಿ ಕುಸಿತ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ


ಬೆಂಗಳೂರು: ಅವೆನ್ಯೂ ರಸ್ತೆಯಲ್ಲಿರುವ ಹಜರತ್ ಮಹಮ್ಮದ್ ಶಾ ಖಾದ್ರಿ ದರ್ಗಾ ಕಟ್ಟಡದ ಚಾವಣಿ ಕುಸಿದು ಕಾರ್ಮಿಕ ಅಜರ್ ಉಲ್ ಹಕ್ (21) ಎಂಬುವವರು ಮಂಗಳವಾರ ಮೃತಪಟ್ಟಿದ್ದಾರೆ.

'ಶಿಥಿಲಗೊಂಡಿದ್ದ ದರ್ಗಾದ ಹಳೇ ಕಟ್ಟಡ ತೆರವುಗೊಳಿಸುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ಕಾರ್ಮಿಕ ಶಾಕಿಬ್‌ವುದ್ದೀನ್ ಗಾಯಗೊಂಡಿದ್ದು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಸಿಟಿ ಮಾರ್ಕೆಟ್ ಪೊಲೀಸರು ಹೇಳಿದರು.

'ಪಶ್ಚಿಮ ಬಂಗಾಳದ ಅಜರ್ ಕೆಲಸ ಹುಡುಕಿಕೊಂಡು ಸ್ನೇಹಿತರ ಜೊತೆ ನಗರಕ್ಕೆ ಬಂದಿದ್ದರು. ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಅವಘಡದಲ್ಲಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

ಅವಶೇಷಗಳಡಿ ಸಿಲುಕಿದ್ದ ಕಾರ್ಮಿಕರು: 'ದರ್ಗಾ ಕಟ್ಟಡದ ತೆರವು ಕೆಲಸಕ್ಕೆ ಬಂದಿದ್ದ ಕಾರ್ಮಿಕರು, ಚಾವಣಿಯ ಒಂದೊಂದೇ ವಸ್ತುಗಳನ್ನು ತೆಗೆಯುತ್ತಿದ್ದರು. ಮಧ್ಯಾಹ್ನ 4.30ರ ಸುಮಾರಿಗೆ ಚಾವಣಿ ಏಕಾಏಕಿ ಕುಸಿದಿತ್ತು. ಅದರ ಜೊತೆ ಅಕ್ಕ–ಪಕ್ಕದ ಗೋಡೆಗಳೂ ಭಾಗಶಃ ಕುಸಿದಿದ್ದವು. ಅವಶೇಷಗಳಡಿ ಕಾರ್ಮಿಕರು ಸಿಲುಕಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಸಹಾಯಕ್ಕೆ ಹೋಗಿದ್ದ ಸ್ಥಳೀಯರು, ಕಾರ್ಮಿಕರನ್ನು ರಕ್ಷಿಸಿ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದಿದ್ದರು.



ಅವೆನ್ಯೂ ರಸ್ತೆಯಲ್ಲಿರುವ ಹಜರತ್ ಮಹಮ್ಮದ್ ಶಾ ಖಾದ್ರಿ ದರ್ಗಾದ ಚಾವಣಿ ಗೋಡೆಗಳ ಸಮೇತ ಕುಸಿದಿರುವುದು

ಈ ಪೈಕಿ ಅಜರ್ ಮೃತಪಟ್ಟಿದ್ದಾರೆ. ಶಾಕೀಬ್‌ವುದ್ದೀನ್ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ಘಟನೆ ಬಗ್ಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

ಚರಂಡಿಯಲ್ಲಿ ಮೃತದೇಹ

ಬೆಂಗಳೂರು: ಜಗಜೀವನ್‌ರಾಮ್ ನಗರ ಠಾಣೆ ವ್ಯಾಪ್ತಿಯ ಚರಂಡಿಯೊಂದರಲ್ಲಿ ಮಧುಸೂದನ್ (33) ಎಂಬುವವರ ಮೃತದೇಹ ಮಂಗಳವಾರ ಪತ್ತೆಯಾಗಿದ್ದು, ಸಾವಿನ ಕುರಿತು ಅನುಮಾನ ವ್ಯಕ್ತವಾಗಿದೆ.

'ಮಾರ್ಕಂಡೇಶ್ವರನಗರದ ನಿವಾಸಿ ಮಧುಸೂದನ್, ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ವಾಸವಿದ್ದರು. 9 ದಿನಗಳಿಂದ ಅವರು ನಾಪತ್ತೆಯಾಗಿದ್ದರು. ಇದೀಗ ಅವರ ಮೃತದೇಹ ಪತ್ತೆಯಾಗಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು. 'ಕೆಲಸ ನಿಮಿತ್ತ ಮನೆಯಿಂದ ಹೊರಗೆ ಬಂದಿದ್ದ ಮಧುಸೂದನ್, ವಾಪಸು ಹೋಗಿರಲಿಲ್ಲ. ಗಾಬರಿಗೊಂಡ ಮನೆಯವರು, ಹಲವೆಡೆ ಹುಡುಕಾಡಿದ್ದರು. 9 ದಿನಗಳ ನಂತರ ನಾಪತ್ತೆ ಬಗ್ಗೆ ದೂರು ನೀಡಲು ಠಾಣೆಗೆ ಬಂದಿದ್ದರು. ಅದೇ ಸಮಯಕ್ಕೆ ಚರಂಡಿಯಲ್ಲಿ ಮೃತದೇಹ ಸಿಕ್ಕ ಮಾಹಿತಿ ಲಭ್ಯವಾಗಿತ್ತು. ಸ್ಥಳಕ್ಕೆ ಹೋದ ಸಂಬಂಧಿಕರು, ಮೃತದೇಹ ಗುರುತಿಸಿದರು' ಎಂದು ತಿಳಿಸಿದರು.

'ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಅದರ ವರದಿ ಬಂದ ನಂತರ, ಸಾವಿಗೆ ನಿಖರ ಕಾರಣ ತಿಳಿಯಲಿದೆ' ಎಂದು ಪೊಲೀಸರು ಹೇಳಿದರು.

ಸಂಚಾರ ಠಾಣೆ ಎಎಸ್‌ಐ ಸಾವು

ಬೆಂಗಳೂರು: ಬಸವೇಶ್ವರ ವೃತ್ತದಲ್ಲಿ (ಚಾಲುಕ್ಯ) ಕರ್ತವ್ಯದಲ್ಲಿದ್ದ ವೇಳೆ ಆಟೊವೊಂದು ಗುದ್ದಿ ಗಾಯಗೊಂಡಿದ್ದ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ನಾಗರಾಜ್ (56) ಅವರು ಮಂಗಳವಾರ ಮೃತಪಟ್ಟಿದ್ದಾರೆ.

'ಹೈಗ್ರೌಂಡ್ಸ್ ಸಂಚಾರ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ ನಾಗರಾಜ್ ಅವರನ್ನು ಫೆ. 26ರಂದು ಬಸವೇಶ್ವರ ವೃತ್ತದಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಶಿವಕುಮಾರ್ ಎಂಬಾತ ಚಲಾಯಿಸುತ್ತಿದ್ದ ಆಟೊ, ನಾಗರಾಜ್ ಅವರಿಗೆ ಗುದ್ದಿತ್ತು' ಎಂದು ಪೊಲೀಸರು ಹೇಳಿದರು. 'ತಲೆಗೆ ಪೆಟ್ಟಾಗಿದ್ದರಿಂದ ರಕ್ತ ಹೆಪ್ಪುಗಟ್ಟಿತ್ತು. ಅವರ ಮಿದುಳು ಸಹ ನಿಷ್ಕ್ರಿಯಗೊಂಡಿತ್ತು. ನಾಗರಾಜ್ ಅವರ ಅಂಗಾಂಗ ದಾನದ ಬಗ್ಗೆ ವೈದ್ಯರು ಸಲಹೆ ನೀಡಿದ್ದಾರೆ. ಆದರೆ, ಕುಟುಂಬದವರು ಈ ಬಗ್ಗೆ ಯಾವುದೇ ನಿರ್ಧಾರ ತಿಳಿಸಿಲ್ಲ' ಎಂದರು.

ಶಿಕ್ಷಕಿ ಕೂಡಿಹಾಕಿ ಬಾಲಕಿ ಪರಾರಿ: ಶಿಶುಪಾಲನಾ ಕೇಂದ್ರದಲ್ಲಿದ್ದ 17 ವರ್ಷದ ಬಾಲಕಿಯೊಬ್ಬಳು ಶಿಕ್ಷಕಿಯನ್ನು ಶೌಚಾಲಯದಲ್ಲಿ ಕೂಡಿಹಾಕಿ ಪರಾರಿಯಾಗಿದ್ದು, ಈ ಸಂಬಂಧ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶಿಶು ಪಾಲನಾ ಕೇಂದ್ರವೊಂದರ ಶಿಕ್ಷಕಿ ದೂರು ನೀಡಿದ್ದಾರೆ. ಪರಾರಿಯಾಗಿರುವ ಬಾಲಕಿಯನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

16 ಬಾರಿ ಇರಿದು ಯುವತಿ ಹತ್ಯೆ

ಬೆಂಗಳೂರು: ಜೀವನ್‌ಬಿಮಾನಗರ ಠಾಣೆ ವ್ಯಾಪ್ತಿಯಲ್ಲಿ ಲೀಲಾ ಪವಿತ್ರಾ (25) ಎಂಬುವರನ್ನು ಚಾಕುವಿನಿಂದ 16 ಬಾರಿ ಇರಿದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಆರೋಪಿ ದಿನಕರ್ (28) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ಲೀಲಾ ಪವಿತ್ರಾ, ಎಂ.ಎಸ್ಸಿ ಪದವೀಧರೆ. ಮುರುಗೇಶಪಾಳ್ಯದ ಲ್ಯಾಬೊರೇಟರಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಮಂಗಳವಾರ ಸಂಜೆ ಕೆಲಸ ಮುಗಿಸಿ ಕಚೇರಿಯಿಂದ ಹೊರಬಂದಾಗ ಅವರ ಮೇಲೆ ಆರೋಪಿ ದಾಳಿ ಮಾಡಿದ್ದ' ಎಂದು ಪೊಲೀಸರು ಹೇಳಿದರು.



ಲೀಲಾ ಪವಿತ್ರಾ



ದಿನಕರ್

'ಆರೋಪಿ ದಿನಕರ್, ಆಂಧ್ರ ಪ್ರದೇಶದವ. ದೊಮ್ಮಲೂರು ಬಳಿಯ ಲ್ಯಾಬೊರೇಟರಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಲೀಲಾ ಪವಿತ್ರಾ ಹಾಗೂ ದಿನಕರ್, ಐದು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಮದುವೆಯಾಗಲು ತೀರ್ಮಾನಿಸಿದ್ದರು. ಆದರೆ, ಜಾತಿ ಬೇರೆಯಾಗಿದ್ದರಿಂದ ಮದುವೆಗೆ ಯುವತಿ ಕಡೆಯವರು ಒಪ್ಪಿರಲಿಲ್ಲ' ಎಂದರು.

'ದಿನಕರ್ ಜೊತೆ ಮಾತನಾಡದಂತೆ ಪೋಷಕರು ಯುವತಿಗೆ ತಾಕೀತು ಮಾಡಿದ್ದರು. ಹೀಗಾಗಿ, ಯುವತಿ ಆರೋಪಿಯಿಂದ ಅಂತರ ಕಾಯ್ದುಕೊಳ್ಳಲಾರಂಭಿಸಿದ್ದರು. ಸಿಟ್ಟಾದ ಆರೋಪಿ, ಲೀಲಾ ಪವಿತ್ರಾ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ.'

'ಲೀಲಾ ಪವಿತ್ರಾ ಕಚೇರಿಯಿಂದ ಹೊರಬರುತ್ತಿದ್ದಂತೆ ಅಡ್ಡಗಟ್ಟಿ, ಹೊಟ್ಟೆಗೆ ಚಾಕು ಇರಿದಿದ್ದ. ನಂತರ, ಎದೆ, ಕುತ್ತಿಗೆ ಸೇರಿ ದೇಹದ 16 ಕಡೆ ಚಾಕು ಇರಿದಿದ್ದ. ತೀವ್ರ ರಕ್ತಸ್ರಾವದಿಂದ ಯುವತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಹೇಳಿದರು.

ಆನ್‌ಲೈನ್ ಬ್ಯಾಂಕಿಂಗ್ ಹ್ಯಾಕ್: ₹ 31.76 ಲಕ್ಷ ವಂಚನೆ

ಬೆಂಗಳೂರು: ಮಹಿಳಾ ಉದ್ಯಮಿಯೊಬ್ಬರ ಆನ್‌ಲೈನ್ ಬ್ಯಾಂಕಿಂಗ್ ಸೇವೆಯನ್ನು ಹ್ಯಾಕ್ ಮಾಡಿರುವ ಸೈಬರ್ ವಂಚಕರು, ₹ 31.76 ಲಕ್ಷ ವರ್ಗಾಯಿಸಿಕೊಂಡಿದ್ದಾರೆ. ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜಯನಗರ ನಿವಾಸಿಯಾದ 46 ವರ್ಷದ ಮಹಿಳೆಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ದೂರುದಾರರು, ಆನ್‌ಲೈನ್ ಬ್ಯಾಂಕಿಂಗ್ ಸೇವೆಗೆ ನೋಂದಣಿ ಮಾಡಿಕೊಂಡಿದ್ದಾರೆ. ತಮ್ಮ ನಿತ್ಯದ ವ್ಯವಹಾರವನ್ನು ಆನ್‌ಲೈನ್ ಮೂಲಕ ನಡೆಸುತ್ತಿದ್ದರು' ಎಂದು ತಿಳಿಸಿದರು.

'ದೂರುದಾರರ ಆನ್‌ಲೈನ್ ಬ್ಯಾಂಕಿಂಗ್ ಸೇವೆಯನ್ನು ಇತ್ತೀಚೆಗೆ ಹ್ಯಾಕ್ ಮಾಡಿರುವ ವಂಚಕರು, ₹ 31.76 ಲಕ್ಷವನ್ನು ಆರ್‌ಟಿಜಿಎಸ್ ಮೂಲಕ ಬೇರೊಂದು ಖಾತೆಗೆ ವರ್ಗಾಯಿಸಿಕೊಂಡಿದ್ದಾರೆ. ಹಣ ವರ್ಗಾವಣೆ ಬಗ್ಗೆ ದೂರುದಾರರಿಗೆ ಯಾವುದೇ ಮಾಹಿತಿ ಬಂದಿರಲಿಲ್ಲ. ಇತ್ತೀಚೆಗೆ ಖಾತೆ ಪರಿಶೀಲನೆ ವೇಳೆ ವಂಚನೆ ಗಮನಕ್ಕೆ ಬಂದಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರರ ಯೂಸರ್ ನೇಮ್ ಹಾಗೂ ಪಾಸ್‌ವರ್ಡ್ ಹ್ಯಾಕ್ ಮಾಡಿರುವ ವಂಚಕರು, ಅದನ್ನು ಬಳಸಿಕೊಂಡು ಹಣ ವರ್ಗಾಯಿಸಿಕೊಂಡಿದ್ದಾರೆ. ಹೊರ ರಾಜ್ಯದ ಆರೋಪಿಗಳು ಕೃತ್ಯ ಎಸಗಿರುವ ಶಂಕೆ ಇದೆ. ಹಣ ವರ್ಗಾವಣೆಯಾದ ಬ್ಯಾಂಕ್ ಖಾತೆ ಸಂಖ್ಯೆ ಆಧರಿಸಿ ಆರೋಪಿಗಳ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ತಿಳಿಸಿದರು.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ,
(ಜಿಲ್ಲಾ ನಗರಾಭಿವೃದ್ಧಿ ಕೋಶ) ಹಾವೇರಿ ಜಿಲ್ಲೆ, ಹಾವೇರಿ–581110
☎ : 08375-249097 e-mail : dc_haveri@yahoo.co.in
ನಂ:ಮಸ (04)/ನಹ–4/ವಹಿ–05/2022–23 ದಿನಾಂಕ : 23–02–2023

ವೈದ್ಯಕೀಯ ಕಾಲೇಜೊಂದರ ಮೊದಲ ವರ್ಷದ ಸ್ನಾತಕೋತ್ತರ ಕೋರ್ಸ್‌ನ ವಿದ್ಯಾರ್ಥಿನಿಯು, ತನ್ನ ಕಾಲೇಜಿನ ಹಿರಿಯ ಸಹಪಾಠಿಗಳ ಕಿರುಕುಳ ತಾಳಲಾರದೆ ಫೆಬ್ರುವರಿ 22ರಂದು ವಾರಂಗಲ್‌ನ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅವರು ಫೆ. 26ರಂದು ‘ಎನ್‌ಐಎಂಎಸ್’ ಆಸ್ಪತ್ರೆಯಲ್ಲಿ ಮೃತಪಟ್ಟರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿರಿಯ ವಿದ್ಯಾರ್ಥಿ, ಪುರುಷ ವೈದ್ಯರೊಬ್ಬರನ್ನು ಫೆ. 24ರಂದು ಬಂಧಿಸಲಾಗಿದೆ.

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17392
ಇಂದಿನ ಅಂತ್ಯ	17303
▼	88
ದಿನದ ಕನಿಷ್ಠ	17440

ವಿನಿಮಯ ದರ

$ ಡಾಲರ್	82.58
£ ಪೌಂಡ್	99.8
€ ಯುರೊ	87.65
¥ ಯೆನ್ (100ಕ್ಕೆ)	60.39

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1690(1690)
ಸೋಯಾ (ರಿಫೈನ್ಡ್)	₹1110(1120)
ಸೂರ್ಯಕಾಂತಿ (ರಿಫೈನ್ಡ್)	₹1135(1150)
ಪಾಮೋಲಿನ್	₹957(963)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1,000-1,600
ಮಧ್ಯಮ	₹700-1,000
ಸಣ್ಣ	₹200-500

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹116000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹139.50
ಆರ್ಎಸ್ಎಸ್-5	₹134
ಗುಡ್ ಲಾಟ್	₹129

ಕೊಬ್ಬರಿ ಧಾರಣೆ

ಕೆ.ಆರ್. ಪೇಟೆ (ಇತರ)	₹8100-8100
ತುರುವೇಕೆರೆ	₹9500-10000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹ 338-623
ದ್ವಿತಳಿ (ಬಿ.ವಿ)	₹271-689

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	400-450
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	650-700
ಜರಡಿ	800 - 900
ಹೆರಕಿದ್ದು	1,250-1,300
ಹಸಿರು ಸಾಧಾರಣ	900-1000
ಹಸಿರು ಉತ್ತಮ	1300-1400
ಹಸಿರು ಅತಿ ಉತ್ತಮ	1500-1,550
ಕಾಳು ಮೆಣಸು -	475

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	22500-40000
ಹಳತು	48000-54500
ಚನ್ನಗಿರಿ	
ರಾಶಿ	44069-46381
ಕಾರ್ಕಳ	
ಹೊಸತು	30000-40000
ಹಳತು	40000-54500
ಕುಂದಾಪುರ	
ಹಳೆಚಾಲಿ	44000-44500
ಹೊಸಚಾಲಿ	35000-36000
ಮಡಿಕೇರಿ	
ಹಸಿ	40545-40545
ಸಾಗರ	
ಬಿಳಿಗೋಟು	27011-27800
ಚಾಲಿ	26099-35529
ಕೋಕ	28099-28099
ಕೆಂಪುಗೋಟು	29699-35889
ರಾಶಿ	41099-45799
ಸಿಪ್ಪೆಗೋಟು	4590-19019
ಶಿವಮೊಗ್ಗ	
ಬೆಟ್ಟೆ	46569-53199
ಗೊರಬಲು	16505-32809
ರಾಶಿ	32888-46199
ಸರಕು	47569-82230
ಸಿದ್ದಾಪುರ	
ಬಿಳಿಗೋಟು	26899-32399
ಚಾಲಿ	35899-38200
ಕೋಕ	26099-32000
ಹೊಸಚಾಲಿ	32000-36899
ಕೆಂಪುಗೋಟು	26689-33189
ರಾಶಿ	42419-45739
ತಟ್ಟಿಬೆಟ್ಟೆ	37789-42169
ಶಿರಸಿ	
ಬೆಟ್ಟೆ	31099-42861
ಬಿಳಿಗೋಟು	21919-32899
ಚಾಲಿ	31899-36699
ಕೆಂಪುಗೋಟು	24796-35223
ರಾಶಿ	38699-45899
ಯಲ್ಲಾಪುರ	
ಬಿಳಿಗೋಟು	24612-34699
ಕೋಕ	18612-31899
ಹಳೆಚಾಲಿ	36250-40799
ಹೊಸಚಾಲಿ	34499-36150
ಕೆಂಪುಗೋಟು	28429-33199
ರಾಶಿ	42319-50000
ತಟ್ಟಿಬೆಟ್ಟೆ	38242-44070

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,900	15800	15850	186.45ಸೆಂಟ್ಸ್
ಎಸಿ	7980	7600	7000	
ಆರ್‌ಪಿ	11,050	11200	10900	ಲಂಡನ್
ಆರ್‌ಸಿ	5380	205	5200	2133ಡಾಲರ್ಸ್

ಇಮ್ರಾನ್ ಖಾನ್‌ಗೆ ವಾರಂಟ್

ಇಸ್ಲಾಮಾಬಾದ್ (ಪಿಟಿಐ): ತೊಶಖಾನ ಪ್ರಕರಣದಲ್ಲಿ ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಪಾಕಿಸ್ತಾನ ನ್ಯಾಯಾಲಯ ಜಾಮೀನು ರಹಿತ ಬಂಧನ ವಾರೆಂಟ್ ಜಾರಿಗೊಳಿಸಿದೆ. ಆದರೆ, ಇತರೆ ಎರಡು ಪ್ರಕರಣಗಳಲ್ಲಿ ಅವರಿಗೆ ಜಾಮೀನು ನೀಡಲಾಗಿದೆ.

ನ್ಯಾಯಾಲಯದ ಆವರಣದ ಹೊರಗೆ ಅವರ ನೂರಾರು ಬೆಂಬಲಿಗರು ತಮ್ಮ ನಾಯಕನನ್ನು ಬೆಂಬಲಿಸಲು ಜಮಾಯಿಸಿದ್ದರು.

ಮೂರು ಪ್ರಕರಣಗಳಲ್ಲಿ ಹಾಜರಾಗುವ ಸಲುವಾಗಿ ಪಾಕಿಸ್ತಾನ ತೆಹ್ರೀಕ್-ಎ- ಇನ್ಸಾಫ್ (ಪಿಟಿಐ) ಪಕ್ಷದ ಮುಖ್ಯಸ್ಥ ಇಮ್ರಾನ್ ಖಾನ್ ಲಾಹೋರ್‌ನ ತಮ್ಮ ಜಮಾನ್ ಪಾರ್ಕ್ ನಿವಾಸದಿಂದ ಇಸ್ಲಾಮಾಬಾದ್‌ಗೆ ಬಂದರು.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಜಾಫರ್ ಇಕ್ಬಾಲ್ ಅವರು ಇಮ್ರಾನ್ ವಿರುದ್ಧ ಜಾಮೀನು ರಹಿತ ವಾರಂಟ್ ಆದೇಶ ಹೊರಡಿಸಿ, ಸತತ ಗೈರು ಹಾಜರಿ ಕಾರಣಕ್ಕೆ ಮಾರ್ಚ್ 7ಕ್ಕೆ ವಿಚಾರಣೆಯನ್ನು ಮುಂದೂಡಿದರು.

ಇದಕ್ಕೂ ಮುನ್ನ ವಿಚಾರಣೆಯನ್ನು ಎರಡು ಬಾರಿ ಮುಂದೂಡಲಾಗಿತ್ತು.

2018 ಮತ್ತು 2019ರ ಅವಧಿಯಲ್ಲಿ ಅವರು ತಮ್ಮ ಬಳಿಯೇ ಇರಿಸಿಕೊಂಡಿದ್ದ ತೊಶಖಾನ ಉಡುಗೊರೆಗಳ ಒಟ್ಟು ಮೌಲ್ಯದ ಕುರಿತ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಮರೆಮಾಚಿದ್ದರು ಎಂಬ ಆರೋಪ ಎದುರಿಸುತ್ತಿದ್ದಾರೆ.

ಪಾಕಿಸ್ತಾನದ ಆಡಳಿತಗಾರರು, ಸಂಸತ್ ಸದಸ್ಯರು, ಅಧಿಕಾರಿಗಳು ಪಡೆಯುವ ಉಡುಗೊರೆಗಳನ್ನು ಸಂಗ್ರಹಿಸಿಡುವ ಇಲಾಖೆಯನ್ನು ತೊಶಖಾನ ಎಂದು ಕರೆಯಲಾಗುತ್ತದೆ. ಇದು ಸಂಸದೀಯ ವಿಭಾಗದ ಆಡಳಿತದ ನಿಯಂತ್ರಣದಲ್ಲಿ ಇರುತ್ತದೆ

ಭಾರ್ತಿ ಏರ್‌ಟೆಲ್ ಕಂಪನಿ ಅಧ್ಯಕ್ಷ ಸುನಿಲ್ ಮಿತ್ತಲ್ ಹೇಳಿಕೆ

ಶುಲ್ಕ ಹೆಚ್ಚಿಸಲಿರುವ ಏರ್‌ಟೆಲ್

ಬಾರ್ಸಿಲೋನಾ (ಪಿಟಿಐ): ಮೊಬೈಲ್ ಸೇವಾ ಶುಲ್ಕಗಳನ್ನು ಎಲ್ಲ ಹಂತಗಳಲ್ಲಿಯೂ ಹೆಚ್ಚಿಸುವ ಆಲೋಚನೆ ಇದೆ ಎಂದು ಭಾರ್ತಿ ಏರ್‌ಟೆಲ್ ಅಧ್ಯಕ್ಷ ಸುನಿಲ್ ಭಾರ್ತಿ ಮಿತ್ತಲ್ ಹೇಳಿದ್ದಾರೆ. ಏರ್‌ಟೆಲ್ ಕಂಪನಿಯು ಆರಂಭಿಕ ಹಂತದ ಮೊಬೈಲ್ ಸೇವಾ ಶುಲ್ಕವನ್ನು ಈಚೆಗೆ ಎಂಟು ದೂರಸಂಪರ್ಕ ವೃತ್ತಗಳಲ್ಲಿ ಶೇಕಡ 57ರಷ್ಟು (₹ 155ಕ್ಕೆ) ಹೆಚ್ಚಿಸಿದೆ.

ಹೂಡಿಕೆ ಮಾಡಿದ ಬಂಡವಾಳಕ್ಕೆ ಸಿಗುತ್ತಿರುವ ವರಮಾನವು ದೂರಸಂಪರ್ಕ ಉದ್ಯಮದಲ್ಲಿ ಬಹಳ ಕಡಿಮೆ ಇದೆ. ಹೀಗಾಗಿ, ಈ ವರ್ಷದಲ್ಲಿ ಸೇವಾ ಶುಲ್ಕವನ್ನು ಹೆಚ್ಚಿಸಲಾಗುತ್ತದೆ ಎಂದು ಮಿತ್ತಲ್ ಅವರು ಹೇಳಿದ್ದಾರೆ. ಅವರು ಇಲ್ಲಿ ನಡೆಯುತ್ತಿರುವ ಮೊಬೈಲ್ ವರ್ಲ್ಡ್ ಕಾಂಗ್ರೆಸ್‌ನಲ್ಲಿ ಪಾಲ್ಗೊಂಡಿದ್ದಾರೆ.

ಮುಖ್ಯಾಂಶಗಳು

- ಎಆರ್‌ಪಿಯು ಹೆಚ್ಚಳದ ಗುರಿ
- 'ಹೂಡಿಕೆಗೆ ತಕ್ಕ ವರಮಾನ ಇಲ್ಲ'

ಕಡಿಮೆ ಆದಾಯ ಹೊಂದಿರುವ ವರ್ಗಗಳ ಮೇಲೆ ಶುಲ್ಕ ಹೆಚ್ಚಳದಿಂದ ಆಗುವ ಪರಿಣಾಮಗಳ ಬಗ್ಗೆ ಪ್ರಶ್ನಿಸಿದಾಗ, 'ಜನರು ಇತರ ಉದ್ದೇಶಗಳಿಗಾಗಿ ಮಾಡುತ್ತಿರುವ ವೆಚ್ಚಗಳಿಗೆ ಹೋಲಿಸಿದರೆ ಈ ಹೆಚ್ಚಳವು ಕಡಿಮೆ' ಎಂದು ಉತ್ತರಿಸಿದ್ದಾರೆ.


ಸುನಿಲ್ ಮಿತ್ತಲ್

'ಜನರ ಸಂಬಳ ಹೆಚ್ಚಾಗಿದೆ, ಬಾಡಿಗೆ ಪಾವತಿ ಜಾಸ್ತಿಯಾಗಿದೆ. ಜನರು ಬಹುತೇಕ ಏನನ್ನೂ ಪಾವತಿಸದೆಯೇ 30 ಜಿ.ಬಿ. ಡೇಟಾ ಬಳಸುತ್ತಿದ್ದಾರೆ' ಎಂದು ಮಿತ್ತಲ್ ಹೇಳಿದ್ದಾರೆ. ಕಂಪನಿಯು ಅಲ್ಪಾವಧಿಯಲ್ಲಿ, ಪ್ರತಿ ಗ್ರಾಹಕನಿಂದ ಬರುವ ವರಮಾನವು ₹ 200 ಆಗಬೇಕು ಎಂಬ ಗುರಿ ಇಟ್ಟುಕೊಂಡಿದೆ. ದೀರ್ಘಾವಧಿಯಲ್ಲಿ ಇದು ₹ 300ಕ್ಕೆ ತಲುಪಬೇಕು ಎಂಬ ಗುರಿಯನ್ನು ಕಂಪನಿಯು ಹೊಂದಿದೆ.

'ಭಾರತದಷ್ಟು ಬೃಹತ್ ಆಗಿರುವ ದೇಶದಲ್ಲಿ ಮೂರು ದೂರಸಂಪರ್ಕ ಸೇವಾ ಕಂಪನಿಗಳು ಇರಬೇಕು ಎಂಬುದು ಯಾವತ್ತಿನಿಂದಲೂ ನಮ್ಮ ನಿಲುವು. ಈಗಿರುವ ಪ್ರಶ್ನೆಯೆಂದರೆ, ಮೂರನೆಯ ಕಂಪನಿಯು ಬಿಎಸ್‌ಎನ್‌ಎಲ್ ಆಗಿರಲಿದೆಯೋ ಅಥವಾ ವೊಡಾಫೋನ್ ಐಡಿಯಾ ಆಗಿರಲಿದೆಯೋ ಎಂಬುದು. ಸರ್ಕಾರವು ತನ್ನಿಂದ ಸಾಧ್ಯವಾಗುವುದನ್ನೆಲ್ಲ ಮಾಡಿದೆ. ಈಗ ವೊಡಾಫೋನ್ ಐಡಿಯಾ ಕಂಪನಿಯು ಅದರ ಪ್ರಯೋಜನ ಪಡೆಯಬೇಕು' ಎಂದು ಮಿತ್ತಲ್ ಅವರು ಹೇಳಿದ್ದಾರೆ.

450 ವಿಮಾನ ಸಂಚಾರ ರದ್ದು, 20 ಮನೆಗಳಿಗೆ ಹಾನಿ

ಅಮೆರಿಕ: ಶೀತಗಾಳಿಗೆ ಜನ ತತ್ತರ

ವಾಷಿಂಗ್ಟನ್ (ಎಪಿ): ಅಮೆರಿಕದಲ್ಲಿ ಮಂಗಳವಾರ ಭಾರೀ ಹಿಮಪಾತವಾಗಿದೆ. ದಟ್ಟ ಹಿಮ ಆವರಿಸಿ, ಬಿರುಗಾಳಿ ಬೀಸುತ್ತಿದೆ.

ಪ್ರತಿಕೂಲ ಹವಾಮಾನದ ಪರಿಣಾಮ ಓಕ್ಲಾಹೋಮಾದಲ್ಲಿ ಕನಿಷ್ಠ ಒಬ್ಬರು ಮೃತಪಟ್ಟಿದ್ದಾರೆ. ಮಿಚಿಗನ್ ನಿವಾಸಿಗಳು ಕಳೆದ ಆರು ದಿನಗಳಿಂದ ವಿದ್ಯುತ್ ಸೌಲಭ್ಯ ಇಲ್ಲದೆ ಕತ್ತಲೆಯಲ್ಲಿ ಕಾಲ ಕಳೆಯುತ್ತಿದ್ದಾರೆ.

ಅಮೆರಿಕ ದೇಶದ ಒಳಗೆ ಮತ್ತು ಹೊರಗೆ ಸಂಚರಿಸುವ 450 ವಿಮಾನಗಳನ್ನು ರದ್ದುಗೊಳಿಸಲಾಗಿದೆ. ಇತರ 500 ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಫ್ಲೈಟ್ ಟ್ರ್ಯಾಕಿಂಗ್ ವೆಬ್‌ಸೈಟ್ ದತ್ತಾಂಶ ತೋರಿಸಿದೆ.

ಶೀತಗಾಳಿಯು ಬುಧವಾರದವರೆಗೆ ಮುಂದುವರಿಯಲಿದೆ ಎಂದು ಕ್ಯಾಲಿಫೋರ್ನಿಯಾದ ರಾಷ್ಟ್ರೀಯ ಹವಾಮಾನ ಸಂಸ್ಥೆ ತಿಳಿಸಿದೆ.

ಪ್ರಾಥಮಿಕ ವರದಿ ಪ್ರಕಾರ, ಬಿರುಗಾಳಿಯಿಂದ ಕೆಲವೆಡೆ ಮರಗಳು ಉರುಳಿವೆ, ಕಟ್ಟಡಗಳ ಹೆಂಚುಗಳು ಒಡೆದಿವೆ ಎಂದು ಹವಾಮಾನ ತಜ್ಞ ರಫಲ್ ಒಗೋರೆಕ್ ಅವರು ತಿಳಿಸಿದ್ದಾರೆ.


ಅಮೆರಿಕದ ನ್ಯೂಯಾರ್ಕ್ ನಗರದ ಟೈಮ್ಸ್ ಸ್ಕ್ವೇರ್ ಬಳಿ ಜನರು ಸೋಮವಾರ ಹಿಮ ಸುರಿಯುತ್ತಿದ್ದ ಹೊತ್ತಿನಲ್ಲಿ ಅಡ್ಡಾಡುತ್ತಿದ್ದ ದೃಶ್ಯ —ಎಎಫ್‌ಪಿ ಚಿತ್ರ

ಓಕ್ಲಾಹೋಮಾದಲ್ಲಿ ಮೂವರು ಗಾಯಗೊಂಡಿದ್ದಾರೆ. 20 ಮನೆಗಳಿಗೆ ಹಾನಿಯಾಗಿದೆ, ನಾಲ್ಕು ಮನೆಗಳು ಕುಸಿದುಬಿದ್ದಿವೆ. ಬಿರುಗಾಳಿ ಪರಿಣಾಮ ಮರಗಳು ಮತ್ತು ವಿದ್ಯುತ್ ಕಂಬಗಳು ಉರುಳಿ ಬಿದ್ದಿದ್ದು, ಸಂಚಾರ ಅಸ್ತವ್ಯಸ್ತಗೊಂಡಿದೆ ಎಂದು ವರದಿಯಾಗಿದೆ.

ನ್ಯೂಯಾರ್ಕ್, ಮೆಸಾಚ್ಯುಸೆಟ್ಸ್, ನ್ಯೂಜೆರ್ಸಿ ಮತ್ತು ರೋಡ್ ಐಲ್ಯಾಂಡ್ ಸೇರಿದಂತೆ ಈಶಾನ್ಯದ ಕೆಲವು ಭಾಗಗಳಲ್ಲಿ ಚಳಿಗಾಲದ ಚಂಡಮಾರುತದ ಎಚ್ಚರಿಕೆ ನೀಡಲಾಗಿದೆ.

ಲಾಸ್ ಏಂಜಲೀಸ್‌ನ ಪೂರ್ವಕ್ಕಿರುವ ಸ್ಯಾನ್ ಬರ್ನಾರ್ಡಿನೊ ಕೌಂಟಿ ತುರ್ತು ಪರಿಸ್ಥಿತಿ ಘೋಷಿಸಿದೆ. ಪರ್ವತ ನಿವಾಸಿಗಳು ತಮ್ಮ ಮನೆಗಳಲ್ಲಿ ಸಿಲುಕಿಕೊಂಡಿದ್ದಾರೆ. ನೂರಾರು ವಾಹನ ಚಾಲಕರು ಎತ್ತರದ ಪ್ರದೇಶಗಳಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಕೆಟಿಎಲ್‌ಎ-ಟಿವಿ ವರದಿ ಮಾಡಿದೆ.

ಯುವ ವೃತ್ತಿಪರರ ಯೋಜನೆ ವೀಸಾ ಪ್ರಕ್ರಿಯೆಗೆ ಚಾಲನೆ

ಲಂಡನ್ (ಪಿಟಿಐ): ಯುವ ವೃತ್ತಿಪರರ ಯೋಜನೆ (ವೈಪಿಎಸ್) ಅಡಿ ಭಾರತಕ್ಕೆ ಬರಲು ಇಚ್ಛಿಸುವ ಬ್ರಿಟನ್ ಪ್ರಜೆಗಳಿಗಾಗಿ ಇಲ್ಲಿನ ಭಾರತೀಯ ರಾಯಭಾರ ಕಚೇರಿಯು ವೀಸಾ ಅರ್ಜಿ ಪ್ರಕ್ರಿಯೆಗೆ ಮಂಗಳವಾರ ಚಾಲನೆ ನೀಡಿತು.

ಇದೇ ವೇಳೆ, ಭಾರತದಲ್ಲಿನ ಬ್ರಿಟಿಷ್ ರಾಯಭಾರ ಕಚೇರಿ ಕೂಡಾ ಬ್ರಿಟನ್‌ಗೆ ತೆರಳಬಯಸುವ ಭಾರತೀಯ ಪದವೀಧರರಿಗಾಗಿ ವೀಸಾ ಅರ್ಜಿ ಪ್ರಕ್ರಿಯೆಗೆ ಚಾಲನೆ ನೀಡಿತು.

18ರಿಂದ 30 ವಯೋಮಾನದ ಭಾರತ ಮತ್ತು ಬ್ರಿಟನ್ ಪ್ರಜೆಗಳು 2 ವರ್ಷಗಳ ಅವಧಿಗೆ ಉಭಯ ದೇಶಗಳಲ್ಲಿ ನೆಲೆಸಲು, ಉದ್ಯೋಗ ಕೈಗೊಳ್ಳಲು ಅನುವು ಮಾಡುವ ಯೋಜನೆ ಇದಾಗಿದೆ. ಭಾರತ ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರಿಟನ್ ಪ್ರಧಾನಿ ರಿಶಿ ಸುನಕ್ ಅವರು ಇಂಡೊನೇಷ್ಯಾದಲ್ಲಿ ಕಳೆದ ವರ್ಷ ನವೆಂಬರ್‌ನಲ್ಲಿ ನಡೆದಿದ್ದ ಜಿ20 ಶೃಂಗಸಭೆ ವೇಳೆ ಈ ಯೋಜನೆಗೆ ಸಹಿ ಮಾಡಿದ್ದರು.

ಅರ್ಜಿದಾರರು ಪದವೀಧರರಾಗಿರಬೇಕು, ಉಭಯ ದೇಶಗಳಲ್ಲಿ ನೆಲೆಸಲು ಸಾಕಷ್ಟು ಹಣಕಾಸು ಸೌಲಭ್ಯ ಹೊಂದಿರಬೇಕು ಎಂಬ ಮಾನದಂಡಗಳನ್ನು ವಿಧಿಸಲಾಗಿದೆ.

'ಈ ಯೋಜನೆಯ ಪ್ರಕ್ರಿಯೆಯು ಫೆ.28ರಿಂದ ಜಾರಿಯಲ್ಲಿರಲಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ದೆಹಲಿ ಮತ್ತು ಲಂಡನ್‌ನಲ್ಲಿ ಏಕಕಾಲಕ್ಕೆ ವೀಸಾ ಪ್ರಕ್ರಿಯೆ ಆರಂಭಿಸಿದ್ದೇವೆ' ಎಂದು ಬ್ರಿಟನ್‌ನ ಭಾರತೀಯ ರಾಯಭಾರಿ ವಿಕ್ರಂ ದೊರೆಸ್ವಾಮಿ ಟ್ವೀಟ್ ಮಾಡಿದ್ದಾರೆ.

ಕುಸಿದ ಜಿಡಿಪಿ ಬೆಳವಣಿಗೆ

ಒಂದನೇ ಪುಟದಿಂದ...

ಪ್ರಸಕ್ತ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಎನ್‌ಎಸ್‌ಒ ಎರಡನೆಯ ಅಂದಾಜನ್ನು ಕೂಡ ಬಿಡುಗಡೆ ಮಾಡಿದ್ದು, ಇಡೀ ವರ್ಷದಲ್ಲಿ ಜಿಡಿಪಿ ಬೆಳವಣಿಗೆ ದರವು ಶೇ 7ರಷ್ಟು ಇರಲಿದೆ ಎಂಬ ಮಾತನ್ನು ಪುನರುಚ್ಚರಿಸಿದೆ.

2021-22ನೆಯ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವನ್ನು ಪರಿಷ್ಕರಿಸಿರುವ ಎನ್‌ಎಸ್‌ಒ, ಬೆಳವಣಿಗೆಯು ಶೇ 9.1ರಷ್ಟು ಆಗಿದೆ ಎಂದು ಹೇಳಿದೆ. ಈ ಮೊದಲು ಬೆಳವಣಿಗೆಯು ಶೇ 8.7ರಷ್ಟು ಆಗಿದೆ ಎಂದು ಅಂದಾಜಿಸಲಾಗಿತ್ತು.

ಕೋವಿಡ್ ಮೂಲ ಪತ್ತೆಯಲ್ಲಿ ಪಾರದರ್ಶಕತೆ: ಚೀನಾ

ಬೀಜಿಂಗ್ (ಎಪಿ): ಕೋವಿಡ್–19 ಉಗಮದ ಪತ್ತೆಗೆ ಸಂಬಂಧಿಸಿ ತಾನು ಮುಕ್ತ ಹಾಗೂ ಪಾರದರ್ಶಕವಾಗಿಯೇ ನಡೆದುಕೊಳ್ಳುತ್ತಿರುವುದಾಗಿ ಚೀನಾ ಮಂಗಳವಾರ ಹೇಳಿದೆ.

ಈ ಕುರಿತು ಅಮೆರಿಕದ ಟೀಕೆಗಳನ್ನು ತಳ್ಳಿ ಹಾಕಿರುವ ಚೀನಾ, ಇದನ್ನು ರಾಜಕೀಯಗೊಳಿಸುತ್ತಿದೆ ಎಂದು ಕಿಡಿಕಾರಿದೆ.

'ಕೊರೊನಾ ವೈರಸ್ ಕುರಿತು ಚೀನಾದಲ್ಲಿ ವ್ಯಾಪಕ ಸಂಶೋಧನೆ ನಡೆಸಲಾಗಿದೆ. ಫಲಿತಾಂಶಗಳನ್ನು ಇತರ ದೇಶಗಳೊಂದಿಗೆ ಹಂಚಿಕೊಳ್ಳುವ ಮೂಲಕ ವಿಶ್ವದ ಇತರೆಡೆ ನಡೆದ ಸಂಶೋಧನೆಗೆ ಮಹತ್ವದ ಕೊಡುಗೆ ನೀಡಲಾಗಿದೆ' ಎಂದು ವಿದೇಶಾಂಗ ಸಚಿವಾಲಯ ವಕ್ತಾರ ಮಾವೊ ನಿಂಗ್ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ವೈರಸ್ ಪ್ರಸರಣದ ಮೂಲ ಹುಡುಕುವ ವಿಷಯವನ್ನು ರಾಜಕೀಯಗೊಳಿಸುವುದರಿಂದ ಚೀನಾಕ್ಕೆ ಕಳಂಕ ತಟ್ಟುವುದಿಲ್ಲ. ಇಂಥ ಪ್ರಯತ್ನಗಳಿಂದ ಅಮೆರಿಕದ ವಿಶ್ವಾಸಾರ್ಹತೆಗೇ ಧಕ್ಕೆಯಾಗಲಿದೆ' ಎಂದು ನಿಂಗ್ ಅಭಿಪ್ರಾಪಟ್ಟರು.

ನಿಶ್ಚಿತ ಠೇವಣಿಗೆ ಶೇ 8ರಷ್ಟು ಬಡ್ಡಿ

ಒಂದನೇ ಪುಟದಿಂದ....

2023ರ ಜನವರಿ 13ಕ್ಕೆ ಕೊನೆಗೊಂಡ ಪಾಕ್ಷಿಕದಲ್ಲಿ ಸಾಲ ನೀಡಿಕೆ ಪ್ರಮಾಣವು ಶೇ 16.5ರಷ್ಟು ಆಗಿದೆ. ಆದರೆ ಠೇವಣಿ ಸಂಗ್ರಹ ಪ್ರಮಾಣವು ಶೇ 10.6ರಷ್ಟು ಮಾತ್ರ ಇದೆ. ವಾಸ್ತವದಲ್ಲಿ, ಠೇವಣಿ ಸಂಗ್ರಹ ಪ್ರಮಾಣವು ವರ್ಷದಿಂದ ಒಂದಂಕಿ ಮಟ್ಟದಲ್ಲಿಯೇ ಇದೆ.

ದೇಶದ ಅತಿದೊಡ್ಡ ಬ್ಯಾಂಕ್ ಆಗಿರುವ ಎಸ್‌ಬಿಐ, 400 ದಿನಗಳ ನಿಶ್ಚಿತ ಠೇವಣಿಗೆ ಶೇ 7.10ರಷ್ಟು ಬಡ್ಡಿ ನೀಡುತ್ತಿದೆ. ಹಿರಿಯ ನಾಗರಿಕರಿಗೆ ಶೇ 7.60ರಷ್ಟು ಬಡ್ಡಿ ನೀಡುತ್ತಿದೆ.

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, 444 ದಿನಗಳ ನಿಶ್ಚಿತ ಠೇವಣಿಗೆ ಹಿರಿಯ ನಾಗರಿಕರಿಗೆ ಶೇ 7.85ರಷ್ಟು ಹಾಗೂ ಇತರರಿಗೆ ಶೇ 7.35ರಷ್ಟು ಬಡ್ಡಿ ನೀಡುತ್ತಿದೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ 800 ದಿನಗಳ ನಿಶ್ಚಿತ ಠೇವಣಿಗೆ ಶೇ 7.30ರಷ್ಟು (ಹಿರಿಯ ನಾಗರಿಕರಿಗೆ ಶೇ 7.80ರಷ್ಟು) ಬಡ್ಡಿ ಕೊಡುತ್ತಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್ 666 ದಿನಗಳ ನಿಶ್ಚಿತ ಠೇವಣಿಗೆ ಶೇ 7.25ರಷ್ಟು, ಬ್ಯಾಂಕ್ ಆಫ್ ಬರೋಡ 399 ದಿನಗಳ ನಿಶ್ಚಿತ ಠೇವಣಿಗೆ ಶೇ 7.05ರಷ್ಟು, ಬ್ಯಾಂಕ್ ಆಫ್ ಮಹಾರಾಷ್ಟ್ರ 200 ದಿನಗಳ ನಿಶ್ಚಿತ ಠೇವಣಿಗೆ ಶೇ 7ರಷ್ಟು ಬಡ್ಡಿ ನೀಡುತ್ತಿವೆ. ಹಿರಿಯ ನಾಗರಿಕರಿಗೆ ಹೆಚ್ಚುವರಿಯಾಗಿ ಶೇ 0.50ರಷ್ಟು ಬಡ್ಡಿ ಇರುತ್ತದೆ.

400 ದಿನಗಳ ನಿಶ್ಚಿತ ಠೇವಣಿಗೆ ಕೆನರಾ ಬ್ಯಾಂಕ್ ಶೇ 7.15ರಷ್ಟು, ಇಂಡಿಯನ್ ಬ್ಯಾಂಕ್ 555 ದಿನಗಳ ಠೇವಣಿಗೆ ಶೇ 7ರಷ್ಟು, ಯುಕೊ ಬ್ಯಾಂಕ್ 666 ದಿನಗಳ ಠೇವಣಿಗೆ ಶೇ 7.15ರಷ್ಟು, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ 444 ದಿನಗಳ ಠೇವಣಿಗೆ ಶೇ 7ರಷ್ಟು ಬಡ್ಡಿ ನೀಡುತ್ತಿವೆ.

ಮುಂಬೈ ಧಾರಣೆ

ಶೇಂಗಾ

28-2-2023

ಜಾವಾ 70/80(ಹೊಸ)	12250-12300
ಜಾವಾ 80/90(ಹೊಸ)	11250-11300
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12200-12300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700(1700)
ಒಂದು ವಾರದ ಡೆಲಿವರಿ	1695(1695)
ಸೋಯಾ ಕಚ್ಚಾ	1025(1037)
ಪಾಮ್ ವಾರದ ಡೆಲಿವರಿ	955(965)
ಸೂರ್ಯಕಾಂತಿ ಎಣ್ಣೆ ಕಚ್ಚಾ	1040(1020)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
55250(55500)
ಬೆಳ್ಳಿ ಕೆ.ಜಿ 62950(63450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ


ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಂದಕುಮಾರ್, ಕರೇಕಲ್ಲು, ಬೆಂಗಳೂರು

- **ಪ್ರಶ್ನೆ:** ನಾನು ಖಾಸಗಿ ಕಂಪನಿಯೊಂದರ ಉದ್ಯೋಗಿ, 60 ವರ್ಷ ವಯಸ್ಸಾಗಲು ಇನ್ನೂ 20 ವರ್ಷ ಬಾಕಿ ಇದೆ. ನಾನು 2014ರ ಮೊದಲೇ ಇಪಿಎಫ್ ಸದಸ್ಯ. ನಮ್ಮ ಕಂಪನಿಯ ಎಚ್.ಆರ್. ವಿಭಾಗದವರು ಎಲ್ಲ ಉದ್ಯೋಗಿಗಳಿಗೆ ಒಂದು ಇ–ಮೇಲ್ ಬರೆದು ಇಪಿಎಸ್‌ನ ಹೆಚ್ಚಿನ ಪಿಂಚಣಿ ಯೋಜನೆಯಲ್ಲಿ ಭಾಗಿಯಾಗಲು ಬಯಸಿದ್ದಲ್ಲಿ ಕೆಲವು ಅರ್ಜಿ ನಮೂನೆಗಳನ್ನು ಭರ್ತಿ ಮಾಡಿಕೊಡಬೇಕೆಂದು ಹೇಳಿದ್ದರು. ಈಗ ಇರುವ ಇಪಿಎಫ್ ನಿಧಿಯಿಂದ ಹೆಚ್ಚಿನ ಪಿಂಚಣಿ ಯೋಜನೆಗೆ ಹಣ ವರ್ಗಾವಣೆಗೆ ಒಪ್ಪಿಗೆ ನೀಡುವುದು ಆರ್ಥಿಕ ದೃಷ್ಟಿಯಲ್ಲಿ ಸೂಕ್ತವೇ? ವರ್ಗಾವಣೆಯಾದ ಮೊತ್ತಕ್ಕೆ ತೆರಿಗೆ ಇದೆಯೇ? ಇದರಿಂದ ಮುಂದೆ ಏನಾದರೂ ತೊಡಕಿದೆಯೇ?

ಉತ್ತರ: ನಿಮ್ಮ ಪಿ.ಎಫ್ ನಿಧಿಯಿಂದ ಇಪಿಎಸ್ ನಿಧಿಗೆ ಹಣ ವರ್ಗಾವಣೆ ಮಾಡುವ ಮೊದಲು ನೀವು ಹಾಗೂ ನಿಮ್ಮ ಕಂಪನಿ ಜಂಟಿ ಒಪ್ಪಿಗೆ ನೀಡಬೇಕಾಗುತ್ತದೆ. ಪಿಂಚಣಿ ಯೋಜನೆಗೆ ಪ್ರತಿ ತಿಂಗಳು ಕೊಡುತ್ತಿದ್ದ ಶೇ 8.33ರಷ್ಟು ಮೊತ್ತವನ್ನು ಮೂಲ ವೇತನದ ₹ 6,500 ಅಥವಾ ₹ 15,000ಕ್ಕೆ (ಸೆಪ್ಟೆಂಬರ್ 2014ರ ನಂತರ) ಮೊಟಕುಗೊಳಿಸುವ ಬದಲಾಗಿ ಸಂಪೂರ್ಣ ಮೂಲ ವೇತನಕ್ಕೆ ಈ ದರ ಅನ್ವಯಿಸುವಂತೆ ಮಾಡುವುದು ಹಾಗೂ ಆ ಮೂಲಕ ನಿವೃತ್ತಿಯ ನಂತರದಲ್ಲಿ ಸಿಗುವ ಪಿಂಚಣಿ ಮೊತ್ತ ಹೆಚ್ಚಾಗುವಂತೆ ನೋಡಿಕೊಳ್ಳುವುದು ಇದರ ಉದ್ದೇಶ.

ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಹಿಂದೆ ಮೂಲ ವೇತನ ಎಷ್ಟೇ ಇದ್ದರೂ, ₹ 15,000ವನ್ನು ಮೂಲ ವೇತನವಾಗಿ ಪರಿಗಣಿಸಿ, ಅದರ ಶೇ 8.33ರಷ್ಟು ಮೊತ್ತ (₹ 1,250) ಮಾತ್ರ ಪ್ರತಿ ತಿಂಗಳು ಇಪಿಎಸ್‌ಗೆ ಪಾವತಿಯಾಗುತ್ತಿತ್ತು. ಶೇ 12ರ ದರದಲ್ಲಿ ಉದ್ಯೋಗದಾತರು ಪಾವತಿಸುತ್ತಿದ್ದ ಮೊತ್ತದಲ್ಲಿ ಈ ಮೊತ್ತ ಕಳೆದು ಉಳಿದ ಮೊತ್ತ ಇಪಿಎಫ್ ಖಾತೆಗೆ ಹೋಗುತ್ತಿತ್ತು. ಹೀಗಾಗಿ ನಿವೃತ್ತಿಯ ಸಂದರ್ಭದಲ್ಲಿ ಉದ್ಯೋಗಿಯ ಇಪಿಎಫ್ ದೇಣಿಗೆ ಹಾಗೂ ಕಂಪನಿ ನೀಡುವ ಮೊತ್ತ ಸೇರಿ ಹೆಚ್ಚು ಮೊತ್ತ ಕೈಗೆ ಸಿಗುತ್ತಿತ್ತು. ಮೂಲ ವೇತನ ಎಷ್ಟೇ ಹೆಚ್ಚಿದ್ದರೂ ಪಿಂಚಣಿ ಮೊತ್ತವು ನಿಗದಿತ ಮೊತ್ತವನ್ನು ಮೀರುತ್ತಿರಲಿಲ್ಲ. ಇನ್ನು ಮುಂದೆ, ನೀವು ಹಾಗೂ ನಿಮ್ಮ ಉದ್ಯೋಗದಾತರು ಬದಲಾವಣೆಗೆ ಒಪ್ಪಿಗೆ ಕೊಟ್ಟರೆ, ನಿಮ್ಮ ಸಂಪೂರ್ಣ ಮೂಲ ವೇತನದಲ್ಲಿ ಶೇ 8.33ರಷ್ಟು ಮೊತ್ತವು ಪಿಂಚಣಿ ನಿಧಿಗೆ ಪಾವತಿಯಾಗುತ್ತದೆ. ಇನ್ನುಳಿದ ಶೇ 3.67ರಷ್ಟು ಮೊತ್ತವು ಇಪಿಎಫ್ ಖಾತೆಗೆ ಜಮಾ ಆಗುತ್ತದೆ. ಇದರ ಪರಿಣಾಮವಾಗಿ, ನಿಮ್ಮ ಪಿಂಚಣಿ ಮೊತ್ತವು ಅಧಿಕವಾಗುತ್ತದೆ ಮತ್ತು ಇಪಿಎಫ್ ಖಾತೆಯಿಂದ ಇಪಿಎಸ್‌ಗೆ ಹಣ ವರ್ಗಾವಣೆ ಮಾಡುವುದರಿಂದ ನಿವೃತ್ತಿಯ ಸಮಯದಲ್ಲಿ ಸಿಗುವ ಇಡುಗಂಟು ಮೊತ್ತ ತುಸು ಕಡಿಮೆಯಾಗುತ್ತದೆ.

ಇಪಿಎಫ್‌ನಿಂದ ಇಪಿಎಸ್‌ಗೆ ಹಣ ವರ್ಗಾವಣೆ ಮಾಡಿದಾಗ ಆ ಮೊತ್ತಕ್ಕೆ ತೆರಿಗೆ ಇಲ್ಲ. ಅಲ್ಲದೆ, ಆ ಮೊತ್ತಕ್ಕೆ ಹೊಸದಾಗಿ ತೆರಿಗೆ ವಿನಾಯಿತಿಗಳು ಸಿಗುವುದಿಲ್ಲ.

ಹೆಸರು ಬೇಡ, ಊರು ಬೇಡ

- **ಪ್ರಶ್ನೆ:** ನಾನು 2007ರಲ್ಲಿ ₹ 60,000ಕ್ಕೆ 30X40 ಚದರ ಅಡಿ ನಿವೇಶನ ಖರೀದಿಸಿದ್ದೆ. ಈಗ ಈ ನಿವೇಶನವನ್ನು ₹ 17 ಲಕ್ಷಕ್ಕೆ ಮಾರಲು ಉದ್ದೇಶಿಸಿದ್ದು, ಆ ಮೊತ್ತ ಬಳಸಿ, ಫ್ಲ್ಯಾಟ್ ಖರೀದಿಸಲು ಮಾಡಿರುವ ಸಾಲದ ಅಸಲು ಪಾವತಿಸಲು ಉದ್ದೇಶಿಸಿದ್ದೇನೆ. ಫ್ಲ್ಯಾಟ್ ಇನ್ನೂ ನೋಂದಣಿ ಆಗಬೇಕಿದೆ. ಇದರಿಂದ ನನಗೆ ಆದಾಯ ತೆರಿಗೆ ಬರುತ್ತದೆಯೇ? ಹಾಗಿದ್ದಲ್ಲಿ, ಅದನ್ನು ಯಾವ ರೀತಿ ಲೆಕ್ಕ ಹಾಕಬೇಕು?

ಉತ್ತರ: ಸುಮಾರು 16 ವರ್ಷ ಹಿಂದೆ ಖರೀದಿಸಿದ್ದ ನಿವೇಶನವೊಂದನ್ನು ನೀವು ಮಾರಾಟ ಮಾಡಿ, ಬಂದ ಮೊತ್ತವನ್ನು ಹೊಸ ಫ್ಲ್ಯಾಟ್ ಖರೀದಿಸಲು ಅಥವಾ ಇತ್ತೀಚೆಗೆ ಅದರ ಮೇಲೆ ಪಡೆದ ಸಾಲದ ಭಾಗಶಃ ಮೊತ್ತ ಮರುಪಾವತಿಸಲು ಬಳಸಿಕೊಳ್ಳಲಿದ್ದೀರಿ. ನಿಮ್ಮ ನಿವೇಶನ ಮೂರು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ನಿಮ್ಮ ಒಡೆತನದಲ್ಲಿದ್ದ ಕಾರಣ ಇದರಿಂದ ಬಂದ ಲಾಭ ದೀರ್ಘಾವಧಿ ಬಂಡವಾಳ ಲಾಭವಾಗಿ ಪರಿಗಣಿತವಾಗುತ್ತದೆ. ನಿಮ್ಮ ಪ್ರಶ್ನೆಯನ್ನು ನೇರವಾಗಿ ನೋಡಿದಾಗ, ಆಸ್ತಿ ಮಾರಾಟ ಮತ್ತು ಸಾಲ ಮರುಪಾವತಿಗೆ ಯಾವುದೇ ಸಂಬಂಧ ಇಲ್ಲ ಎಂದು ಕಂಡುಬಂದರೂ, ತೆರಿಗೆ ನಿಯಮ ಏನು ಹೇಳುತ್ತದೆ ಎನ್ನುವುದನ್ನು ಮೊದಲು ಗಮನಿಸೋಣ.

ನೀವು ನಿವೇಶನ ಮಾರಾಟ ಮಾಡಿ ಹೊಸ ಫ್ಲ್ಯಾಟ್ ಖರೀದಿಸುತ್ತಿರುವುದರಿಂದ ಅದಕ್ಕೆ ಸಂಬಂಧಿಸಿದ ತೆರಿಗೆ ವಿನಾಯಿತಿ ನೀಡುವ ಸೆಕ್ಷನ್ '54 ಎಫ್' ಆಗಿರುತ್ತದೆ. ಅರ್ಹ ಬಂಡವಾಳ ಆಸ್ತಿಗಳ ಮಾರಾಟದಿಂದ ಬರುವ ಆದಾಯವನ್ನು ಈ ಕೆಳಗಿನ ಯಾವುದೇ ರೀತಿಯಲ್ಲಿ ಬಳಸಬಹುದು - 1) ಮಾರಾಟದ ಮೊದಲು ಒಂದು ವರ್ಷದೊಳಗೆ ಹೊಸ ಮನೆಯನ್ನು ಖರೀದಿಸುವುದು 2) ಮಾರಾಟದ ನಂತರ ಎರಡು ವರ್ಷಗಳಲ್ಲಿ ಹೊಸ ಮನೆಯನ್ನು ಖರೀದಿಸುವುದು 3) ಮಾರಾಟದ ನಂತರ ಮೂರು ವರ್ಷಗಳಲ್ಲಿ ಹೊಸ ಮನೆಯನ್ನು ನಿರ್ಮಿಸುವುದು. ತೆರಿಗೆ ನಿಯಮದಲ್ಲೇ ಉಲ್ಲೇಖಿಸಿರುವಂತೆ, ಮಾರಾಟಕ್ಕೂ ಒಂದು ವರ್ಷ ಮುನ್ನ ಹೊಸ ಮನೆ ಖರೀದಿಸುವ ಅವಕಾಶ ನೀಡಲಾಗಿದೆ. ಇಂತಹ ಸಂದರ್ಭದಲ್ಲಿ ತೆರಿಗೆದಾರ ಸಹಜವಾಗಿ ತನ್ನ ಉಳಿತಾಯದಿಂದ ಅಥವಾ ಇತರ ಯಾವುದೇ ಮೂಲದಿಂದ ಹೊಸ ಮನೆ ಖರೀದಿಸಬೇಕಾಗುತ್ತದೆ.

ಹೂಡಿಕೆಗೆ ಬಳಸಿದ ಹಣವು ಮಾರಾಟದಿಂದ ಬಂದ ಮೊತ್ತವಾಗಿರಬೇಕೇ ಎನ್ನುವ ವಿಚಾರದಲ್ಲಿ ಉದ್ಭವಿಸಿದ ಒಂದಷ್ಟು ವ್ಯಾಜ್ಯಗಳಲ್ಲಿ ಹೆಚ್ಚಿನವು ತೆರಿಗೆದಾರರ ಪರವಾಗಿಯೇ ತೀರ್ಮಾನವಾಗಿದ್ದು, ಇಲ್ಲಿ ನಿಗದಿತ ಸಮಯದೊಳಗೆ ಹೊಸ ಮನೆಯನ್ನು ಖರೀದಿಸಿರಬೇಕು ಎನ್ನುವುದಕ್ಕಷ್ಟೇ ಆದ್ಯತೆ ನೀಡಲಾಗಿದೆ. ನಿಮ್ಮ ಯಾವುದೇ ನಿರ್ಧಾರದ ಮೊದಲು ಈ ವಿಚಾರವೂ ಗಮನದಲ್ಲಿರಲಿ. ಹೀಗಾಗಿ ನಿಮ್ಮ ಹೊಸ ಮನೆಯ ಹೂಡಿಕೆ ಮೌಲ್ಯ, ನಿವೇಶನ ಮಾರಾಟದ ಮೊತ್ತಕ್ಕಿಂತ ಹೆಚ್ಚಿಗೆ ಇರಬಹುದಾಗಿದ್ದರಿಂದ ಮೊದಲೆರಡು ಉಲ್ಲೇಖದ ಅಡಿ ಪೂರ್ಣ ವಿನಾಯಿತಿಗೆ ಅರ್ಹ. ಇನ್ನು, ತೆರಿಗೆ ಮೊತ್ತದ ವಿಚಾರವಾಗಿ ಹೇಳುವುದಾದರೆ, ಮಾರಾಟದಿಂದ ಬಂದ ಮೊತ್ತಕ್ಕಿಂತ ಹೆಚ್ಚಿನ ಮೊತ್ತದ ಮನೆ ಖರೀದಿಸಿದ್ದರೆ ಸಂಪೂರ್ಣ ತೆರಿಗೆ ವಿನಾಯಿತಿ ಇರುತ್ತದೆ. ಅದಕ್ಕಿಂತ ಕಡಿಮೆ ಮೌಲ್ಯದ್ದಾಗಿದ್ದರೆ, ಲಾಭಾಂಶದ ಮೇಲೆ ನಿಜವಾಗಿ ಮಾಡಿದ ಹೂಡಿಕೆ ಹಾಗೂ ಮಾರಾಟ ಮೌಲ್ಯದ ಅನುಪಾತದಲ್ಲಿ ವಿನಾಯಿತಿ ಸಿಗುತ್ತದೆ. ಉಳಿದ ಮೊತ್ತಕ್ಕೆ ಸೆಸ್ ಸೇರಿಸಿ ಶೇ 20.8ರ ದರದಲ್ಲಿ ತೆರಿಗೆ ಇರುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇ-ಮೇಲ್: businessdesk@prajavani.co.in

ಸುಧಾ, ಮಯೂರ ಓದಿರಿ

ಪಕ್ಷ ಬಲಪಡಿಸುವ, ಸಮರ್ಥ ನಾಯಕತ್ವ ಗುಣದ ವ್ಯಕ್ತಿಗಳನ್ನು ಗುರುತಿಸುವ ಗುರಿ

ಪಂಚಾಯಿತಿ ಮಟ್ಟದಲ್ಲಿ 'ಕೈ' ಪ್ರತಿಭಾ ಶೋಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಎಲ್ಲಾ ರಾಜ್ಯಗಳಲ್ಲೂ ತಳಮಟ್ಟದಿಂದಲೇ ಪಕ್ಷ ಬಲಪಡಿಸುವ ಹಾಗೂ ಸಮರ್ಥ ನಾಯಕತ್ವ ಗುಣದ ವ್ಯಕ್ತಿಗಳನ್ನು ಗುರುತಿಸುವ ಸಲುವಾಗಿ ಕಾಂಗ್ರೆಸ್ ಪಕ್ಷವು ಪಂಚಾಯಿತಿ ಹಂತದಲ್ಲೇ ಪ್ರತಿಭಾ ಶೋಧ ನಡೆಸಲು ಮುಂದಾಗಿದೆ.

ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ (ಆರ್‌ಜಿಪಿಆರ್‌ಎಸ್) ಅಡಿಯಲ್ಲಿ ಪ್ರತಿ ರಾಜ್ಯದಲ್ಲೂ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಗೆದ್ದ ಅಥವಾ ಸೋತಿರುವ ಸುಮಾರು 25 ಮಂದಿಯನ್ನು ಗುರುತಿಸಿ, ಅವರನ್ನು ಭವಿಷ್ಯದಲ್ಲಿ ಪಕ್ಷವಹಿಸುವ ಹೊಣೆಯನ್ನು ಸಮರ್ಥವಾಗಿ ನಿಭಾಯಿಸುವ ನಾಯಕರನ್ನಾಗಿ ರೂಪಿಸುವ ಕಾರ್ಯಕ್ಕೆ ಕೈ ಹಾಕಿದೆ. ಇದಕ್ಕಾಗಿ ಪಕ್ಷದ 18 ಮಂದಿ ಸಂಯೋಜಕರನ್ನು ನಿಯೋಜಿಸಿದೆ.

'ಈ ಯೋಜನೆಯು ಈ ವರ್ಷದ ಫೆಬ್ರುವರಿಯಲ್ಲೇ ಕೊನೆಗೊಳ್ಳಬೇಕಿತ್ತು. ಭಾರತ್ ಜೋಡೊ ಯಾತ್ರೆ ಹಾಗೂ ರಾಯಪುರದಲ್ಲಿ ನಡೆದ ಪಕ್ಷದ ಮಹಾ ಅಧಿವೇಶನದಿಂದಾಗಿ ಅದು ಸಾಧ್ಯವಾಗಿರಲಿಲ್ಲ. ಹೀಗಾಗಿ ಮಾರ್ಚ್‌ವರೆಗೂ ಅವಧಿ ವಿಸ್ತರಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್‌ನ ಪರಿಶಿಷ್ಟ ಜಾತಿ ಘಟಕವು 50 ಲೋಕಸಭೆ ಕ್ಷೇತ್ರಗಳನ್ನು ಗುರುತಿಸಿ ಅಲ್ಲಿ ನಾಯಕತ್ವ ಅಭಿವೃದ್ಧಿ ಮಿಷನ್ ಜಾರಿಗೊಳಿಸಲು ಮುಂದಾಗಿದೆ. ದಲಿತ ಮತ್ತು ಬುಡಕಟ್ಟು ಸಮುದಾಯಗಳಲ್ಲಿನ ಉದಯೋನ್ಮುಖ ನಾಯಕರನ್ನು ಗುರುತಿಸುವುದು ಈ ಮಿಷನ್‌ನ ಉದ್ದೇಶ. 'ಆರ್‌ಜಿಪಿಆರ್ ಎಸ್ ಅಡಿ ಕೈಗೊಂಡಿರುವ ಯೋಜನೆಯು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಹೊಸ ನಾಯಕತ್ವ ಬೆಳೆಸಲು ಹಾಗೂ ಬೇರುಮಟ್ಟದಿಂದಲೇ ಪಕ್ಷವನ್ನು ಬಲಪಡಿಸುವುದಕ್ಕೆ ನೆರವಾಗಲಿದೆ' ಎಂದು ಈ ಯೋಜನೆಯಲ್ಲಿ ತೊಡಗಿಕೊಂಡಿರುವ ನಾಯಕರೊಬ್ಬರು ತಿಳಿಸಿದ್ದಾರೆ.

'ಆರ್‌ಜಿಪಿಆರ್‌ಎಸ್ ಮುಖ್ಯಸ್ಥೆ ಮೀನಾಕ್ಷಿ ನಟರಾಜನ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಈ ಯೋಜನೆ ಕುರಿತು ಚರ್ಚಿಸಲಾಗಿದೆ. ಸಣ್ಣ ರಾಜ್ಯಗಳಲ್ಲಿ 15 ಮಂದಿ ಹಾಗೂ ದೊಡ್ಡ ರಾಜ್ಯಗಳಲ್ಲಿ 25 ರಿಂದ 30 ಮಂದಿ ನಾಯಕರನ್ನು ಗುರುತಿಸುವ ನಿರ್ಣಯ ಕೈಗೊಳ್ಳಲಾಗಿದೆ. ಈ ಕಾರ್ಯಕ್ಕಾಗಿ ನಿಯೋಜನೆಗೊಂಡಿರುವ ಸಂಯೋಜಕರು ಮೊದಲು ಸ್ಥಳೀಯ ಸಂಸ್ಥೆಗಳ ಸದಸ್ಯರು ಹಾಗೂ ಚುನಾವಣೆಗೆ ಸ್ಪರ್ಧಿಸಿದ್ದವರನ್ನು ಭೇಟಿಯಾಗಲಿದ್ದಾರೆ. ಸಂದರ್ಶನ ನಡೆಸುವ ಮೂಲಕ ಸಮರ್ಥರನ್ನು ಆಯ್ಕೆ ಮಾಡಲಿದ್ದಾರೆ. ಬಳಿಕ ಮೀನಾಕ್ಷಿ ನಟರಾಜನ್ ಹಾಗೂ ಸಂಘಟನೆಯ ಇತರ ಸದಸ್ಯರು ಆ ನಾಯಕರನ್ನು ಭೇಟಿಯಾಗಿ ಚರ್ಚಿಸಲಿದ್ದಾರೆ. ಹೀಗೆ ಆಯ್ಕೆಯಾದ ನಾಯಕರು 'ಸರ್ವೋದಯ ಶಿಬಿರ'ಗಳನ್ನು ಆಯೋಜಿಸಲಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಕರ್ನಾಟಕ, ಕೇರಳ ಹಾಗೂ ತಮಿಳುನಾಡು (ದಕ್ಷಿಣ ವಲಯ) ರಾಜ್ಯಗಳಲ್ಲಿ ಈ ಯೋಜನೆಯ ಕಾರ್ಯಚಟುವಟಿಕೆಗಳನ್ನು ನಡೆಸಲು ಡಿ.ಗೀತಾಕೃಷ್ಣನ್, ಕೆ.ಟಿ.ಬೆನ್ನಿ ಮತ್ತು ಕಿರಣ್ ಮುಘಬಸವ್ ಅವರನ್ನು ನೇಮಕ ಮಾಡಲಾಗಿದೆ.

ಜನರನ್ನು ಪಕ್ಷದೆಡೆಗೆ ಸೆಳೆಯುವ ಸಲುವಾಗಿ ಕಾಂಗ್ರೆಸ್‌ನ ಪರಿಶಿಷ್ಟ ಜಾತಿ ಘಟಕವು 'ಸಂವಿಧಾನ ರಕ್ಷಕರು' ಎಂಬ ಯೋಜನೆ ಪ್ರಕಟಿಸಿದೆ. ಮುಂದಿನ ದಿನಗಳಲ್ಲಿ ದೇಶದೆಲ್ಲೆಡೆ 10 ಲಕ್ಷ ಮಂದಿಯನ್ನು ಸಂವಿಧಾನ ರಕ್ಷಕರೆಂದು ನೇಮಿಸುವುದು ಈ ಯೋಜನೆಯ ಉದ್ದೇಶ. ಆ ಮೂಲಕ ಆರ್‌ಎಸ್‌ಎಸ್‌ಗೆ ತಿರುಗೇಟು ನೀಡಲು ಪಕ್ಷ ಮುಂದಾಗಿದೆ.

ಸಂವಿಧಾನ ರಕ್ಷಕರ ನೇಮಕ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಅವರಿಗೆ ತಜ್ಞರ ಮೂಲಕ ಸಂವಿಧಾನದ ಕುರಿತ ಆನ್‌ಲೈನ್ ತರಗತಿಗಳನ್ನು ನಡೆಸಲಾಗುತ್ತದೆ.



ಉತ್ತರಪ್ರದೇಶದ ಬರ್ಸಾನಾದಲ್ಲಿ ಮಂಗಳವಾರ ಜನರು ಸಾಂಪ್ರದಾಯಿಕವಾಗಿ ಪರಸ್ಪರ ಬಣ್ಣ ಎರಚಿಕೊಂಡು 'ಲಾಥ್‌ಮಾರ್ ಹೋಳಿ' ಆಚರಿಸಿದರು– ಪಿಟಿಐ

ಸಮವಸ್ತ್ರದ ಮೇಲೆ ಬಿಜೆಪಿ ಸ್ಕಾರ್ಫ್ ಧರಿಸಿದ ಪೊಲೀಸ್

ಲಖನೌ: ಉತ್ತರ ಪ್ರದೇಶದ ಪೊಲೀಸ್ ಅಧಿಕಾರಿಯೊಬ್ಬರು ತಮ್ಮ ಸಮವಸ್ತ್ರದ ಮೇಲೆ ಕೇಸರಿ ಬಣ್ಣದ ಬಿಜೆಪಿ ಸ್ಕಾರ್ಫ್ ಧರಿಸಿದ್ದು, ಉತ್ತರ ಪ್ರದೇಶ ಸರ್ಕಾರಕ್ಕೆ ಮುಜುಗರವನ್ನುಂಟು ಮಾಡಿದೆ.

ಪಿಲಿಭಿತ್ ಜಿಲ್ಲೆಯ ಪುರಾನ್ಪುರ ಠಾಣೆಯಲ್ಲಿ ನಿಯೋಜಿಸಲಾಗಿದ್ದ ಇನ್‌ಸ್ಪೆಕ್ಟರ್ ಅಶುತೋಷ್ ರಘುವಂಶಿ ಅವರ ಫೋಟೊ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಪೊಲೀಸ್ ಅಧಿಕಾರಿಗಳು ಈ ಬಗ್ಗೆ ತನಿಖೆಗೆ ಆದೇಶಿಸಿದ್ದಾರೆ.

ವರದಿಗಳ ಪ್ರಕಾರ, ರಘುವಂಶಿ ಕೆಲ ದಿನಗಳ ಹಿಂದೆ ಜಿಲ್ಲೆಯ ಗಜ್ರೌಲಾ ಠಾಣೆಯಿಂದ ವರ್ಗಾ ವಣೆಗೊಂಡ ವೇಳೆ ನಡೆದ ಸಮಾರಂಭದಲ್ಲಿ ಬಿಜೆಪಿ ಸ್ಕಾರ್ಫ್ ಧರಿಸಿದ್ದರು.ಹಲವಾರು ಬಿಜೆಪಿ ಕಾರ್ಯಕರ್ತರು ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿದ್ದು, ಅಧಿಕಾರಿಯೊಂದಿಗೆ ಫೋಟೊ ತೆಗೆಸಿಕೊಂಡಿದ್ದಾರೆ. 'ಈ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ತೆಲಂಗಾಣ ಬಿಜೆಪಿ ನಾಯಕರ ಜೊತೆ ಶಾ, ನಡ್ಡಾ ಸಭೆ

ನವದೆಹಲಿ (ಪಿಟಿಐ): ಈ ವರ್ಷದ ಅಂತ್ಯದಲ್ಲಿ ನಡೆಯಲಿರುವ ತೆಲಂಗಾಣ ವಿಧಾನಸಭೆ ಚುನಾವಣೆಯ ಪ್ರಚಾರಕ್ಕೆ ಚಾಲನೆ ನೀಡುವ ನಿಟ್ಟಿನಲ್ಲಿ ಬಿಜೆಪಿ ಹಿರಿಯ ನಾಯಕರಾದ ಕೇಂದ್ರ ಸಚಿವ ಅಮಿತ್ ಶಾ ಮತ್ತು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ತೆಲಂಗಾಣ ಬಿಜೆಪಿ ನಾಯಕರ ಜೊತೆ ಮಂಗಳವಾರ ಸಭೆ ನಡೆಸಿದರು.

ತೆಲಂಗಾಣ ಬಿಜೆಪಿ ಅಧ್ಯಕ್ಷ ಬಂಡಿ ಸಂಜಯ್ ಕುಮಾರ್ ಅವರು ಸಭೆಯಲ್ಲಿ ಹಾಜರಿದ್ದರು. ಅವರ ಜೊತೆ ಪಕ್ಷದ ರಾಜ್ಯ ಮತ್ತು ಕೇಂದ್ರದ ಹಲವು ನಾಯಕರು ಉಪಸ್ಥಿತರಿದ್ದರು.

ಈ ಸಭೆ ಕುರಿತು ಅಧಿಕೃತ ಹೇಳಿಕೆ ನೀಡಲಾಗಿಲ್ಲ. ಆದರೆ, ಈ ಸಭೆಯು ಚುನಾವಣೆಗೆ ಸಂಬಂಧಿಸಿದೆ. ಕಾಂಗ್ರೆಸ್ ಮತ್ತು ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಪಕ್ಷಗಳು ಪ್ರಚಾರ ಕಾರ್ಯವನ್ನು ತೀವ್ರಗೊಳಿಸಿರುವ ಬೆನ್ನಲ್ಲಿ ಈ ಸಭೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ದೆಹಲಿ ಅಬಕಾರಿ ನೀತಿ ಅನುಷ್ಠಾನದಲ್ಲಿ ನಡೆದಿದೆ ಎನ್ನಲಾದ ಹಗರಣದಲ್ಲಿ ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರನ್ನು ಸಿಬಿಐ ಬಂಧಿಸಿದೆ. ಬಿಆರ್‌ಎಸ್ ಸಂಸದೆ ಕೆ. ಕವಿತಾ ಕೂಡ ಈ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಈ ಬೆಳವಣಿಗೆಗಳ ಬೆನ್ನಲ್ಲೇ ಬಿಜೆಪಿ ಸಭೆ ನಡೆಸಿದೆ.

ಸಿಸೋಡಿಯಾ ಜಾಮೀನು ಅರ್ಜಿ ತಿರಸ್ಕರಿಸಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣ ಸಂಬಂಧ ಸಿಬಿಐ ಬಂಧಿನದಲ್ಲಿರುವ ದೆಹಲಿ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ತಿರಸ್ಕರಿಸಿದೆ. 'ಜಾಮೀನು ಅರ್ಜಿಯನ್ನು ದೆಹಲಿ ಹೈಕೋರ್ಟ್‌ನಲ್ಲಿ ಸಲ್ಲಿಸಿ' ಎಂದೂ ನ್ಯಾಯಾಲಯ ಹೇಳಿದೆ.

'ಸಂವಿಧಾನದ 32ನೇ ವಿಧಿ (ವ್ಯಕ್ತಿಯೊಬ್ಬರ ಹಕ್ಕನ್ನು ವಿನಾಕಾರಣ ನಿರಾಕರಿಸಿದ ಸಂದರ್ಭದಲ್ಲಿ, ಆ ವ್ಯಕ್ತಿಯು ನೇರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬಹುದು) ಅನ್ವಯ ಸಲ್ಲಿಸಲಾಗಿರುವ ಈ ಅರ್ಜಿಯ ವಿಚಾರಣೆಯನ್ನು ಈ ಹಂತದಲ್ಲಿ ನಡೆಸಲು ಸಾಧ್ಯವಿಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠ ಹೇಳಿತು.

'ಪತ್ರಕರ್ತ ವಿನೋದ್ ದುವಾ ಹಾಗೂ ಅರ್ನಬ್ ಗೋಸ್ವಾಮಿ ಅವರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಿತ್ತು' ಎಂದು ಸಿಸೋಡಿಯಾ ಪರ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದಿಸಿದರು.

'ನಮಗೆ ಅಧಿಕಾರ ಇಲ್ಲವೆಂದು ನಾವು ಹೇಳುತ್ತಿಲ್ಲ. ಜೊತೆಗೆ, ಬಾಂಬ್ ಹೈಕೋರ್ಟ್ ತೀರ್ಪಿನ ನಂತರವಷ್ಟೇ ಅರ್ನಬ್ ಗೋಸ್ವಾಮಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ವಿನೋದ್ ದುವಾ ಅವರದ್ದು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಪತ್ರಕರ್ತನ ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತಾಗಿತ್ತು. ಆದರೆ, ಸಿಸೋಡಿಯಾ ಅವರ ಪ್ರಕರಣವು ಭ್ರಷ್ಟಾಚಾರ ತಡೆ ಕಾಯ್ದೆ ಅಡಿ ಬರುತ್ತದೆ' ಎಂದು ಪೀಠ ಹೇಳಿತು.

'ಘಟನೆಯು ದೆಹಲಿಯಲ್ಲಿ ನಡೆದಿದೆ ಎಂದ ಮಾತ್ರಕ್ಕೆ ಸುಪ್ರೀಂ ಕೋರ್ಟ್‌ಗೆ ನೇರವಾಗಿ ಅರ್ಜಿ ಸಲ್ಲಿಸುವುದು ಸರಿಯಲ್ಲ. ವಿಚಾರಣಾ ನ್ಯಾಯಾಲಯ ಅಥವಾ ದೆಹಲಿ ಹೈಕೋರ್ಟ್‌ನಲ್ಲೇ ಅಪರಾಧ ಪ್ರಕ್ರಿಯಾ ಸಂಹಿತೆ 1973 ಅಡಿ ಜಾಮೀನಿಗೆ ಅರ್ಜಿ ಸಲ್ಲಿಸಲು ಅವಕಾಶವಿದೆಯಲ್ಲವೇ. ಈ ಹಂತದಲ್ಲಿ ಈ ಅರ್ಜಿಯ ವಿಚಾರಣೆ ನಡೆಸುವುದು ತಪ್ಪು ಸಂಪ್ರದಾಯಕ್ಕೆ ನಾಂದಿಯಾದೀತು' ಎಂದಿತು.

'ಅಧೀನ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಕಾರ್ಯದರ್ಶಿ, ಸಂಪುಟ, ಮುಖ್ಯಮಂತ್ರಿ ಮತ್ತು ಲೆಫ್ಟಿನೆಂಟ್ ಗವರ್ನರ್ ಹೀಗೆ ಹಲವು ಹಂತಗಳಲ್ಲಿ ನೀತಿ ಬದಲಾವಣೆಗೆ ಅನುಮೋದನೆ ನೀಡಲಾಗಿದೆ. ಜೊತೆಗೆ, ಶೋಧ ಕಾರ್ಯದ ವೇಳೆ ನಗದು ದೊರೆತಿಲ್ಲ. ನೀತಿ ಬದಲಾವಣೆಯನ್ನು ಅನುಮೋದಿಸಿದ ಲೆಫ್ಟಿನೆಂಟ್ ಗವರ್ನರ್ ಕೂಡ ಬಾಧ್ಯಸ್ಥರಾಗಿದ್ದಾರೆ' ಎಂದು ಸಿಂಘ್ವಿ ವಾದಿಸಿದರು.

ಅರ್ಜಿಯ ವಿಚಾರಣೆ ನಡೆಸಲು ಕೋರ್ಟ್ ನಿರಾಕರಿಸಿದ ನಂತರ ಸಿಂಘ್ವಿ ಅವರು ಅರ್ಜಿ ವಾಪಸ್ ಪಡೆದರು.

ಸಹಜೀವನ ನೋಂದಣಿ: ಪಿಐಎಲ್

ನವದೆಹಲಿ (ಪಿಟಿಐ): ಸಹಜೀವನ ಸಂಗಾತಿಯ ಮೇಲೆ ಅತ್ಯಾಚಾರ ಮತ್ತು ಹತ್ಯೆಯಂತಹ ಅಪರಾಧಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಹ ಜೀವನ ಸಂಬಂಧಗಳ (ಲೀವ್ ಇನ್ ರಿಲೇಷನ್‌ಶಿಪ್) ನೋಂದಣಿಗಾಗಿ ನಿಯಮ ರೂಪಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಕೆಯಾಗಿದೆ.

ಮುಂಬೈನ ಯುವತಿ ಶ್ರದ್ಧಾ ವಾಲಕರ್ ತನ್ನ ಸಹ ಜೀವನ ಸಂಗಾತಿ ಆಫ್ತಾಬ್ ಅಮೀನ್ ಪೂನಾವಾಲಾ ಎಂಬಾತನಿಂದ ಬರ್ಬರ ಹತ್ಯೆಗೀಡಾದ ಪ್ರಕರಣ ಉಲ್ಲೇಖಿಸಿರುವ ಅರ್ಜಿದಾರರು, ಸಹ ಜೀವನದ ಸಂಬಂಧಗಳ ನೋಂದಣಿಗೆ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ರೂಪಿಸಬೇಕೆಂದು ಕೋರಿದ್ದಾರೆ.

ಪಿಐಎಲ್ ಸಲ್ಲಿಸಿರುವ ವಕೀಲರಾದ ಮಮತಾ ರಾಣಿ, 'ಸುಳ್ಳು ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತಿರುವುದರಲ್ಲಿ ಭಾರಿ ಹೆಚ್ಚಳವಾಗಿದೆ. ಇಂತಹ ಪ್ರಕರಣಗಳಲ್ಲಿ ಸಂತ್ರಸ್ತೆಯರು ಆರೋಪಿತರೊಂದಿಗೆ ಸಹ ಜೀವನ ಸಂಬಂಧದಲ್ಲಿದ್ದುದಾಗಿ ಹೇಳಿಕೊಳ್ಳುತ್ತಾರೆ. ಸಹ ಜೀವನ ಸಂಬಂಧಕ್ಕೆ ನಿರ್ದಿಷ್ಟ ಕಾನೂನು ಚೌಕಟ್ಟು ಇಲ್ಲದೆ, ಸೂಕ್ತ ಸಾಕ್ಷ್ಯಾಧಾರಗಳಿಂದ ಅಪರಾಧ ಗಳನ್ನು ನ್ಯಾಯಾಲಯಗಳಲ್ಲಿ ಸಾಬೀತುಪಡಿಸುವುದು ಕಷ್ಟಸಾಧ್ಯವಾಗುತ್ತಿದೆ' ಎಂದು ಹೇಳಿದ್ದಾರೆ.

ಸಹ ಜೀವನ ಸಂಬಂಧಗಳ ನೋಂದಣಿಯಾದರೆ, ಸಂಗಾತಿಗಳಿಗೂ ಪರಸ್ಪರರ ಬಗ್ಗೆ ನಿಖರ ಮಾಹಿತಿ ಲಭಿಸುತ್ತದೆ. ಸಹ ಜೀವನ ಸಂಬಂಧದಲ್ಲಿರುವವರ ವೈವಾಹಿಕ ಸ್ಥಿತಿಗತಿ, ಅಪರಾಧ ಹಿನ್ನೆಲೆ ಮತ್ತು ಇತರ ಸಂಬಂಧಿತ ವಿವರಗಳು ಸರ್ಕಾರಕ್ಕೂ ಸಿಗುತ್ತವೆ ಎಂದು ಪಿಐಎಲ್‌ನಲ್ಲಿ ವಾದಿಸಿದ್ದಾರೆ.

ಚಂದ್ರಯಾನ–3: ಎಂಜಿನ್ ಪರೀಕ್ಷೆ ಯಶಸ್ವಿ

ಬೆಂಗಳೂರು (ಪಿಟಿಐ): ಬಾಹ್ಯಾಕಾಶ ಕಾರ್ಯಕ್ರಮ 'ಚಂದ್ರಯಾನ–3'ರ ರಾಕೆಟ್‌ನ ಕ್ರಯೋಜನಿಕ್ ಎಂಜಿನ್ (ಸಿಇ–200) ಕಾರ್ಯನಿರ್ವಹಣೆಗೆ ಸಂಬಂಧಿಸಿದ ಪರೀಕ್ಷೆಯನ್ನು ಯಶಸ್ವಿಯಾಗಿ ನೆರವೇರಿಸಲಾಯಿತು ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಿಳಿಸಿದೆ.

ತಮಿಳುನಾಡಿನ ಮಹೇಂದ್ರಗಿರಿಯಲ್ಲಿರುವ ಸಂಸ್ಥೆಯ 'ಪ್ರೊಪಲ್ಷನ್ ಘಟಕ'ದಲ್ಲಿ ಈ ಪರೀಕ್ಷೆಯನ್ನು ನೆರವೇರಿಸಲಾಯಿತು. 25 ಸೆಕೆಂಡ್‌ಗಳ ಕಾಲ ನಡೆದ ಈ ಪರೀಕ್ಷೆ ಸಂದರ್ಭದಲ್ಲಿ, ನಿಗದಿಪಡಿಸಿದ್ದ ಮಾನದಂಡಗಳ ಪ್ರಕಾರವೇ ಎಂಜಿನ್ ಕಾರ್ಯನಿರ್ವಹಿಸಿದ್ದು ಕಂಡುಬಂತು ಎಂದು ಇಸ್ರೊ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಈ ಪರೀಕ್ಷೆಯು ಉದ್ದೇಶಿತ ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಮಹತ್ವದ ಮೈಲುಗಲ್ಲು' ಎಂದು ಇಸ್ರೊ ಹೇಳಿದೆ. 'ಮುಂದಿನ ಹಂತದಲ್ಲಿ, ಈ ಕ್ರಯೋಜನಿಕ್ ಎಂಜಿನ್ ಅನ್ನು ಉಡಾವಣಾ ವಾಹನದ ಪ್ರೊಪೆಲ್ಲಂಟ್ ಟ್ಯಾಂಕ್‌ಗಳು ಹಾಗೂ ಇತರ ಭಾಗಗಳೊಂದಿಗೆ ಸಂಯೋಜಿಸಲಾಗುವುದು' ಎಂದೂ ತಿಳಿಸಿದೆ.

ವರ್ಷದ ಆರಂಭದಲ್ಲಿ, ಮಹೇಂದ್ರಗಿರಿಯಲ್ಲಿರುವ ಯು.ಆರ್.ರಾವ್ ಕೇಂದ್ರದಲ್ಲಿ 'ಚಂದ್ರಯಾನ–3'ರ ಲ್ಯಾಂಡರ್‌ನ ವಿವಿಧ ಪರೀಕ್ಷೆಗಳನ್ನು ಸಹ ಯಶಸ್ವಿಯಾಗಿ ನೆರವೇರಿಸಲಾಗಿತ್ತು.

ಜೂನ್‌ನಲ್ಲಿ ಚಂದ್ರಯಾನ–3ರ ಗಗನನೌಕೆಯನ್ನು ಚಂದ್ರನತ್ತ ಕಳಿಸುವ ಉದ್ದೇಶವನ್ನು ಇಸ್ರೊ ಹೊಂದಿದೆ. ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣಾ ವಾಹನ 'ವೆಹಿಕಲ್ ಮಾರ್ಕ್ 3' (ಎಲ್‌ವಿಎಂ3) ಬಳಸಿ ಗಗನನೌಕೆಯನ್ನು ಉಡ್ಡಯನ ಮಾಡಲಾಗುತ್ತದೆ.

ಸ್ಟಾಫರ್ಡ್ ಚಾಲೆಂಜ್ ಕಪ್ ಫುಟ್‌ಬಾಲ್ ಟೂರ್ನಿ

ಸೆಮಿಗೆ ಚೆನ್ನೈ: ಕಿಕ್‌ಸ್ಟಾರ್ಟ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ಚೆನ್ನೈಯಿನ್ ಎಫ್‌ಸಿ ತಂಡದವರು ಕೆಎಸ್‌ಎಫ್‌ಎ ಸ್ಟಾಫರ್ಡ್ ಚಾಲೆಂಜ್ ಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಎಚ್‌ಎಎಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ 'ಡಿ' ಗುಂಪಿನ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ 9–0ಯಿಂದ ಕೇರಳ ಯುನೈಟೆಡ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪರವಾಗಿ ಸೆಂಥಮಿಲ್ ಎಸ್. (66ನೇ ಮತ್ತು 90+3ನೇ ನಿಮಿಷ) ಎರಡು ಗೋಲು ದಾಖಲಿಸಿ ಮಿಂಚಿದರು. ಜೋಸೆಫ್ ಲಲ್ವೆನಿಮಾ (22ನೇ ನಿ.), ನಿಕೇತ್ ಎನ್. (41ನೇ ನಿ.), ಮೊಯಿರಂಗ್‌ದೆಮ್ ಗಿವ್ಸನ್ ಸಿಂಗ್ (51ನೇ ನಿ.), ಸೊಲಾಯ್‌ಮಲೈ ಆರ್. (73ನೇ ನಿ.), ಕ್ರಿಸ್ ಅಂಥೋನಿ ವೈಟ್ (82ನೇ ನಿ.) ಮತ್ತು ರಾಹುಲ್ ಮಂಜುಲಾ (90ನೇ ನಿ.) ತಲಾ ಒಂದು ಗೋಲು ಹೊಡೆದರು.

ಇನ್ನೊಂದು ಗೋಲು ಎದುರಾಳಿ ತಂಡದ ವಿಪುಲ್ ವೇಲಾಯುಧನ್ (45ನೇ ನಿ.) ಅವರಿಂದ 'ಉಡುಗೊರೆ' ರೂಪದಲ್ಲಿ ಬಂದಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ 'ಡಿ' ಗುಂಪಿನ ಇನ್ನೊಂದು ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ 3–1ರಿಂದ ಎಆರ್‌ಎ ಎಫ್‌ಸಿ ತಂಡವನ್ನು ಸೋಲಿಸಿತು. ಕಿಕ್‌ಸ್ಟಾರ್ಟ್ ಪರ ಮುಜಮಿರಿ ಅಬ್ದುಲ್ಲಾ ಎಂತಾಂಗ (45+3ನೇ ನಿ. ಮತ್ತು 58ನೇ ನಿ.) ಚೆಂಡನ್ನು ಗುರಿ ಸೇರಿಸಿದರು. ಫಿಂಟೊ (63ನೇ ನಿ.) ಒಂದು ಗೋಲು ಹೊಡೆದರು. ಎಆರ್‌ಎ ಪರ ನರೊ ಹರಿ ಶ್ರೇಷ್ಠ (90+6ನೇ ನಿ.) ಗೋಲು ಗಳಿಸಿದರು.

ಸಿ ಗುಂಪಿನ ಪಂದ್ಯದಲ್ಲಿ ಕೆಂಕ್ರೆ ಎಫ್‌ಸಿ 1–0ಯಿಂದ ಬಿಎಫ್‌ಸಿ ಎದುರು ಗೆದ್ದಿತು. ವಿಜೇತ ತಂಡಕ್ಕಾಗಿ ಜೈ ಭಾವನನಿ (42ನೇ ನಿ.) ಗೋಲು ಹೊಡೆದರು.

ನಾಲ್ಕರ ಘಟ್ಟಕ್ಕೆ ಡೆಲ್ಲಿ: ಸಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಡೆಲ್ಲಿ ಎಫ್‌ಸಿ 3–2ರಿಂದ ಶ್ರೀನಿಧಿ ಡೆಕ್ಕನ್ ಎದುರು ಜಯಿಸಿ ಸೆಮಿಫೈನಲ್ ಪ್ರವೇಶಿಸಿತು. ಡೆಲ್ಲಿ ಪರ ಗೌರವ್ ರಾವತ್ (48ನೇ ನಿ.), ಫಹಾದ್ ತೆಮುರಿ (74ನೇ ನಿ.) ಮತ್ತು ಅಜಯ್ ಸಿಂಗ್ (81ನೇ ನಿ.) ಗೋಲು ಹೊಡೆದರು. ಶ್ರೀನಿಧಿ ತಂಡಕ್ಕಾಗಿ ವಿನೀತ್ ಕುಮಾರ್ ವೇಲ್‌ಮುರುಗನ್ (46ನೇ ನಿ.) ಮತ್ತು ಆದಿತ್ಯ ತೋಮರ್ (87ನೇ ನಿ.) ಗೋಲು ದಾಖಲಿಸಿದರು.



ಡೆಲ್ಲಿ ಎಫ್‌ಸಿಯ ಅಭಯ್ ಗುರುಂಗ್ (ಎಡ) ಮತ್ತು ಶ್ರೀನಿಧಿ ಡೆಕ್ಕನ್‌ನ ಸಾಹಿಲ್ ತಮಾಂಗ್ ಚೆಂಡಿಗಾಗಿ ಪೈಪೋಟಿ ನಡೆಸಿದರು

– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

2024ರ ಟಿ20 ವಿಶ್ವಕಪ್: ಭಾರತಕ್ಕೆ ನೇರ ಅರ್ಹತೆ

ದುಬೈ (ಪಿಟಿಐ): ಭಾರತ ಸೇರಿದಂತೆ ಎಂಟು ತಂಡಗಳು 2024ರ ಆವೃತ್ತಿಯ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ನೇರ ಅರ್ಹತೆ ಗಳಿಸಿವೆ. ಬಾಂಗ್ಲಾದೇಶದಲ್ಲಿ ಈ ಟೂರ್ನಿ ನಿಗದಿಯಾಗಿದೆ.

ಇತ್ತೀಚೆಗೆ ದಕ್ಷಿಣ ಆಫ್ರಿಕಾದಲ್ಲಿ ನಡೆದ ವಿಶ್ವಕಪ್ ಟೂರ್ನಿಯ ಗುಂಪು ಹಂತದಲ್ಲಿ ಭಾರತ, ಅಗ್ರ ಮೂರರಲ್ಲಿ ಸ್ಥಾನ ಗಳಿಸಿದ್ದರಿಂದ ಸ್ವಯಂ ಅರ್ಹತೆ ಪಡೆದಿದೆ.

ಆತಿಥೇಯ ರಾಷ್ಟ್ರವಾಗಿ ಬಾಂಗ್ಲಾದೇಶ, ಉತ್ತಮ ರ್‍ಯಾಂಕಿಂಗ್ ಆಧಾರದ ಮೇಲೆ ಪಾಕಿಸ್ತಾನ ಸೇರಿದಂತೆ ಒಟ್ಟು ಎಂಟು ತಂಡಗಳು ನೇರ ಪ್ರವೇಶ ಗಿಟ್ಟಿಸಿವೆ.

ಆಸ್ಟ್ರೇಲಿಯಾ ಗಾಯಕ್ಕೆ ಬರೆ ಹಾಕುವ ಛಲ

ಬಾರ್ಡರ್–ಗಾವಸ್ಕರ್ ಟ್ರೋಫಿ 3ನೇ ಟೆಸ್ಟ್: ಸರಣಿ ಕೈವಶದ ಮೇಲೆ ರೋಹಿತ್ ಬಳಗದ ಕಣ್ಣು

ಪ್ರಜಾವಾಣಿ ವಾರ್ತೆ

ಇಂದೋರ್: ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಸ್ಥಾನ ಖಚಿತಪಡಿಸಿಕೊಳ್ಳುವತ್ತ ಚಿತ್ತ ನೆಟ್ಟಿರುವ ಭಾರತ ಕ್ರಿಕೆಟ್ ತಂಡವು ಬುಧವಾರ ಬಾರ್ಡರ್–ಗಾವಸ್ಕರ್ ಟೆಸ್ಟ್ ಸರಣಿಯ ಮೂರನೇ ಪಂದ್ಯದಲ್ಲಿ ಕಣಕ್ಕಿಳಿಯಲಿದೆ.

ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಮೊದಲ ಎರಡೂ ಪಂದ್ಯಗಳನ್ನು ಗೆದ್ದಿರುವ ರೋಹಿತ್ ಶರ್ಮಾ ಬಳಗವು ಅಪಾರ ಆತ್ಮವಿಶ್ವಾಸದಲ್ಲಿದೆ. ರೋಹಿತ್ ಜೊತೆಗೆ ಇನಿಂಗ್ಸ್ ಆರಂಭಿಸಲು ರಾಹುಲ್ ಅಥವಾ ಶುಭಮನ್ ಗಿಲ್ ಅವರಲ್ಲಿ ಒಬ್ಬರಿಗೆ ಅವಕಾಶ ಸಿಗಲಿದೆ. ಸತತ ವೈಫಲ್ಯ ಅನುಭವಿಸುತ್ತಿರುವ ರಾಹುಲ್ ಅವರಿಗೆ ವಿಶ್ರಾಂತಿ ನೀಡುವ ಸಾಧ್ಯತೆಯೇ ಹೆಚ್ಚಿದೆ.

ವಿಕೆಟ್‌ಕೀಪರ್ ಭರತ್ ಮತ್ತೊಂದು ಅವಕಾಶ ಗಿಟ್ಟಿಸುವುದು ಖಚಿತ. ಚೇತೇಶ್ವರ್ ಪೂಜಾರ, ವಿರಾಟ್ ಕೊಹ್ಲಿ ಅವರೂ ಮುಂದುವರಿಯಲಿದ್ದಾರೆ. ಆದರೆ ಶ್ರೇಯಸ್ ಅಯ್ಯರ್ ಆಡುವುದು ಖಚಿತವಿಲ್ಲ. ಅವರ ಬದಲಿಗೆ ಸೂರ್ಯಕುಮಾರ್ ಯಾದವ್‌ಗೆ ಮತ್ತೆ ಅವಕಾಶ ಸಿಗಬಹುದು. ಬೌಲಿಂಗ್‌ನಲ್ಲಿ ಮೂವರು ಸ್ಪಿನ್ನರ್–ಆಲ್‌ರೌಂಡರ್‌ಗಳು ಹಾಗೂ ಇಬ್ಬರು ವೇಗಿಗಳು ಕಣಕ್ಕಿಳಿಯುವ ಸಾಧ್ಯತೆಯೇ ಹೆಚ್ಚು.

ಹೋಳ್ಕರ್ ಅಂಗಣದಲ್ಲಿ
- ಭಾರತ ಆಡಿದ ಪಂದ್ಯ: 2
- ಗೆಲುವು: 2
- ಅತಿ ಹೆಚ್ಚು ವೈಯಕ್ತಿಕ ಸ್ಕೋರ್ (ಇನಿಂಗ್ಸ್): ಮಯಂಕ್ ಅಗರವಾಲ್ (243)
- ಒಟ್ಟು ವೈಯಕ್ತಿಕ ರನ್ (ಮೂರು ಇನಿಂಗ್ಸ್ ಸೇರಿ): ಅಜಿಂಕ್ಯ ರಹಾನೆ (297)
- ಇನಿಂಗ್ಸ್‌ನಲ್ಲಿ ಶ್ರೇಷ್ಠ ಬೌಲಿಂಗ್ ಆರ್. ಅಶ್ವಿನ್ (59ಕ್ಕೆ7)
- ಹೆಚ್ಚು ವಿಕೆಟ್ (ಎರಡು ಪಂದ್ಯಗಳಲ್ಲಿ) ಆರ್. ಅಶ್ವಿನ್ (18 ವಿಕೆಟ್)

ಆದರೆ ಆಸ್ಟ್ರೇಲಿಯಾ ತಂಡವು ಸತತ ಎರಡು ಸೋಲುಗಳಿಂದಾಗಿ ಒತ್ತಡದಲ್ಲಿದೆ. ನಾಲ್ಕು ಪಂದ್ಯಗಳ ಸರಣಿಯನ್ನು ಜಯಿಸುವ ಅವಕಾಶವಂತೂ ಪ್ರವಾಸಿ ಬಳಗಕ್ಕೆ ಉಳಿದಿಲ್ಲ. ಆದರೆ, ಇನ್ನೆರಡೂ ಪಂದ್ಯಗಳನ್ನು ಗೆದ್ದು ಸರಣಿ ಸಮ ಮಾಡಿಕೊಳ್ಳಬಹುದಷ್ಟೇ. ಆದರೆ ತಂಡಕ್ಕೆ ಪ್ರಮುಖ ಆಟಗಾರರ ಅನುಪಸ್ಥಿತಿ ಕಾಡುತ್ತಿದೆ. ನಾಯಕ ಪ್ಯಾಟ್ ಕಮಿನ್ಸ್ ಕೌಟುಂಬಿಕ ಕಾರಣಗಳಿಗಾಗಿ ತವರಿಗೆ ಮರಳಿದ್ದಾರೆ. ಜೋಶ್ ಹ್ಯಾಜಲ್‌ವುಡ್, ಬ್ಯಾಟರ್ ಡೇವಿಡ್ ವಾರ್ನರ್ ಫಿಟ್ ಆಗಿಲ್ಲ. ಇದರಿಂದಾಗಿ ತಂಡವನ್ನು ಸ್ಟೀವ್ ಸ್ಮಿತ್ ಮುನ್ನಡೆಸಲಿದ್ದಾರೆ. ಸ್ಪಿನ್ನರ್ ನೇಥನ್ ಲಯನ್ ಮಾತ್ರ ಅಮೋಘ ಲಯದಲ್ಲಿದ್ದಾರೆ.


ಭಾರತದ ಆರ್. ಅಶ್ವಿನ್ ಹಾಗೂ ರವೀಂದ್ರ ಜಡೇಜ –ಪಿಟಿಐ ಚಿತ್ರ

ಹೋಳ್ಕರ್‌ನಲ್ಲಿ ಮೂರನೇ ಟೆಸ್ಟ್: ದೇಶದ ಐತಿಹಾಸಿಕ ಕ್ರಿಕೆಟ್ ತಾಣಗಳಲ್ಲಿ ಒಂದಾಗಿರುವ ಇಂದೋರ್‌ನಲ್ಲಿ ನಡೆಯುತ್ತಿರುವ ಮೂರನೇ ಟೆಸ್ಟ್ ಇದಾಗಿದೆ. ಪೂರ್ವನಿರ್ಧರಿತ ವೇಳಾಪಟ್ಟಿಯ ಪ್ರಕಾರ ಈ ಪಂದ್ಯವು ಧರ್ಮಶಾಲಾದಲ್ಲಿ ನಡೆಯಬೇಕಿತ್ತು. ಆದರೆ, ತಾಂತ್ರಿಕ ಕಾರಣಗಳಿಂದಾಗಿ ಪಂದ್ಯವನ್ನು ಇಂದೋರ್‌ಗೆ ಸ್ಥಳಾಂತರಿಸಲಾಗಿದೆ.

ಇಲ್ಲಿಯ ಪಿಚ್‌ನಲ್ಲಿ ಇಲ್ಲಿಯವರೆಗೆ ನಡೆದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ರನ್‌ಗಳ ಹೊಳೆಯೇ ಹರಿದಿದೆ. ವೀರೇಂದ್ರ ಸೆಹ್ವಾಗ್ ದ್ವಿಶತಕ ಹೊಡೆದ ಅಂಗಳವೂ ಇದಾಗಿದೆ. ನ್ಯೂಜಿಲೆಂಡ್ ಹಾಗೂ ಬಾಂಗ್ಲಾದೇಶ ವಿರುದ್ಧ ನಡೆದಿದ್ದ ಟೆಸ್ಟ್‌ಗಳಲ್ಲಿಯೂ ಭಾರತ ಜಯಿಸಿತ್ತು. ಆತಿಥೇಯ ಬ್ಯಾಟರ್‌ಗಳು ಮಿಂಚಿದ್ದರು. ವಿರಾಟ್ ಕೊಹ್ಲಿ ದ್ವಿಶತಕ ಕೂಡ ಗಳಿಸಿದ್ದರು.

ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್, ಶುಭಮನ್ ಗಿಲ್, ಚೇತೇಶ್ವರ್ ಪೂಜಾರ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಸ್. ಭರತ್, ಇಶಾನ್ ಕಿಶನ್, ಆರ್. ಅಶ್ವಿನ್, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ರವೀಂದ್ರ ಜಡೇಜ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮೇಶ್ ಯಾದವ್, ಸೂರ್ಯಕುಮಾರ್ ಯಾದವ್, ಜೈದೇವ್ ಉನದ್ಕತ್

ಆಸ್ಟ್ರೇಲಿಯಾ: ಸ್ಟೀವ್ ಸ್ಮಿತ್ (ನಾಯಕ), ಸ್ಕಾಟ್ ಬೊಲ್ಯಾಂಡ್, ಅಲೆಕ್ಸ್ ಕ್ಯಾರಿ, ಕ್ಯಾಮರಾನ್ ಗ್ರೀನ್, ಪೀಟರ್ ಹ್ಯಾಂಡ್ಸ್‌ಕಂಬ್, ಟ್ರಾವಿಸ್ ಹೆಡ್, ಉಸ್ಮಾನ್ ಖ್ವಾಜಾ, ಮ್ಯಾಟ್ ಕುನೇಮನ್, ಮಾರ್ನಸ್ ಲಾಬುಷೇನ್, ನೇಥನ್ ಲಯನ್, ಲ್ಯಾನ್ಸ್ ಮಾರಿಸ್, ಟಾಡ್ ಮರ್ಫಿ, ಮ್ಯಾಥ್ಯೂ ರೆನ್‌ಶಾ, ಮಿಚೆಲ್ ಸ್ಟಾರ್ಕ್, ಮಿಚೆಲ್ ಸ್ವಿಪ್ಸನ್.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿ: ಅನುಪಮಾಗೆ ಪ್ರಶಸ್ತಿ

ಮಿಥುನ್ ಮಂಜುನಾಥ್‌ಗೆ ಕಿರೀಟ

ಪುಣೆ (ಪಿಟಿಐ): ದಿಟ್ಟ ಆಟವಾಡಿದ ಕರ್ನಾಟಕದ ಮಿಥುನ್ ಮಂಜುನಾಥ್ ಅವರು ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಇಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ ಮಂಗಳವಾರ ಮಿಥುನ್ 21-16, 21-11ರಿಂದ ಮಧ್ಯಪ್ರದೇಶದ ಪ್ರಿಯಾಂಶು ರಾಜಾವತ್ ಅವರನ್ನು ಮಣಿಸಿದರು.

ಅಮೋಘ ಡಿಫೆನ್ಸ್ ಸಾಮರ್ಥ್ಯ, ಕಾರ್ಯತಂತ್ರ ಉಪಯೋಗಿಸಿದ ಮಿಥುನ್, ಕೇವಲ 38 ನಿಮಿಷಗಳಲ್ಲಿ ಪಂದ್ಯವನ್ನು ತಮ್ಮದಾಗಿಸಿಕೊಂಡರು. ಈ ಹಿಂದೆ ಮಿಥುನ್ ಅವರು ಫ್ರಾನ್ಸ್‌ನಲ್ಲಿ ನಡೆದ ಆರ್ಲಿಯನ್ಸ್ ಮಾಸ್ಟರ್ಸ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದರು.

ಮಹಿಳಾ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅನುಪಮಾ ಉಪಾಧ್ಯಾಯ ಅವರು 20-22, 21-17, 24-22ರಿಂದ ಆಕರ್ಷಿ ಕಶ್ಯಪ್ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದರು. ಮಹಿಳಾ ಡಬಲ್ಸ್‌ನಲ್ಲಿ ಗಾಯತ್ರಿ ಗೋಪಿಚಂದ್–ತ್ರಿಶಾ ಜೋಲಿ 21-10, 21-9ರಿಂದ ಕಾವ್ಯಾ ಗುಪ್ತಾ– ದೀಪ್ಸಿಕಾ ಸಿಂಗ್ ವಿರುದ್ಧ ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಪುರುಷರ ಡಬಲ್ಸ್‌ನಲ್ಲಿ ಎಸ್. ಕುಶಾಲ್ ರಾಜ್– ಪ್ರಕಾಶ್ ರಾಜ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ ಟಿ. ಹೇಮನಾಗೇಂದ್ರ ಬಾಬು–ಕನಿಕಾ ಕಿರೀಟ ಧರಿಸಿದರು.


ಮಿಥುನ್ ಮಂಜುನಾಥ್


ಅನುಪಮಾ ಉಪಾಧ್ಯಾಯ

ಮೇ 21ರಂದು ಟಿಸಿಎಸ್ 10ಕೆ ರನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಾನನಗರಿಯಲ್ಲಿ ಮೇ 21ರಂದು ಟಿಸಿಎಸ್ ವಿಶ್ವ 10ಕೆ ಓಟ ನಡೆಯಲಿದೆ. ಇದು 15ನೇ ಆವೃತ್ತಿಯಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸುವವರು ಬುಧವಾರದಿಂದ ನೋಂದಣಿ ಮಾಡಿಕೊಳ್ಳಬೇಕು. ಏಪ್ರಿಲ್ 28 ಕೊನೆಯ ದಿನವಾಗಿದೆ. 10ಕೆ ರನ್ ಅಪ್ಲಿಕೇಷನ್‌ನಲ್ಲಿ ಪ್ರತ್ಯೇಕವಾಗಿ ವರ್ಚುವಲ್ ರನ್ ಕೂಡ ಇದೆ. ಅದರ ನೋಂದಣಿ ಪ್ರಕ್ರಿಯೆಯು ಮೇ 15ರಂದು ಮುಕ್ತಾಯವಾಗುತ್ತದೆ. http://tcsworld10k.procam.in ಜಾಲತಾಣದಲ್ಲಿ ನೋಂದಾಯಿಸಬಹುದು.

ವಿಶ್ವ ಅಥ್ಲೆಟಿಕ್ಸ್ ಗೋಲ್ಡ್‌ಲೇಬಲ್ ರೇಸ್‌ನಲ್ಲಿ ಕ್ರೀಡಾಪಟುಗಳು ಮತ್ತು ಹವ್ಯಾಸಿ ಓಟಗಾರರು, ಫಿಟ್ನೆಸ್ ಪ್ರಿಯರು 10ಕೆ ರನ್‌ನಲ್ಲಿ ಭಾಗವಹಿಸುವರು. ಮಜಾ ರನ್ (5.1 ಕಿ.ಮೀ), ಹಿರಿಯ ನಾಗರಿಕರಿಗಾಗಿ ರನ್ (4.2 ಕಿ.ಮೀ) ಮತ್ತು ಅಂಗವಿಕಲರಿಗಾಗಿ (ಚಾಂಪಿಯನ್ಸ್ ವಿಥ್ ಡಿಸೆಬಲಿಟಿ –4.2 ಕಿ.ಮೀ) ಸ್ಪರ್ಧೆಗಳು ನಡೆಯಲಿವೆ. ಒಟ್ಟು ₹ 1.74 ಕೋಟಿ ಮೊತ್ತದ ಪ್ರಶಸ್ತಿಗಳಿವೆ.

‘ಟಿಸಿಎಸ್ ವರ್ಲ್ಡ್ 10ಕೆ ಓಟವು 15 ವರ್ಷಗಳನ್ನು ಪೂರೈಸಿದೆ. ಸಮಾಜದಲ್ಲಿ ಸ್ವಸ್ಥ ಸಮುದಾಯಕ್ಕಾಗಿ ಈ ಅವಧಿಯಲ್ಲಿ ನಾವು ಶ್ರಮಿಸಿದ್ದೇವೆ. ವಿಶ್ವದಾದ್ಯಂತ ಇರುವ ಫಿಟ್ನೆಸ್ ಪ್ರಿಯರನ್ನು ಒಗ್ಗೂಡಿಸಿದೆ. ಕ್ರೀಡೆಯ ಶಕ್ತಿಯ ಹಬ್ಬ ಇದಾಗಿದೆ’ ಎಂದು ಟಿಸಿಎಸ್ ಗ್ಲೋಬಲ್ ಆರ್‌ಎಂಜಿ ಮುಖ್ಯಸ್ಥ ಮತ್ತು ಉಪಾಧ್ಯಕ್ಷ ಇ.ಎಸ್. ಚಕ್ರವರ್ತಿ ಮಂಗಳವಾರ ನಡೆದ ಓಟ ಘೋಷಣೆ ಕಾರ್ಯಕ್ರಮದಲ್ಲಿ ಹೇಳಿದರು.

ಕಂಠೀರವ ಕ್ರೀಡಾಂಗಣದಿಂದ ಓಟ ಆರಂಭವಾಗಲಿದೆ. ‘ಬೂಮರಾಂಗ್ ಆಕೃತಿ’ಯ ಮಾದರಿಯಲ್ಲಿ ಮಾರ್ಗ ನಿಗದಿಪಡಿಸಲಾಗಿದೆ. ಇದು ವಿಧಾನಸೌಧ, ಕಬ್ಬನ್ ಪಾರ್ಕ್ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣ ಸೇರಿದಂತೆ ಐತಿಹಾಸಿಕ ಸ್ಥಳಗಳ ಮೂಲಕ ಓಟ ಸಾಗಲಿದೆ ಎಂದರು.

ಮಹಿಳಾ ವಿಭಾಗದಲ್ಲಿ ಅಲೆಕ್ಸಿಯಾ ಪುಟೆಲ್ಲಾಸ್‌ಗೆ ಗೌರವ

ಫಿಫಾ ವರ್ಷದ ಶ್ರೇಷ್ಠ ಆಟಗಾರ ಮೆಸ್ಸಿ

ಪ್ಯಾರಿಸ್ (ಎಪಿ): ವಿಶ್ವಕಪ್ ವಿಜೇತ ಅರ್ಜೆಂಟೀನಾ ತಂಡದ ಲಯೊನೆಲ್ ಮೆಸ್ಸಿ ಅವರಿಗೆ ಸೋಮವಾರ ಫಿಫಾ ವರ್ಷದ ಶ್ರೇಷ್ಠ ಫುಟ್‌ಬಾಲ್ ಆಟಗಾರ ಗೌರವ ಒಲಿದಿದೆ.

ಸ್ಪೇನ್ ಮಹಿಳಾ ತಂಡದ ಅಲೆಕ್ಸಿಯಾ ಪುಟೆಲ್ಲಾಸ್ ಅವರು ಸತತ ಎರಡನೇ ವರ್ಷ ಶ್ರೇಷ್ಠ ಆಟಗಾರ್ತಿ ಎನಿಸಿಕೊಂಡಿದ್ದಾರೆ.

ಕತಾರ್‌ನಲ್ಲಿ ಕಳೆದ ವರ್ಷ ನಡೆದ ಪುರುಷರ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಮೆಸ್ಸಿ ನಾಯಕತ್ವದ ಅರ್ಜೆಂಟೀನಾ ತಂಡವು ಫ್ರಾನ್ಸ್ ತಂಡವನ್ನು ಮಣಿಸಿ ಪ್ರಶಸ್ತಿ ಜಯಿಸಿತ್ತು.

ಶ್ರೇಷ್ಠ ಆಟಗಾರ ಸ್ಪರ್ಧೆಯಲ್ಲಿ ಮೆಸ್ಸಿ ಅವರು ಫ್ರಾನ್ಸ್‌ನ ಕಿಲಿಯನ್ ಎಂಬಾಪೆ ಮತ್ತು ಕರೀಂ ಬೆಂಜೆಮಾ ಅವರನ್ನು ಹಿಂದಿಕ್ಕಿದ್ದಾರೆ. ಇದರೊಂದಿಗೆ 14 ವರ್ಷಗಳಲ್ಲಿ ಏಳನೇ ಬಾರಿ ಈ ಗೌರವ ತಮ್ಮದಾಗಿಸಿಕೊಂಡಿದ್ದಾರೆ.



ಲಯೊನೆಲ್ ಮೆಸ್ಸಿ ಮತ್ತು ಅಲೆಕ್ಸಿಯಾ ಪುಟೆಲ್ಲಾಸ್– ಎಎಫ್‌ಪಿ ಚಿತ್ರಗಳು

ಶ್ರೇಷ್ಠ ಆಟಗಾರ್ತಿ ಪ್ರಶಸ್ತಿಗಾಗಿ ಪುಟೆಲ್ಲಾಸ್ ಅವರ ಜೊತೆಗೆ ಅಮೆರಿಕದ ಅಲೆಕ್ಸ್ ಮಾರ್ಗನ್ ಮತ್ತು ಇಂಗ್ಲೆಂಡ್‌ನ ಬೆಥ್ ಮೀಡ್ ಸ್ಪರ್ಧೆಯಲ್ಲಿದ್ದರು.

ಅರ್ಜೆಂಟೀನಾ ತಂಡದ ಲಯೊನೆಲ್ ಸ್ಕಾಲೊನಿ ಅವರು ಪುರುಷರ ತಂಡದ ಶ್ರೇಷ್ಠ ಕೋಚ್ ಗೌರವ ಪಡೆದಿದ್ದಾರೆ.

ಕುಸ್ತಿಪಟುಗಳ ಆರೋಪ ಅಲ್ಲಗಳೆದ ಬ್ರಿಜ್‌ಭೂಷಣ್

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರು ತಮ್ಮ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪಗಳನ್ನು ಅಲ್ಲಗಳೆದಿದ್ದಾರೆ.



ಆರೋಪಗಳ ತನಿಖೆಗಾಗಿ ಸರ್ಕಾರ ನೇಮಿಸಿರುವ ಮೇಲುಸ್ತುವಾರಿ ಸಮಿತಿ ಮುಂದೆ ಬಿಜೆಪಿ ಸಂಸದರೂ ಆಗಿರುವ ಬ್ರಿಜ್‌ಭೂಷಣ್ ಮಂಗಳವಾರ ಹಾಜರಾದರು.

ಬ್ರಿಜ್ ಭೂಷಣ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಮತ್ತು ಫೆಡರೇಷನ್‌ನಲ್ಲಿ ಸರ್ವಾಧಿಕಾರಿಯಂತೆ ಆಡಳಿತ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಖ್ಯಾತನಾಮ ಕುಸ್ತಿಪಟುಗಳು ಜಂತರ್‌ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದ್ದರು. ಹೀಗಾಗಿ ಅನುಭವಿ ಬಾಕ್ಸರ್ ಮೇರಿ ಕೋಮ್ ನೇತೃತ್ವದಲ್ಲಿ ಜನವರಿ 23ರಂದು ಸಮಿತಿಯನ್ನು ರಚಿಸಲಾಗಿತ್ತು. ಡಬ್ಲ್ಯುಎಫ್‌ಐನ ದೈನಂದಿನ ವ್ಯವಹಾರವನ್ನೂ ಈ ಸಮಿತಿ ನೋಡಿಕೊಳ್ಳುತ್ತಿದೆ.

20 ಮಂದಿ ಬೆಂಬಲಿಗರೊಂದಿಗೆ ಬ್ರಿಜ್‌ಭೂಷಭ್ ಸಭೆಗೆ ಬಂದರು.

‘ಬ್ರಿಜ್‌ಭೂಷಣ್ ಅವರು ಸಮಿತಿಯ ಮುಂದೆ ತಾನು ತಪ್ಪು ಮಾಡಿಲ್ಲ ಎಂದಿದ್ದಾರೆ’ ಎಂದು ಕ್ರೀಡಾ ಸಚಿವಾಲಯದ ಮೂಲಗಳು ತಿಳಿಸಿವೆ.

‘ಮೇಲುಸ್ತುವಾರಿ ಸಮಿತಿಯಲ್ಲಿದ್ದ ಕುಸ್ತಿಪಟು ಯೋಗೇಶ್ವರ್ ದತ್ತ ಅವರು ಬ್ರಿಜ್‌ಭೂಷಣ್ ಪರವಾಗಿದ್ದು, ತನಿಖೆಗೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಗಳನ್ನು ಮಾಧ್ಯಮಗಳಿಗೆ ಸೋರಿಕೆ ಮಾಡುತ್ತಿದ್ದಾರೆ’ ಎಂದು ಪ್ರತಿಭಟನೆ ನಡೆಸಿದ್ದ ಕುಸ್ತಿಪಟುಗಳು ಆರೋಪಿಸಿದ್ದಾರೆ.

ವಾಲಿಬಾಲ್: ಟಾರ್ಪಿಡೋಸ್ ಜಯಭೇರಿ

ಬೆಂಗಳೂರು: ಜಿದ್ದಾಜಿದ್ದಿ ಹಣಾಹಣಿಯಲ್ಲಿ ಬೆಂಗಳೂರು ಟಾರ್ಪಿಡೋಸ್ ತಂಡವು ಪ್ರೈಮ್ ವಾಲಿಬಾಲ್ ಲೀಗ್ ಟೂರ್ನಿಯಲ್ಲಿ ಕ್ಯಾಲಿಕಟ್ ಹೀರೋಸ್‌ಗೆ ಸೋಲುಣಿಸಿತು. ಇದರೊಂದಿಗೆ ಸೆಮಿಫೈನಲ್ ಆಸೆ ಜೀವಂತವಾಗಿರಿಸಿಕೊಂಡಿತು.

ಕೊಚ್ಚಿ ರೀಜನಲ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಟಾರ್ಪಿಡೋಸ್ 15-11, 15-11, 13-15, 10-15, 15-14ರಿಂದ ಕ್ಯಾಲಿಕಟ್ ತಂಡವನ್ನು ಮಣಿಸಿತು.

ಇರಾನಿ ಕಪ್ ಪಂದ್ಯ ಇಂದಿನಿಂದ: ಕಣದಲ್ಲಿ ಮಯಂಕ್ ಅಗರವಾಲ್

ಗ್ವಾಲಿಯರ್ (ಪಿಟಿಐ): ಬೆಂಗಳೂರಿನ ಮಯಂಕ್ ಅಗರವಾಲ್ ನಾಯಕತ್ವದ ರೆಸ್ಟ್ ಆಫ್ ಇಂಡಿಯಾ ತಂಡವು ಬುಧವಾರ ಆರಂಭವಾಗಲಿರುವ ಇರಾನಿ ಕಪ್ ಕ್ರಿಕೆಟ್ ಪಂದ್ಯದಲ್ಲಿ ಮಧ್ಯಪ್ರದೇಶ ತಂಡವನ್ನು ಎದುರಿಸಲಿದೆ.

2021–22ರಲ್ಲಿ ಮಧ್ಯಪ್ರದೇಶ ತಂಡವು ರಣಜಿ ಟ್ರೋಫಿ ಜಯಿಸಿತ್ತು.

ದೇಶಿ ಕ್ರಿಕೆಟ್ ಋತುವಿನ ಕೊನೆಯ ಟೂರ್ನಿ ಇದಾಗಿದೆ. ಕಳೆದ 15 ವರ್ಷಗಳಲ್ಲಿ ಇರಾನಿ ಟ್ರೋಫಿ ಟೂರ್ನಿಯ ಹೊಳಪು ಕುಂದಿದೆ. ಆದರೆ ಕೆಲವು ಆಟಗಾರರಿಗೆ ಇದು ಮಹತ್ವದ್ದಾಗುವ ಸಾಧ್ಯತೆ ಇದೆ. ಮಯಂಕ್ ಅವರಿಗೆ ಮರಳಿ ಭಾರತ ತಂಡದಲ್ಲಿ ಸ್ಥಾನ ಗಳಿಸಲು ಈ ಟೂರ್ನಿಯು ವೇದಿಕೆಯಾಗುವ ನಿರೀಕ್ಷೆ ಇದೆ.

ಇತ್ತೀಚೆಗೆ ಮುಗಿದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಮಯಂಕ್ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ಆಗಿದ್ದರು. ಅವರ ನಾಯಕತ್ವದ ಕರ್ನಾಟಕ ತಂಡವು ಸೆಮಿಫೈನಲ್ ಪ್ರವೇಶಿಸಿತ್ತು.

ಭಾರತ ತಂಡದಲ್ಲಿರುವ ಕನ್ನಡಿಗ ಕೆ.ಎಲ್. ರಾಹುಲ್ ಸತತ ವೈಫಲ್ಯ ಅನುಭವಿಸುತ್ತಿದ್ದಾರೆ. ಅವರು ಸ್ಥಾನ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ. ಇತ್ತ ದೇಶಿ ಕ್ರಿಕೆಟ್‌ನಲ್ಲಿ ಇನ್ನಷ್ಟು ಉತ್ತಮವಾಗಿ ಆಡಿದರೆ ಮಯಂಕ್ ಅವರಿಗೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಆಡಲಿರುವ ಭಾರತ ತಂಡಕ್ಕೂ ಆಯ್ಕೆಯಾಗುವ ಅವಕಾಶ ಸಿಗಬಹುದು.

ಮಧ್ಯಪ್ರದೇಶ ತಂಡದಲ್ಲಿ ರಜತ್ ಪಾಟೀದಾರ್, ಬೌಲರ್ ಆವೇಶ್ ಖಾನ್ ಅವರು ಪ್ರಮುಖ ಆಕರ್ಷಣೆಯಾಗಿದ್ದಾರೆ.


ಮಯಂಕ್ ಅಗರವಾಲ್

ಐಪಿಎಲ್‌ಗೆ ಬೂಮ್ರಾ ಅಲಭ್ಯ

ನವದೆಹಲಿ (ಪಿಟಿಐ): ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಈ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿಯೂ ಆಡುವುದಿಲ್ಲ.



ಭಾರತ ತಂಡದ ಆಟಗಾರ ಬೂಮ್ರಾ , ಹೋದ ವರ್ಷದ ಟಿ20 ವಿಶ್ವಕಪ್ ಟೂರ್ನಿ ಸಂದರ್ಭದಲ್ಲಿ ಬೆನ್ನುನೋವಿನಿಂದ ಬಳಲಿದ್ದರು. ಅಲ್ಲಿಂದ ಯಾವುದೇ ಟೂರ್ನಿಯಲ್ಲಿ ಕಣಕ್ಕಿಳಿದಿಲ್ಲ. ಅವರು ಸಂಪೂರ್ಣ ಗುಣಮುಖರಾಗಲು ಇನ್ನೂ 6 ತಿಂಗಳು ಬೇಕಾಗಬಹುದು ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

‘ಐಪಿಎಲ್ ಟೂರ್ನಿಯಿಂದ ಬೂಮ್ರಾ ಅವರನ್ನು ಕೈಬಿಡಲಾಗಿದೆ. ಇದೇ ವರ್ಷ ಭಾರತದಲ್ಲಿ ನಡೆಯುವ ಏಕದಿನ ವಿಶ್ವಕಪ್ ಟೂರ್ನಿಗೆ ಫಿಟ್ ಆಗುವ ಭರವಸೆ ಇದೆ’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಷ್ಟ್ರೀಯ ಥ್ರೊ ಸ್ಪರ್ಧೆಗಳು ಇಂದಿನಿಂದ

ತೋರಣಗಲ್ಲು, ಬಳ್ಳಾರಿ: ರಾಷ್ಟ್ರೀಯ ಥ್ರೊ ಮತ್ತು ಜಂಪ್ ಸ್ಪರ್ಧೆಗಳು ಇಲ್ಲಿಯ ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್‌ನಲ್ಲಿ ಬುಧವಾರದಿಂದ ನಡೆಯಲಿವೆ.

ರಾಷ್ಟ್ರೀಯ ದಾಖಲೆ ಹೊಂದಿರುವ ಶಾಟ್‌ಪಟ್ ಅಥ್ಲೀಟ್ ತಜಿಂದರ್ ಪಾಲ್ ಸಿಂಗ್ ತೂರ್, ಕರಣ್ ವೀರ್ ಸಿಂಗ್ ಮತ್ತು ಟ್ರಿಪಲ್ ಜಂಪ್ ಅಥ್ಲೀಟ್ ಎಲ್ದೋಸ್ ಪೌಲ್ ಅವರು ಸ್ಪರ್ಧೆಗಳ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಈ ತಿಂಗಳ ಆರಂಭದಲ್ಲಿ ನೂರ್ ಸುಲ್ತಾನ್‌ನಲ್ಲಿ ನಡೆದ ಏಷ್ಯನ್ ಇಂಡೋರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ತೂರ್ ಮತ್ತು ಕರಣ್‌ವೀರ್ ಅವರು ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದಿದ್ದರು. ಇಲ್ಲಿಯೂ ಅಗ್ರಸ್ಥಾನಕ್ಕಾಗಿ ಅವರು ಪೈಪೋಟಿ ನಡೆಸುವ ಸಾಧ್ಯತೆಯಿದೆ.

ಇಂದ್ರಜೀತ್ ಸಿಂಗ್ ಮತ್ತು ಸಾಹಿಬ್ ಸಿಂಗ್ ಕೂಡ ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ. ಗುರುವಾರದಿಂದ ಜಂಪ್ ಸ್ಪರ್ಧೆಗಳು ನಡೆಯಲಿದ್ದು, ಎಲ್ದೋಸ್ ಅವರೊಂದಿಗೆ ಅಬ್ದುಲ್ಲಾ ಅಬೂಬಕರ್, ಪ್ರವೀಣ್ ಚಿತ್ರವೇಲ್ ಮತ್ತು ಕಾರ್ತಿಕ್ ಉನ್ನಿಕೃಷ್ಣನ್ ಅವರು ಟ್ರಿಪಲ್ ಜಂಪ್‌ನಲ್ಲಿ ಪೈಪೋಟಿ ನಡೆಸಲಿದ್ದಾರೆ.

ಲಾಂಗ್‌ಜಂಪ್‌ನಲ್ಲಿ ಜೆಸ್ವಿನ್ ಅಲ್‌ಡ್ರಿನ್ ಮತ್ತು ಮುಹಮ್ಮದ್ ಅನೀಸ್ ಯಾಹ್ಯಾ ಚಿನ್ನದ ಪದಕಕ್ಕಾಗಿ ಹೋರಾಡಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪಿಎನ್‌ಬಿಗೆ ಜಯ

ಬೆಂಗಳೂರು: ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ಮತ್ತು ಸೆಂಟ್ರಲ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ (ಸಿಐಎಸ್‌ಎಫ್) ತಂಡಗಳು ಹಾಕಿ ಇಂಡಿಯಾ ಆಶ್ರಯದಲ್ಲಿ ನಡೆಯುತ್ತಿರುವ ಪುರುಷರ ರಾಷ್ಟ್ರೀಯ ಅಂತರ ಇಲಾಖಾ ಹಾಕಿ ಟೂರ್ನಿಯಲ್ಲಿ ಜಯ ಗಳಿಸಿದವು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ಪಿಎನ್‌ಬಿ 6–0ರಿಂದ ಸಶಸ್ತ್ರ ಸೀಮಾ ಬಲ ತಂಡದ ಎದುರು ಗೆದ್ದರೆ, ಸಿಐಎಸ್‌ಎಫ್ 3–2ರಿಂದ ಸಿಐಜಿಐ ತಂಡದ ವಿರುದ್ಧ ಜಯಿಸಿತು. ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ 3–1ರಿಂದ ಸೆಂಟ್ರಲ್ ರಿಸರ್ವ್ ಪೊಲೀಸ್ ಫೋರ್ಸ್ ಎದುರು, ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ 4–0ರಿಂದ ಕೆನರಾ ಬ್ಯಾಂಕ್ ಎದುರು ಜಯ ಗಳಿಸಿದವು.

ಫುಟ್‌ಬಾಲ್: ಕರ್ನಾಟಕಕ್ಕೆ ಸರ್ವಿಸಸ್ ಸವಾಲು

ರಿಯಾದ್, ಸೌದಿ ಅರೇಬಿಯಾ: ಕರ್ನಾಟಕ ತಂಡವು ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಬುಧವಾರ ಸರ್ವಿಸಸ್ ಸವಾಲು ಎದುರಿಸಲಿದೆ.

ಇಲ್ಲಿಯ ಕಿಂಗ್ ಫಹಾದ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಕರ್ನಾಟಕ ಗೆಲುವಿನ ವಿಶ್ವಾಸದಲ್ಲಿದೆ. ನಾಲ್ಕರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಪಂಜಾಬ್– ಮೇಘಾಲಯ ಮುಖಾಮುಖಿಯಾಗಲಿವೆ.

ಕ್ರಿಕೆಟ್: ಕಿವೀಸ್‌ಗೆ ರೋಚಕ ಜಯ

ವೆಲ್ಲಿಂಗ್ಟನ್ (ಎಪಿ): ನ್ಯೂಜಿಲೆಂಡ್ ತಂಡವು ಮಂಗಳವಾರ ಇಲ್ಲಿ ನಡೆದ ಟೆಸ್ಟ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಒಂದು ರನ್ ಅಂತರದ ರೋಚಕ ಜಯ ಸಾಧಿಸಿತು.

ಟೆಸ್ಟ್ ಕ್ರಿಕೆಟ್‌ನಲ್ಲಿ ಫಾಲೋ ಆನ್ ಮಾಡಿಯೂ ಗೆದ್ದ ನಾಲ್ಕನೇ ತಂಡ ನ್ಯೂಜಿಲೆಂಡ್ ಆಗಿದೆ. ಇಂಗ್ಲೆಂಡ್ (1894 ಹಾಗೂ 1981) ಮತ್ತು ಭಾರತ (2001) ಈ ಹಿಂದೆ ಫಾಲೋ ಆನ್ ಮಾಡಿದ ಪಂದ್ಯಗಳಲ್ಲಿ ಗೆದ್ದು ದಾಖಲೆ ಬರೆದಿದ್ದವು. ಅದೇ ರೀತಿ ಫಾಲೋ ಆನ್‌ನಲ್ಲಿ 1 ರನ್ ಅಂತರದಿಂದ ಗೆದ್ದಿದ್ದ ವೆಸ್ಟ್ ಇಂಡೀಸ್ ಸಾಧನೆಯನ್ನೂ ಕೇನ್ ವಿಲಿಯಮ್ಸನ್ ಬಳಗ ಸರಿಗಟ್ಟಿತು.

ಸರಣಿಯ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಸೋತಿತ್ತು. ಆದರೆ ಎರಡನೇ ಪಂದ್ಯದಲ್ಲಿ ಅಮೋಘ ರೀತಿಯಲ್ಲಿ ಪುಟಿದೆದ್ದಿತು. ವೆಲ್ಲಿಂಗ್ಟನ್‌ನ ಬೇಸಿನ್ ರಿಸರ್ವ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಆತಿಥೇಯ ತಂಡವು 226 ರನ್‌ಗಳ ಮೊದಲ ಇನಿಂಗ್ಸ್ ಹಿನ್ನಡೆಯಿಂದಾಗಿ ಫಾಲೋ ಆನ್ ಮಾಡಿತ್ತು. ಕೇನ್ ವಿಲಿಯಮ್ಸನ್ ಶತಕದ ಬಲದಿಂದ ಕಿವೀಸ್ ತಂಡವು 258 ರನ್‌ಗಳ ಗುರಿಯನ್ನು ಇಂಗ್ಲೆಂಡ್‌ಗೆ ನೀಡುವಲ್ಲಿ ಯಶಸ್ವಿಯಾಯಿತು. ಸೋಮವಾರ ದಿನದಾಟದ ಅಂತ್ಯಕ್ಕೆ ಇಂಗ್ಲೆಂಡ್ 28 ರನ್‌ಗಳನ್ನು ಗಳಿಸಿತ್ತು.

ಪಂದ್ಯದ ಕೊನೆಯ ದಿನವಾದ ಮಂಗಳವಾರ 210 ರನ್ ಗಳಿಸುವ ವಿಶ್ವಾಸದಲ್ಲಿ ಇಂಗ್ಲೆಂಡ್ ಇತ್ತು. ಸ್ಟೋಕ್ಸ್ ಬಳಗವನ್ನು ಆಲೌಟ್ ಮಾಡುವ ಹುಮ್ಮಸ್ಸಿನಲ್ಲಿ ಕಿವೀಸ್ ಕೂಡ ಇತ್ತು. ಇದರಿಂದಾಗಿ ದಿನವಿಡೀ ರೋಚಕ ಹೋರಾಟ ನಡೆಯಿತು.

ಕಿವೀಸ್ ನಾಯಕ ಟಿಮ್ ಸೌಥಿ 3, ನೀಲ್ ವಾಗ್ನರ್ 4 ಹಾಗೂ ಮ್ಯಾಟ್ ಹೆನ್ರಿ ಎರಡು ವಿಕೆಟ್ ಗಳಿಸಿದರು. ಅದರಲ್ಲೂ ಹೆನ್ರಿ ಗಳಿಸಿದ ಇನಿಂಗ್ಸ್‌ನ ಕೊನೆಯ ವಿಕೆಟ್ ನಿರ್ಣಾಯಕವಾಯಿತು. ಫೀಲ್ಡಿಂಗ್‌ನಲ್ಲಿಯೂ ಮಿಂಚಿದ ನೀಲ್ ಮೂರು ಕ್ಯಾಚ್ ಪಡೆದರು. ಇಂಗ್ಲೆಂಡ್ ತಂಡದ ಬ್ಯಾಟರ್ ಜೋ ರೂಟ್ (95 ರನ್) ಅವರ ಆಟ ವ್ಯರ್ಥವಾಯಿತು.


ನ್ಯೂಜಿಲೆಂಡ್ ತಂಡದ ನೀಲ್ ವ್ಯಾಗ್ನರ್ ಸಂಭ್ರಮ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 87.1 ಓವರ್‌ಗಳಲ್ಲಿ 8ಕ್ಕೆ435. ನ್ಯೂಜಿಲೆಂಡ್: 53.2 ಓವರ್‌ಗಳಲ್ಲಿ 209. ಎರಡನೇ ಇನಿಂಗ್ಸ್:162.3 ಓವರ್‌ಗಳಲ್ಲಿ 483. ಇಂಗ್ಲೆಂಡ್: 74.2 ಓವರ್‌ಗಳಲ್ಲಿ 256 (ಜಾಕ್ ಕ್ರಾಲಿ 24, ಬೆನ್ ಡೆಕೆಟ್ 33, ಜೋ ರೂಟ್ 95, ಬೆನ್ ಸ್ಟೋಕ್ಸ್ 33, ಬೆನ್ ಫೋಕ್ಸ್ 35, ಟಿಮ್ ಸೌಥಿ 45ಕ್ಕೆ3, ಮ್ಯಾಟ್ ಹೆನ್ರಿ 75ಕ್ಕೆ2, ನೀಲ್ ವಾಗ್ನರ್ 62ಕ್ಕೆ4) ಫಲಿತಾಂಶ: ನ್ಯೂಜಿಲೆಂಡ್ ತಂಡಕ್ಕೆ 1 ರನ್ ಜಯ.